ಸಂಪುಟ: 38 ಸಂಚಿಕೆ: 11 | ಜನವರಿ 2026
ಬೆಲೆ: ರೂ. 7/-

# ಕಾರ್ಮಿಕ ದೃಷ್ಟಿಕೋನ

ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ-ಕಮ್ಯುನಿಸ್ಟ್ | SUCI(C)
ಕರ್ನಾಟಕ ರಾಜ್ಯ ಸಮಿತಿಯ ಮಾಸಿಕ ಮುಖಪತ್ರಿಕೆ

ಒಳ ಪುಟಗಳಲ್ಲಿ............

ನಾಲ್ಕು ಕಾರ್ಮಿಕ ಸಂಹಿತೆಗಳು ಮತ್ತು ರೈತ ವಿರೋಧಿ ನೀತಿಗಳನ್ನು ಹಿಂಪಡೆಯಿರಿ!!----3
ಇಂಡಿಗೋ ಬಿಕ್ಕಟ್ಟು : ಖಾಸಗೀಕರಣದ ಹುನ್ನಾರ----4
ಸರ್ಕಾರಿ ಶಾಲೆಗಳ ಧ್ವಂಸಕ್ಕಾಗಿ ಕೆ.ಪಿ.ಎಸ್ ಮ್ಯಾಗ್ನೆಟ್ ಯೋಜನೆ!------------5
ವಿದ್ಯಾರ್ಥಿ-ಪೋಷಕರ 'ಬೆಳಗಾವಿ ಚಲೋ'!--------6
ದ್ವೇಷ ತಡೆಗಟ್ಟಲು ಇನ್ನೊಂದು ಕಾನೂನು ಅನಿವಾರ್ಯವೇ?------------------7
ನಿಜವಾದ ದೇಶಪ್ರೇಮ, ನಿಜವಾದ ರಾಷ್ಟ್ರವಾದ ಅಂದರೆ ಏನು?-----------8
ಹಿರಿಯ ಸಾಹಿತಿ ಡಾ.ಸಿದ್ಧಲಿಂಗ ಪಟ್ಟಣಶೆಟ್ಟಿ ಅಭಿನಂದನಾ ಕಾರ್ಯಕ್ರಮ------------------9

## "ದಾಳಿಕೋರ ಸಾಮ್ರಾಜ್ಯಶಾಹಿ ಅಮೇರಿಕದ ದುರಾಕ್ರಮಣ : "ವೆನೆಝುವೆಲಾದಿಂದ ಕೈ ತೆಗೆ"

ಜ.3ರ ಮಧ್ಯರಾತ್ರಿ ವೆನೆಝುವೆಲಾದ ಮೇಲೆ ಮಿಲಿಟರಿ ದಾಳಿ ನಡೆಸಿ ಅಲ್ಲಿನ ಚುನಾಯಿತ ಅಧ್ಯಕ್ಷರನ್ನು ಅಪಹರಿಸಿದ ಅಮೇರಿಕದ ಸಾಮ್ರಾಜ್ಯಶಾಹಿ ಸರ್ಕಾರದ ಯುದ್ಧಕೋರತನದ ವಿರುದ್ಧ ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ(ಕಮ್ಯುನಿಸ್ಟ್) ಪಕ್ಷವು ದೇಶದಾದ್ಯಂತ ಪ್ರತಿಭಟನೆಗಳನ್ನು ನಡೆಸಿತು. ಅಂತರರಾಷ್ಟ್ರೀಯ ಕಾನೂನು, ನೀತಿ ಸಂಹಿತೆಗಳನ್ನು ಮನಬಂದಂತೆ ಧಿಕ್ಕರಿಸಿದ ಅಮೇರಿಕದ ದುಂಡಾವರ್ತಿಯ ವಿರುದ್ಧ ಎಸ್‌ಯುಸಿಐ(ಸಿ) ಪಕ್ಷದ ಕೇಂದ್ರ ಸಮಿತಿಯು ನಂತರ ಜ.6ರಿಂದ 13ರವರೆಗೆ ಅಖಿಲ ಭಾರತ ಪ್ರತಿಭಟನಾ ಸಪ್ತಾಹವನ್ನು ಆಚರಿಸಲು ಕರೆ ನೀಡಿತು. ಅದರ ಅಂಗವಾಗಿ ಪ್ರತಿಭಟನೆಗಳನ್ನು ಹಮ್ಮಿಕೊಳ್ಳಲಾಗಿತ್ತು.

ವೆನೆಝುವೆಲಾದ ಅಧ್ಯಕ್ಷ ನಿಕೊಲಸ್ ಮಡೂರೊ ಮಾದಕ ದ್ರವ್ಯಗಳ ಕಳ್ಳಸಾಗಣೆ ಮಾಡಿಸುತ್ತಿದ್ದಾರೆ ಎಂದು ಅಮೇರಿಕ ತನ್ನ ದಾಳಿಗೆ ಕಳ್ಳನಿಗೊಂದು ಪಿಳ್ಳೆ ನೆವ ನೀಡಿದೆ. ಅಮೇರಿಕ ಈ ಹಿಂದೆ, ಇರಾಕಿನಲ್ಲಿ ಸಮೂಹ ವಿನಾಶದ ಅಸ್ತ್ರಗಳಿವೆ ಎಂದು ಆರೋಪಿಸಿ, ವರ್ಷಗಟ್ಟಲೆ ಯುದ್ಧ ಹೂಡಿ ಅಲ್ಲಿನ ಅಧ್ಯಕ್ಷ ಸದ್ದಾಂ ಹುಸೇನ್‌ರನ್ನು ಪದಚ್ಯುತಗೊಳಿಸಿ ನಂತರ ಬಂಧಿಸಿ ಕಗ್ಗೊಲೆ ಮಾಡಿತು. ಆದರೆ, ಇದುವರೆಗೂ ಯಾವುದೇ ಅಂತಹ ಶಸ್ತ್ರಾಸ್ತ್ರಗಳು ದೊರೆತಿಲ್ಲ. ಈಗ ಅಲ್ಲಿ ಜನತಂತ್ರದ ಬದಲಿಗೆ ಮತ್ತಷ್ಟು ಅರಾಜಕತೆ, ಇಸ್ಲಾಮಿ ಮತೀಯವಾದ ಬೆಳೆದಿದೆ. ಆಫ್ಘಾನಿಸ್ತಾನದಲ್ಲಿ ಭಯೋತ್ಪಾದನೆಯ ವಿರುದ್ಧ ಯುದ್ಧ ಸಾರಿ, ಈಗ ಅಲ್ಲಿ ಮತ್ತೆ ತಾಲಿಬಾನ್ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ. ಸಿರಿಯಾದ ಚುನಾಯಿತ ಸರ್ಕಾರವನ್ನು ಉರುಳಿಸಿ ಆ ದೇಶವನ್ನು ಐಸಿಸ್ ಕೈಗೆ ಕೊಡಲಾಗಿದೆ. ಇಂತಹ ಇತಿಹಾಸವಿರುವ ಅಮೇರಿಕ ಈಗ ವೆನೆಝುವೆಲಾದಲ್ಲಿ ಜನತಂತ್ರವನ್ನು ಸ್ಥಾಪಿಸಲು ಹೊರಟಿದೆ!!

ಜಗತ್ತಿನಲ್ಲೇ ಅತಿಹೆಚ್ಚು ಕಚ್ಚಾತೈಲದ ನಿಕ್ಷೇಪ(ಅಂದಾಜು 303 ಶತಕೋಟಿ ಬ್ಯಾರೆಲ್)ಗಳನ್ನು ವೆನೆಝುವೆಲಾ ಹೊಂದಿದೆ. 1998ರಲ್ಲಿ ಅಧಿಕಾರಕ್ಕೆ ಬಂದ ಹೋರಾಟಗಾರ ಹ್ಯೂಗೋ ಚಾವೇಜ್ ಅಮೇರಿಕ ಸೇರಿದಂತೆ ಎಲ್ಲ ವಿದೇಶಿ ಕಂಪನಿಗಳನ್ನು ನಿಷೇಧಿಸಿ, ಎಲ್ಲ ತೈಲೋದ್ಯಮವನ್ನು ರಾಷ್ಟ್ರೀಕರಣ ಮಾಡಿದರು. ಅವರ ನಂತರ 2013ರಲ್ಲಿ ಅಧಿಕಾರಕ್ಕೆ ಬಂದ ನಿಕೊಲಸ್ ಮಡೂರೊ ಅವರು ಅದೇ ನೀತಿಗಳನ್ನು ಮುಂದುವರಿಸಿದ್ದಾರೆ. ಅಂದಿನಿಂದಲೂ ಅಮೇರಿಕವು ವೆನೆಝುವೆಲಾ ವಿರುದ್ಧ ಕತ್ತಿ ಮಸೆಯುತ್ತಲೇ ಇದೆ. ರಾಜಕೀಯವಾಗಿ ಸೋಲಿಸಲು ವಿವಿಧ ತಂತ್ರಗಳನ್ನು ಮಾಡಿತು, ಆರ್ಥಿಕ ದಿಗ್ಬಂಧನಗಳನ್ನು ವಿಧಿಸಿತು, ಆದರೆ, ಅದರಿಂದ ಮಡೂರೋ ಅಲುಗಾಡಲಿಲ್ಲ. ಆದರೆ ದೇಶ ಸಾಕಷ್ಟು ಸಂಕಷ್ಟಗಳನ್ನು 2ನೇ ಪುಟಕ್ಕೆ




ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆದ ಎಸ್‌ಯುಸಿಐ(ಸಿ) ಪ್ರತಿಭಟನೆಯ ನೇತೃತ್ವವನ್ನು ಪಕ್ಷದ ರಾಜ್ಯ ಸೆಕ್ರೆಟೆರಿಯಟ್ ಸದಸ್ಯರಾದ ಕಾಮ್ರೇಡ್ ಎಂ. ಎನ್. ಶ್ರೀರಾಮ್ ವಹಿಸಿದ್ದರು.



ಧಾರವಾಡದಲ್ಲಿ ನಡೆದ ಎಡಪಕ್ಷಗಳ ಜಂಟಿ ಪ್ರತಿಭಟನೆಯಲ್ಲಿ ಪಕ್ಷದ ರಾಜ್ಯ ಸೆಕ್ರೆಟೆರಿಯಟ್ ಸದಸ್ಯರಾದ ಕಾಮ್ರೇಡ್ ಎಂ.ಶಶಿಧರ್ ನೇತೃತ್ವದಲ್ಲಿ ಪಕ್ಷವು ಭಾಗವಹಿಸಿತ್ತು.

## ಭರವಸೆ ಮಂಕಾಗಿದೆ – ನಿಟ್ಟುಸಿರೇ ಬದುಕಾಗಿದೆ:
## ಇನ್ನು ಹೊಸ ವರುಷದ ಸಂಭ್ರಮವೆಂತು?

ಕಳೆದೊಂದು ಮಾಸದಲ್ಲಿ ಏನೆಲ್ಲಾ ನಡೆದು ಹೋಗಿದೆ. ನಮ್ಮ ರಾಜ್ಯದಲ್ಲಿ ಒಂದು ಜವಾಬ್ದಾರಿಯುತ ಸರ್ಕಾರವು ಇದೆಯೇ ಎನ್ನುವ ಪ್ರಶ್ನೆಯನ್ನು ನಮಗೆ ನಾವೇ ಕೇಳಿಕೊಳ್ಳುತ್ತಲೇ ಇರುವಂತೆ ಆಗಿದೆ. ಏಕೆಂದರೆ, ಅಂತಹ ವಿದ್ಯಮಾನಗಳನ್ನು ರಾಜ್ಯದ ಎಲ್ಲ ಪ್ರಜ್ಞಾವಂತ ಜನತೆ ಗಮನಿಸುತ್ತಲೇ ಇದ್ದಾರೆ. ಬೆಳಗಾವಿಯಲ್ಲಿ ಚಳಿಗಾಲದ ಅಧಿವೇಶನವು ನಡೆದ 10 ದಿನಗಳೂ ಸಹ ಹತ್ತು ಹಲವಾರು ಪ್ರತಿಭಟನೆಗಳು ನಡೆಯುತ್ತಲೇ ಇದ್ದವು. ಸರ್ಕಾರವು ತಾನೇ ಘಂಟಾಘೋಷವಾಗಿ ಘೋಷಿಸಿ ನೀಡಿದ್ದ ಭರವಸೆಗಳನ್ನು ತಾನೇ ಗಾಳಿಗೆ ತೂರಿ, ಅವನ್ನು ಈಡೇರಿಸದಿದ್ದಕ್ಕೆ ಕಿಂಚಿತ್ತು ನಾಚಿಕೆಯನ್ನೂ ಪಡದೆ, ಮತ್ತೆ ಮಾಧ್ಯಮಗಳ ಮುಂದೆ ಬಂದು ಹೊಸ ಆಶ್ವಾಸನೆಗಳನ್ನು ಭಂಡತನದಿಂದ ನೀಡುತ್ತಿದ್ದದ್ದು ಜನರಲ್ಲಿ ಆಕ್ರೋಶ ಹುಟ್ಟಿಸದಿದ್ದರೆ ಹೇಗೆ? ಅದು ಮನುಷ್ಯ ಸಹಜ ಗುಣವಾಗುತ್ತದೆಯೇ?

### ಹುಸಿಯಾದ ಮಾತು

10 ತಿಂಗಳ ಹಿಂದೆ ರಾಜ್ಯದ 40,000 ಆಶಾ ಕಾರ್ಯಕರ್ತೆಯರಿಗೆ ದುಡಿಮೆಗೆ ತಕ್ಕಂತೆ ಅವರಿಗೆ ಸಲ್ಲಬೇಕಾಗಿರುವ ಹೆಚ್ಚುವರಿ ಹಣದ ಪಾವತಿಯ ಬಗ್ಗೆ ಸರ್ಕಾರವು ಕೈ ಕೊಟ್ಟಿದೆ. 'ಸರ್ಕಾರಿ ಶಾಲೆಗಳನ್ನು ಕಾಪಾಡುತ್ತೇವೆ, ಯಾವುದನ್ನೂ ಮುಚ್ಚುವುದಿಲ್ಲ' ಎಂದ ತನ್ನ ಮಾತನ್ನು ಉಳಿಸಿಕೊಂಡಿಲ್ಲ ಮಾತ್ರವಲ್ಲ, 'ಕೆಪಿಎಸ್ ಮ್ಯಾಗ್ನೆಟ್ ಶಾಲೆಗಳು ಎಂಬ ಹೆಸರಿನಲ್ಲಿ ಅತ್ಯುತ್ತಮವಾದ ಆಧುನಿಕ ಶಾಲೆಗಳನ್ನು ಸ್ಥಾಪಿಸುತ್ತೇವೆ' ಎಂದು ಜನರನ್ನು ಮರಳು ಮಾಡುವ ಮಾತನಾಡುತ್ತಲೇ, ಅದೇ ನೆಪದಡಿಯಲ್ಲಿ ಸರ್ಕಾರಿ ಕನ್ನಡ ಶಾಲೆಗಳನ್ನು ಮುಚ್ಚಿ ಬಡವರು ಮತ್ತು ತುಳಿತಕ್ಕೊಳಗಾದವರನ್ನು ಶಿಕ್ಷಣದಿಂದ ವಂಚಿಸಿ ಅವರನ್ನು ಇನ್ನಷ್ಟು ದಮನಿಸುವ ನೀಲಿನಕ್ಷೆಯನ್ನು ಸರ್ಕಾರವು ಕೈಯಲ್ಲಿ ಹಿಡಿದು ಕೂತಿದೆ. ಕಬ್ಬು ಬೆಳೆಗಾರರು ಸದ್ಯದ ಬೆಲೆಗಿಂತ ಕೇವಲ ರೂ.1000 ಅಧಿಕ ಬೆಲೆಯನ್ನು ನಿಗದಿ ಮಾಡಲು ಕೋರಿದರೆ ಸರ್ಕಾರವು ಮುಖ ತಿರುಗಿಸಿಕೊಂಡಿತ್ತು. ಕನಿಷ್ಠ ಬೆಂಬಲ ಬೆಲೆಗಾಗಿ ಕಾಯ್ದೆಯನ್ನು ರೈತರು ಆಗ್ರಹಿಸಿದರೆ ಅದನ್ನು ತನ್ನ ಕಿವಿಯ ಮೇಲೆ ಹಾಕಿಕೊಳ್ಳಲೇ ಇಲ್ಲ. ಇವುಗಳ ಜೊತೆಯಲ್ಲಿ ಲಕ್ಷಾಂತರ ಹುದ್ದೆಗಳು ಖಾಲಿ ಇದ್ದರೂ(ಅಧಿಕೃತವಾಗಿ 2.84ಲಕ್ಷ) ಅವನ್ನು ತುಂಬಿಕೊಳ್ಳಲಾಗುವುದು ಎಂದು ಪದೇಪದೇ ತಾನೇ ಆಶ್ವಾಸನೆ ನೀಡಿದ್ದರೂ ಸಹ ಯಾವುದೇ ನಿಖರವಾದ ನೇಮಕಾತಿ ಕಾರ್ಯಕ್ರಮವಾಗಲಿ ಹಾಗೂ ನೇಮಕಾತಿ ವೇಳಾಪಟ್ಟಿಯನ್ನಾಗಲಿ ಘೋಷಿಸದಿದ್ದರೆ ಹೇಗೆ! ಧಾರವಾಡ, ವಿಜಯಪುರ, ಕಲಬುರಗಿ, ಬೆಳಗಾವಿಗಳಲ್ಲಿ ಉದ್ಯೋಗಾಕಾಂಕ್ಷಿ ಯುವಜನತೆ ಸಂಘಟಿತ ಪ್ರತಿಭಟನೆಗಳನ್ನು ಕೈಗೊಂಡು, ಪದೇಪದೇ ಬಂಧನಕ್ಕೊಳಗಾದ ನಂತರ ಇತ್ತೀಚೆಗೆ ಬೆಳಗಾವಿ ಅಧಿವೇಶನದಲ್ಲಿ 56 ಸಾವಿರ ಹುದ್ದೆಗಳನ್ನು ಹಂತಹಂತವಾಗಿ ತುಂಬಿಕೊಳ್ಳಲಾಗುವುದು ಎಂದು ಸರ್ಕಾರವು ಇನ್ನೊಂದು ಆಶ್ವಾಸನೆಯನ್ನು ನೀಡಿದೆ. ಸರ್ಕಾರದಿಂದ ಮತ್ತೆಮತ್ತೆ ಏಮಾರಿರುವ ರಾಜ್ಯದ ಯುವಜನತೆ ಈ ಬಾರಿ ಹೋರಾಟವನ್ನು ಕೈಬಿಟ್ಟಿಲ್ಲ ಮತ್ತು ಕೇವಲ ಆಶ್ವಾಸನೆ ಅಥವಾ ಭರವಸೆಯಷ್ಟೇ ಅಲ್ಲ, ಸರ್ಕಾರದಿಂದ ಅಧಿಸೂಚನೆಯನ್ನು ಮತ್ತು ನೇಮಕಾತಿಗಾಗಿ ಕಾಲಮಿತಿಯುಳ್ಳ ನಿರ್ದಿಷ್ಟ ವೇಳಾಪಟ್ಟಿಯನ್ನೂ ಸಹ ಸರಿಯಾಗಿಯೇ ಆಗ್ರಹಿಸುತ್ತಿದ್ದಾರೆ. ಇಲ್ಲಿಯವರೆಗೂ ಯಾವುದೇ ಜನಪರ ಕಾರ್ಯಕ್ರಮ ಅಥವಾ ಯೋಜನೆಯ ಮಾತು ಬಂದರೆ ಹಣವೆಲ್ಲಾ ಗ್ಯಾರಂಟಿ ಯೋಜನೆಗಳಿಗೆ ವ್ಯಯವಾಗುತ್ತಿದೆ ಎನ್ನುತ್ತಿದ್ದ ಸರ್ಕಾರವು ಈಗ ಒಳಮೀಸಲಾತಿಯ ವಿವಾದವು ಹೈಕೋರ್ಟ್ ಮೆಟ್ಟಿಲೇರಿದೆ, ಆದ್ದರಿಂದ ಶೇ.56ರಷ್ಟಕ್ಕೆ ಏರಿಕೆ ಮಾಡಿರುವ ಮೀಸಲಾತಿಯ ಪ್ರಶ್ನೆಯು ನ್ಯಾಯಾಲಯದಲ್ಲಿ ಇತ್ಯರ್ಥವಾಗುವವರೆಗೆ ನೇಮಕಾತಿ ಸಾಧ್ಯವಿಲ್ಲ ಎನ್ನುತ್ತಿದೆ. ಅಂತೂ ಕುಂಟು ನೆಪಗಳು ಬೇಕಾದಷ್ಟು ಸಿಗುತ್ತವೆ.

### ಸ್ತ್ರೀ ಸುರಕ್ಷತೆ-ದ್ವೇಷ-ಮರ್ಯಾದೆಗೇಡು ಹತ್ಯೆ

ಇನ್ನು ರಾಜ್ಯದಲ್ಲಿ ಸ್ತ್ರೀ ಸುರಕ್ಷತೆಯ ಪರಿಸ್ಥಿತಿಯು ಆತಂಕಕಾರಿ ಮಟ್ಟವನ್ನು ತಲುಪಿದೆ. ಅತ್ಯಾಚಾರ, ಕಗ್ಗೊಲೆಗಳ ಸಂಖ್ಯೆಗಳು ಅಪಾರವಾಗಿ ಏರುತ್ತಲೇ ಇವೆ. ಈಗಂತೂ ಮರ್ಯಾದೆಯ ಹೆಸರಿನ 'ಮರ್ಯಾದೆಗೇಡು ಹತ್ಯೆ'ಗಳನ್ನು ನಡೆಸುತ್ತಿರುವ ಸಮಾಜದ ಬಲಿಷ್ಠರ ಅಟ್ಟಹಾಸಕ್ಕೆ ಕಡಿವಾಣ ಹಾಕಲು ಸರ್ಕಾರವು ತನ್ನ ಬದ್ಧತೆಯನ್ನು ತೋರಿಲ್ಲ. ಅಂತಹ ಕ್ರೌರ್ಯದ ಕೃತ್ಯಗಳಿಗೆ ಬಲಿಯಾದವರ ಪಟ್ಟಿಗೆ ಇತ್ತೀಚಿನ ಸೇರ್ಪಡೆ ಮುಗ್ಧೆ ಮಾನ್ಯ.

ರಾಜ್ಯ ಸರ್ಕಾರವು ಜನಮತವನ್ನು ಆಲಿಸುವ ಮನಸ್ಸನ್ನು ಹೊಂದಿಲ್ಲ. ದ್ವೇಷ ಭಾಷಣ ಮತ್ತು ದ್ವೇಷಾಪರಾಧ ತಡೆ ಮಸೂದೆಯು ಈಗ ಹೊಸದೊಂದು ಚರ್ಚೆಯನ್ನು ಹುಟ್ಟುಹಾಕಿದೆ. ಮಸೂದೆಯಲ್ಲಿ ಕೋಮುವಾದಿ-ಜಾತಿವಾದಿ ಮನಸ್ಥಿತಿಯುಳ್ಳವರನ್ನು ಮಟ್ಟ ಹಾಕಲು ಯಾವುದೇ ನಿರ್ದಿಷ್ಟವಾದ ಮತ್ತು ಸ್ಪಷ್ಟವಾದ ವ್ಯಾಖ್ಯಾನಗಳಾಗಲಿ ಅಥವಾ ಕ್ರಮಗಳಾಗಲಿ ಇಲ್ಲ. ಕೇವಲ ಕೆಲವು ಅಸ್ಪಷ್ಟ ಅಂಶಗಳನ್ನು ತುಂಬಿ 'ಅಗತ್ಯಕ್ಕೆ ತಕ್ಕಂತೆ' ಅದನ್ನು ವ್ಯಾಖ್ಯಾನ ಮಾಡಿಕೊಳ್ಳಬಹುದಾದ ಸಾಧ್ಯತೆ ಉಳಿಸಿಟ್ಟಿದ್ದಾರೆ ಎನ್ನುವ ಆಕ್ಷೇಪಣೆಯಲ್ಲಿ ಸತ್ಯವಿಲ್ಲದಿಲ್ಲ. ಇದೇ ಮಾತು ಈಗ ತಾನೆ ದಿಢೀರನೇ ತಯಾರಾಗಿರುವ 'ಮರ್ಯಾದೆಗೇಡು ಹತ್ಯೆ' ಮಸೂದೆಗೂ ಅನ್ವಯವಾಗುತ್ತದೆ. ಅಂದರೆ, ರಾಜ್ಯ ಸರ್ಕಾರವು ಕೇವಲ ಮಾತಿನ ಅಬ್ಬರದ ಅಲೆಯಲ್ಲಿ (Headline management) ತೇಲಿಕೊಂಡು ಅದರಲ್ಲೇ ಜನರನ್ನು ಏಮಾರಿಸುತ್ತಾ ತನಗೆ 'ವಿವಿಧ ರೀತಿಯ ಅನುಕೂಲ'ಗಳನ್ನು ಹೊತ್ತುತರುವ ಪ್ರಾಜೆಕ್ಟ್‌ಗಳ ಬಗ್ಗೆ ಮಾತ್ರ ಅತೀವ ಉತ್ಸುಕತೆ ಹೊಂದಿರುವಂತಿದೆ. 2ನೇ ಪುಟಕ್ಕೆ

## ಇನ್ನು ಹೊಸ ವರುಷದ ಸಂಭ್ರಮವೆಂತು?

1ನೇ ಪುಟದಿಂದ 5 ಗ್ಯಾರಂಟಿಗಳಿಂದಾಗಿ ಯಾವುದೇ ಜನೋಪಯೋಗಿ ಯೋಜನೆಗೂ ಹಣವಿಲ್ಲ ಎನ್ನುವ ನೆಪವನ್ನು ಮುಂದು ಮಾಡಿಕೊಂಡಿರುವ ಸರ್ಕಾರದ ಬಳಿ ಬೆಂಗಳೂರನ್ನು ಬಗೆದು ಸುರಂಗ ತೋಡಲು, ಆರ್ಥಿಕವಾಗಿ ಹಾಗೂ ಪರಿಸರದ ದೃಷ್ಟಿಯಿಂದ ವಿನಾಶಕಾರಿಯಾಗಿರುವ 'ಸುರಂಗ ರಸ್ತೆ' ಯೋಜನೆಗಾಗಿ ರೂ.20,000 ಕೋಟಿಗೂ ಹೆಚ್ಚು ಹಣ ಲಭ್ಯವಿದೆ. ಜನಸಾಮಾನ್ಯರಲ್ಲದೆ, ನಗರ ಸಾರಿಗೆ, ಭೂವಿಜ್ಞಾನ, ಪರಿಸರ, ಹಣಕಾಸು – ಈ ಎಲ್ಲ ವಿಭಾಗಗಳ ತಜ್ಞರ ಅಭಿಪ್ರಾಯಗಳು ಈ ಯೋಜನೆಗೆ ವಿರುದ್ಧವಿದ್ದರೂ ಸಹ ಅವೆಲ್ಲವನ್ನೂ ಕಡೆಗಣಿಸಿ ಸುರಂಗ ರಸ್ತೆ ನಿರ್ಮಾಣಕ್ಕೆ ಸರ್ಕಾರವು ತುದಿಗಾಲಲ್ಲಿ ನಿಂತಿದೆ. ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಬಲಪಡಿಸಿ, ಆ ಮೂಲಕ ಖಾಸಗಿ ವಾಹನ ಬಳಕೆಯನ್ನು ಕಡಿಮೆ ಮಾಡಿ ರಸ್ತೆಗಳಲ್ಲಿ ವಾಹನದಟ್ಟಣೆಯನ್ನು ಇಳಿಸಬಹುದಾಗಿರುವ ಹಲವಾರು ಉತ್ತಮ ಮತ್ತು ಅಗ್ಗವಾದ ಪರಿಹಾರಗಳು ಸರ್ಕಾರಕ್ಕೆ ಬೇಕಿಲ್ಲ. ರಾಜ್ಯ ಸರ್ಕಾರಕ್ಕೆ ಅತ್ಯಂತ ದುಬಾರಿಯಾಗಿರುವ, ತೆರಿಗೆ ಹಣವನ್ನು ದುರ್ಬಳಕೆ ಮಾಡಿಕೊಳ್ಳಲು ಅವಕಾಶ ಕಲ್ಪಿಸುವ ಯೋಜನೆಗಳೇ ಬೇಕಾಗಿವೆ. ಇನ್ನು ಎತ್ತಿನಹೊಳೆ ಯೋಜನೆಯಾಗಲಿ ಅಥವಾ ಮಹದಾಯಿಯಾಗಲಿ ಚುನಾವಣಾ ಸಮಯದಲ್ಲಿ ರಾಜಕೀಯ ಮಾಡಲು ಪ್ರಚಾರದ ಪರಿಕರಗಳು ಮಾತ್ರ ಆಗಿವೆ.

### ಶಿಕ್ಷಣವು ವ್ಯಾಪಾರದ ಸರಕು – ಸಾರ್ವಜನಿಕ ಶಿಕ್ಷಣಕ್ಕೆ ತಿಲಾಂಜಲಿ

ಶಿಕ್ಷಣ ಕ್ಷೇತ್ರದ ದುರವಸ್ಥೆಯಲ್ಲಿ ಸರ್ಕಾರದ ನಿಷ್ಕಾಳಜಿ ಕಣ್ಣಿಗೆ ರಾಚುತ್ತಿದೆ. ಅಲ್ಲಿ ಸಾವಿರಾರು ಹುದ್ದೆಗಳು ಖಾಲಿ ಇವೆ, ಲಕ್ಷಾಂತರ ಮಕ್ಕಳಿಗೆ ಇನ್ನೂ ಸಹ ಗುಣಮಟ್ಟದ ಶಿಕ್ಷಣ ಲಭ್ಯವಿಲ್ಲ. ಇವರೆಡೇ ಸಮಸ್ಯೆಗಳಿದ್ದಿದ್ದರೆ ಇವು ಎಲ್ಲ ಕಾಲಕ್ಕೂ ಇದ್ದದ್ದೇ ಎನ್ನಬಹುದಿತ್ತೇನೋ! ಆದರೆ, ಈಗ ಸಾವಿರಾರು ಸಂಖ್ಯೆಯಲ್ಲಿ ಸರ್ಕಾರಿ ಕನ್ನಡ ಶಾಲೆಗಳನ್ನು ಮುಚ್ಚಲಾಗುತ್ತಿದೆ. ಈ ಶಾಲೆ ಮುಚ್ಚುವ ಪ್ರಕ್ರಿಯೆಯ ಹೆಸರೇ 'ಕೆಪಿಎಸ್ ಮ್ಯಾಗ್ನೆಟ್ ಶಾಲೆಗಳ ಆರಂಭ ಮತ್ತು ಅವುಗಳೊಂದಿಗೆ ಇತರ ಶಾಲೆಗಳ ವಿಲೀನ' ಎನ್ನುವುದು. ಈ ವಿಲೀನ ಅಥವಾ ಮುಚ್ಚುವಿಕೆ ಪ್ರಕ್ರಿಯೆಗೆ ಚಾಲನೆ ನೀಡಿರುವ ರಾಜ್ಯ ಸರ್ಕಾರವು ಕಳೆದ ಡಿ.30ರಂದು ನೀಡಿರುವ ನಿರ್ದೇಶನದಲ್ಲಿ 800 ಮ್ಯಾಗ್ನೆಟ್ ಶಾಲೆಗಳನ್ನು ಸ್ಥಾಪಿ(ಸಾವಿರಾರು ಶಾಲೆಗಳನ್ನು ಮುಚ್ಚಲು)ಸಲು ತಾನು ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್(ಎಡಿಬಿ)ನಿಂದ ರೂ.2500 ಕೋಟಿ ಸಾಲವನ್ನು ಪಡೆದಿರುವುದನ್ನು ಘಂಟಾಘೋಷವಾಗಿ ಹೇಳಿಕೊಂಡಿದೆ. ಈಗಿರುವ ಶಾಲೆಗಳನ್ನು ಮುಚ್ಚಿ ದುಡಿಯುವ ಜನತೆಯ ಮಕ್ಕಳಿಗೆ ಅದರಲ್ಲೂ ನಿರ್ದಿಷ್ಟವಾಗಿ ಹೆಣ್ಣುಮಕ್ಕಳಿಗೆ, ಸಮಾಜದಲ್ಲಿ ಕಡೆಗಣಿಸಲ್ಪಟ್ಟಿರುವ ಸಮುದಾಯಗಳ ಮಕ್ಕಳಿಗೆ ಶಾಶ್ವತವಾಗಿ ಶಿಕ್ಷಣದ ಸಾಧ್ಯತೆಯನ್ನು ಕಸಿದುಕೊಳ್ಳಲಿದೆ. ಹೀಗೆ ಕೆಪಿಎಸ್ ಮ್ಯಾಗ್ನೆಟ್ ಶಾಲೆ ಯೋಜನೆಯು ರಾಜ್ಯದಲ್ಲಿ ಶಿಕ್ಷಣದ ಗುಣಮಟ್ಟವನ್ನು ಎತ್ತರಿಸುವ ಅಥವಾ ಸರ್ಕಾರಿ ಶಾಲೆಗಳನ್ನು ಉನ್ನತೀಕರಿಸುವ ಯೋಜನೆಯಲ್ಲದೆ, ಅಲ್ಪಸ್ವಲ್ಪ ಅಳಿದುಳಿದಿರುವ ಶಿಕ್ಷಣವನ್ನೂ ನಾಶ ಮಾಡಿ, ಎಲ್ಲವನ್ನೂ ಖಾಸಗಿ ವಲಯಕ್ಕೆ ಧಾರೆ ಎರೆದುಕೊಟ್ಟು ಇಡೀ ಶಿಕ್ಷಣ ವ್ಯವಸ್ಥೆಯನ್ನೇ ಮಾರಿ ಹಾಕುವ ಹುನ್ನಾರವಾಗಿದೆ.

### ಅಧಿಕಾರದ ಗದ್ದುಗೆಗೆ ಕಿತ್ತಾಟ

ಎಲ್ಲೆಡೆ ಬಿಕ್ಕಟ್ಟು ತುಂಬಿ ರಾರಾಜಿಸುತ್ತಿರುವ ಈ ಸಂದರ್ಭದಲ್ಲಿ, ಮುಖ್ಯಮಂತ್ರಿ ಸ್ಥಾನಕ್ಕಾಗಿ ಜಟಾಪಟಿ ನಡೆಯುತ್ತಲೇ ಇದೆ. 2025ರ ನವೆಂಬರ್‌ನಲ್ಲಿ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರವು ತನ್ನಾಯುಷ್ಯದ ಅರ್ಧದಾರಿಯನ್ನು ಕ್ರಮಿಸುತ್ತಿದ್ದ ಕಾಲದಲ್ಲಿ ಅಧಿಕಾರ ಬದಲಾವಣೆಯ ಕಲರವ ಜೋರಾಯಿತು. ಅದನ್ನು 'ನವೆಂಬರ್ ಕ್ರಾಂತಿ' ಎಂದು ಕರೆದು ಮಾಧ್ಯಮಗಳು ಹುಯಿಲೆಬ್ಬಿಸಿದವು, ತಮ್ಮ ಟಿಆರ್‌ಪಿ ಹೆಚ್ಚಿಸಿಕೊಂಡವು ಅಷ್ಟೇ! ಜನಸಮಸ್ಯೆಗಳು ಸಹಿಸಲಸಾಧ್ಯವಾದಾಗ ಜನರಲ್ಲಿ ಅಶಾಂತಿ ಮೂಡುತ್ತಿರುವ ಸಂದರ್ಭಕ್ಕೆ ಸರಿಯಾಗಿ ಈ ಕುರ್ಚಿ ಕಾದಾಟದ ಕಥನ ಮುಗಿಯದ ಧಾರಾವಾಹಿಯಂತೆ ಹೊಸ ಕಂತಿನೊಂದಿಗೆ ಮತ್ತೆಮತ್ತೆ ಆರಂಭವಾಗುತ್ತಿದೆ.

ರಾಜ್ಯದ ಜನತೆ ಹೈರಾಣಾಗುತ್ತಿದ್ದಾರೆ. ಸಮಾಜದಲ್ಲಿ ಅಸಹನೆ, ಆಕ್ರೋಶ ಮಡುಗಟ್ಟುತ್ತಿದೆ. ಇದರ ಸೂಚನೆಯೂ ಸಹ ಸರ್ಕಾರದ ಬಳಿಯೇ ಇರಬೇಕು. ಆದ್ದರಿಂದಲೇ, 2023ರ ಮೇನಲ್ಲಿ ಅಧಿಕಾರಕ್ಕೆ ಬಂದಾಗಿನಿಂದ ಇಲ್ಲಿಯತನಕ ರಾಜ್ಯ ಸರ್ಕಾರವು ಒಂದೇಒಂದು ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ನಡೆಸಿಲ್ಲ. ಈ ಕುರಿತಂತೆ ರಾಜ್ಯ ಚುನಾವಣಾ ಆಯೋಗವೇ ರಾಜ್ಯ ಹೈಕೋರ್ಟ್‌ನಲ್ಲಿ ದಾವೆ ಹೂಡಿದ್ದರೂ ಸಹ ಬೆಂಗಳೂರು ಸೇರಿದಂತೆ ಇತರೆಲ್ಲೆಡೆಗಳಲ್ಲಿ ಚುನಾವಣೆ ನಡೆಸುವ ಉತ್ಸಾಹ ಸರ್ಕಾರದ ಬಳಿ ಇಲ್ಲದಿರಲು ಇದೇ ಬಲವಾದ ಕಾರಣವಾಗಿದೆ. ಸರ್ಕಾರದ ಸುಳ್ಳುಗಳು, ರಾಜಕೀಯ ಮೇಲಾಟಗಳಿಂದ ಬೇಸತ್ತಿರುವ ಜನರು ಕಾಂಗ್ರೆಸ್ ಪಕ್ಷವನ್ನು ಸೋಲಿಸುತ್ತಾರೆ ಎಂಬ ಭಯ ರಾಜ್ಯ ಸರ್ಕಾರವನ್ನು ಕಾಡುತ್ತಿದೆ. ಈ ಎಲ್ಲಾ ವಿಷಯಗಳ


> **"ಪ್ರತಿ ಕೆಲವು ವರ್ಷಗಳಿಗೊಮ್ಮೆ ಪಾರ್ಲಿಮೆಂಟ್(ವಿಧಾನಸಭೆ–ಸಂ.) ಮೂಲಕ ಜನರನ್ನು ತುಳಿಯಲು ಮತ್ತು ಶೋಷಿಸಲು ಆಡಳಿತ ವರ್ಗದ ಯಾರನ್ನು ಆರಿಸಬೇಕು ಎಂದು ನಿರ್ಧರಿಸುವುದೇ ಬಂಡವಾಳಶಾಹಿ ಸಂಸದೀಯವಾದದ ನಿಜವಾದ ಸಾರಾಂಶ. ಇದು ಕೇವಲ ಸಂವಿಧಾನಾತ್ಮಕ ರಾಜಪ್ರಭುತ್ವದ ಸಂಸದೀಯ ವ್ಯವಸ್ಥೆಯಲ್ಲಿ ಮಾತ್ರವಲ್ಲ, ಬಹುತೇಕ ಪ್ರಜಾತಾಂತ್ರಿಕ ಗಣರಾಜ್ಯಗಳಿಗೂ ಅನ್ವಯಿಸುತ್ತದೆ"**
> **– ಲೆನಿನ್ (ರಾಜ್ಯ ಮತ್ತು ಕ್ರಾಂತಿ)**

ಕುರಿತು ವಿರೋಧ ಪಕ್ಷವಾದ ಬಿಜೆಪಿಯು ಬಾಯುಪಚಾರದ ಮಾತುಗಳನ್ನು ಆಡುತ್ತಾ ಸಿಎಂ ಕುರ್ಚಿಯ ವಿಷಯವನ್ನೇ ದೊಡ್ಡದಾಗಿ ಮಾಡಿಕೊಂಡು ತನ್ನ ರಾಜಕೀಯ ಬೇಳೆ ಬೇಯಿಸಿಕೊಳ್ಳುವ ಉದ್ದೇಶವನ್ನು ಹೊಂದಿದೆ. ಏಕೆಂದರೆ, ಜನರ ಬದುಕಿನ ಎಲ್ಲ ವಿಷಯಗಳಲ್ಲೂ ಬಿಜೆಪಿಯ ಆಳ್ವಿಕೆಯ ಕಾಲವು ಭಿನ್ನವಾಗೇನೂ ಇರಲಿಲ್ಲ ಎನ್ನುವುದನ್ನು ಜನರು ಮರೆತಿಲ್ಲ. ಅದಕ್ಕಾಗಿಯೇ ಅಲ್ಲವೆ, ಭಾರಿ ಬಹುಮತ ಕೊಟ್ಟು ಕಾಂಗ್ರೆಸ್‌ನ್ನು ಅಧಿಕಾರಕ್ಕೆ ತಂದದ್ದು. ಕಾಂಗ್ರೆಸ್‌ನ ನೈಜ ಬಣ್ಣ ಈಗ ಮತ್ತೆ ಬಯಲಾಗಿದೆ.

### ಸಹಿಸಿದ್ದು ಸಾಕು – ಹೋರಾಟ ಬೇಕು

ಈಗ ಹೊಸ ವರ್ಷದ ಎಣಿಕೆ ಆರಂಭವಾಗಿದೆ. ಜನರು ತಮ್ಮ ಬದುಕಿನ ಸಂಕಷ್ಟಗಳಿಂದ ಹುಟ್ಟುವ ಆಕ್ರೋಶಕ್ಕೆ ಸಂಘಟಿತ ರೂಪವನ್ನು ಕೊಡಬೇಕು. ಶಿಥಿಲಾವಸ್ಥೆಯನ್ನು ತಲುಪಿ ಕೊಳೆಯುತ್ತಿದ್ದರೂ ಸಹ ಉಸಿರೆಳೆದೆಳೆದುಕೊಂಡು ಬದುಕಿರುವ ಇವತ್ತಿನ ಈ ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧ ಜನಸಾಮಾನ್ಯರು ತಮ್ಮ ಆಕ್ರೋಶವನ್ನು ಕೇಂದ್ರೀಕರಿಸಬೇಕು. ಆಳುವ ಪಕ್ಷ ಅಥವಾ ವಿರೋಧ ಪಕ್ಷಗಳೆರಡೂ ಇದೇ ಮರಣಾಸನ್ನವಾಗಿರುವ ಬಂಡವಾಳಶಾಹಿ ವ್ಯವಸ್ಥೆಯ ಹಿತಕ್ಕಾಗಿಯೇ ಮುಡಿಪಾಗಿವೆಯೇ ಹೊರತು ತಮ್ಮನ್ನು ಗೆಲ್ಲಿಸಿರುವ ಜನರಿಗಾಗಿ ಅಲ್ಲ ಎನ್ನುವ ಇತಿಹಾಸದ ಪಾಠವನ್ನು ಜನತೆ ಮತ್ತೆಮತ್ತೆ ಜ್ಞಾಪಿಸಿಕೊಳ್ಳುತ್ತಲೇ ಇರಬೇಕು. ಆಗ ಮಾತ್ರ ಜನತೆಯ ಸಂಘಟಿತ ಹೋರಾಟವು ಹೊಸ ದಿಕ್ಕನ್ನು ಕಂಡುಕೊಳ್ಳುತ್ತದೆ. ಜನತೆಯಲ್ಲಿ ಮೂಡಿರುವ ಹತಾಶೆ, ನಿರಾಸೆಗಳ ಜಾಗದಲ್ಲಿ ಹೋರಾಟ ಸ್ಫೂರ್ತಿಯು ಒಡಮೂಡುತ್ತದೆ. "ಪ್ರತಿ ಕೆಲವು ವರ್ಷಗಳಿಗೊಮ್ಮೆ ಪಾರ್ಲಿಮೆಂಟ್(ವಿಧಾನಸಭೆ–ಸಂ.) ಮೂಲಕ ಜನರನ್ನು ತುಳಿಯಲು ಮತ್ತು ಶೋಷಿಸಲು ಆಡಳಿತ ವರ್ಗದ ಯಾರನ್ನು ಆರಿಸಬೇಕು ಎಂದು ನಿರ್ಧರಿಸುವುದೇ ಬಂಡವಾಳಶಾಹಿ ಸಂಸದೀಯವಾದದ ನಿಜವಾದ ಸಾರಾಂಶ. ಇದು ಕೇವಲ ಸಂವಿಧಾನಾತ್ಮಕ ರಾಜಪ್ರಭುತ್ವದ ಸಂಸದೀಯ ವ್ಯವಸ್ಥೆಯಲ್ಲಿ ಮಾತ್ರವಲ್ಲ, ಬಹುತೇಕ ಪ್ರಜಾತಾಂತ್ರಿಕ ಗಣರಾಜ್ಯಗಳಿಗೂ ಅನ್ವಯಿಸುತ್ತದೆ"–(ರಾಜ್ಯ ಮತ್ತು ಕ್ರಾಂತಿ – ಲೆನಿನ್) ಎಂಬ ಕಾರ್ಮಿಕವರ್ಗದ ಮಹಾನ್ ನಾಯಕ ಲೆನಿನ್‌ರ ಮಾತುಗಳನ್ನು ಮತ್ತೆಮತ್ತೆ ನೆನಪಿಸಿಕೊಂಡು ಹತಾಶೆಯನ್ನು ಬದಿಗೊತ್ತಿ ಮುಂದಿನ ಹೋರಾಟಕ್ಕೆ ಜನತೆ ತಮ್ಮನ್ನು ತಾವು ಸಜ್ಜುಗೊಳಿಸಿಕೊಳ್ಳಬೇಕು. ಅದೇ ಅಲ್ಲವೇ, ಇಂದಿನ ತುರ್ತು ಅಗತ್ಯ!!!

## ವೆನೆಝುವೆಲಾ ಮೇಲೆ ಅಮೇರಿಕದ ದುರಾಕ್ರಮಣ- "ದೇಶದಾದ್ಯಂತ ಪ್ರತಿಭಟನಾ ಸಪ್ತಾಹ [ಜನವರಿ 6-12] ಆಚರಿಸಿ" - ಎಸ್‌ಯುಸಿಐ(ಕಮ್ಯುನಿಸ್ಟ್) ಕರೆ



**ಎಸ್‌ಯುಸಿಐ (ಕಮ್ಯುನಿಸ್ಟ್) ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಕಾಮ್ರೇಡ್ ಪ್ರವಾಶ್ ಘೋಷ್ ಜನವರಿ 6ರಂದು ಈ ಕೆಳಗಿನ ಹೇಳಿಕೆಯನ್ನು ಬಿಡುಗಡೆ ಮಾಡಿದರು:**

"ಎಲ್ಲಾ ಅಂತರಾಷ್ಟ್ರೀಯ ಕಾನೂನುಗಳು, ಸಂಹಿತೆಗಳು ಮತ್ತು ಆಚರಣೆಗಳನ್ನು ಸ್ಪಷ್ಟವಾಗಿ ಉಲ್ಲಂಘಿಸಿರುವ ಯುದ್ಧಕೋರ ಅಮೇರಿಕದ ಸಾಮ್ರಾಜ್ಯಶಾಹಿಗಳು ವೆನೆಝುವೆಲಾದ ಮೇಲೆ ಬಾಂಬ್ ದಾಳಿ ನಡೆಸಿದ್ದಾರೆ. ಹಿಂದೆ ಇರಾಕ್ ಮೇಲೆ ದಾಳಿ ಮಾಡಿ, ಅಲ್ಲಿ ಸಮೂಹ ವಿನಾಶದ ಶಸ್ತ್ರಾಸ್ತ್ರಗಳಿವೆ ಎಂಬ ನೆಪವೊಡ್ಡಿ ಇರಾಕಿನ ಅಧ್ಯಕ್ಷ ಸದ್ದಾಂ ಹುಸೇನ್‌ರನ್ನು ಕೊಂದಂತೆಯೇ, ಈಗ ಅಧ್ಯಕ್ಷ ನಿಕೋಲಸ್ ಮಡುರೊ ಅವರ ಮೇಲೆ ಮಾದಕ ದ್ರವ್ಯ ಕಳ್ಳಸಾಗಣೆಯ ಆರೋಪ ಹೊರಿಸಿ ಅವರನ್ನು ಅಪಹರಿಸಲಾಗಿದೆ. ವಾಸ್ತವವಾಗಿ, ಅಮೇರಿಕದ ಸಾಮ್ರಾಜ್ಯಶಾಹಿ ಆಳ್ವಿಕರು ವೆನೆಝುವೆಲಾದ ಅಪಾರ ತೈಲ ಸಂಪನ್ಮೂಲಗಳನ್ನು ಕಬಳಿಸುವ ಉದ್ದೇಶದಿಂದ, ಮಡುರೊ ಅವರನ್ನು ಅಧಿಕಾರದಿಂದ ಬಲವಂತವಾಗಿ ಕೆಳಗಿಳಿಸಿ ಅಲ್ಲಿ ಕೈಗೊಂಬೆ ಸರ್ಕಾರವನ್ನು ಸ್ಥಾಪಿಸಲು ಬಹಳ ದಿನಗಳಿಂದ ರಹಸ್ಯವಾಗಿ ಸಂಚು ರೂಪಿಸುತ್ತಿದ್ದರು. ಅಮೇರಿಕ ಸಾಮ್ರಾಜ್ಯಶಾಹಿಯ ಈ ಕ್ರಿಮಿನಲ್ ಕೃತ್ಯವನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ.

ಪ್ರಪಂಚದಾದ್ಯಂತದ ಸಾಮ್ರಾಜ್ಯಶಾಹಿ ವಿರೋಧಿ, ಯುದ್ಧ ವಿರೋಧಿ ಮತ್ತು ಶಾಂತಿಪ್ರಿಯ ಜನರು ಟ್ರಂಪ್ ನೇತೃತ್ವದ ಅಮೇರಿಕ ಸರ್ಕಾರದ ಈ ಅತ್ಯಂತ ಕ್ರೂರ ಕೃತ್ಯವನ್ನು ನಿಸ್ಸಂದಿಗ್ಧವಾಗಿ ಖಂಡಿಸುತ್ತಿದ್ದಾರೆ. ಆದರೆ, ಭಾರತದ ಆಳುವ ಏಕಸ್ವಾಮ್ಯ ಬಂಡವಾಳಶಾಹಿ ವರ್ಗದ ಹಿತಾಸಕ್ತಿಗೆ ಅಧೀನವಾಗಿರುವ ಬಿಜೆಪಿ ನೇತೃತ್ವದ ಭಾರತ ಸರ್ಕಾರವು, ಭಾರತೀಯರ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದ ಭವ್ಯ ಪರಂಪರೆಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದೆ. ಪೆಂಟಗನ್ ಆಡಳಿತಗಾರರ ಅಸಮಾಧಾನಕ್ಕೆ ಗುರಿಯಾಗಬಾರದು ಎಂಬ ಕಾರಣಕ್ಕಾಗಿಯೇ ಅಮೇರಿಕ ಸಾಮ್ರಾಜ್ಯಶಾಹಿಗಳ ಈ ಕ್ರಿಮಿನಲ್ ಕೃತ್ಯವನ್ನು ಖಂಡಿಸುವುದರಿಂದ ಭಾರತ ಸರ್ಕಾರ ದೂರ ಉಳಿದಿದೆ ಎಂಬುದು ನಮಗೆ ತೀವ್ರ ಆತಂಕವನ್ನುಂಟು ಮಾಡಿದೆ.

ಅಮೇರಿಕದ ನೌಕಾಪಡೆ ಮತ್ತು ವಾಯುಪಡೆಯು ವೆನೆಝುವೆಲಾದ ಮೇಲೆ ದಾಳಿ ಆರಂಭಿಸಿದ ಸುದ್ದಿ ತಿಳಿಯುತ್ತಿದ್ದಂತೆಯೇ, ನಮ್ಮ ಪಕ್ಷವು ಕಳೆದ ಜನವರಿ 3 ಮತ್ತು 4 ರಂದು ವಿವಿಧ ರಾಜ್ಯಗಳ ರಾಜಧಾನಿಗಳಲ್ಲಿ ಪ್ರತಿಭಟನಾ ಪ್ರದರ್ಶನಗಳನ್ನು ಆಯೋಜಿಸಿತು. ಈಗ ಜನವರಿ 6ರಿಂದ ದೇಶದ ಪ್ರತಿಯೊಂದು ಭಾಗದಲ್ಲೂ ನಮ್ಮ ಪಕ್ಷದ ವತಿಯಿಂದ ವಾರವಿಡೀ ಪ್ರತಿಭಟನೆಯನ್ನು ಆಯೋಜಿಸಲಾಗುವುದು. ಅಮೇರಿಕದ ಸಾಮ್ರಾಜ್ಯಶಾಹಿ ಆಡಳಿತಗಾರರ ಇಂತಹ ಗೂಂಡಾಗಿರಿ ಮತ್ತು ದೌರ್ಜನ್ಯದ ವಿರುದ್ಧ ನಡೆಯುವ ಈ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ಎಲ್ಲಾ ಸಾಮ್ರಾಜ್ಯಶಾಹಿ ವಿರೋಧಿ, ಯುದ್ಧ ವಿರೋಧಿ ಮತ್ತು ಶಾಂತಿಪ್ರಿಯ ದೇಶವಾಸಿಗಳಿಗೆ ನಾವು ಕರೆ ನೀಡುತ್ತೇವೆ."

## "ವೆನೆಝುವೆಲಾದಿಂದ ಕೈ ತೆಗೆ"




1ನೇ ಪುಟದಿಂದ ಎದುರಿಸಬೇಕಾಯಿತು. ಅವರ ರಾಜಕೀಯ ಎದುರಾಳಿ, ಅಮೇರಿಕದ ಆಪ್ತೆ ಮಾರಿಯಾ ಕೊರಿನಾ ಮಚಾದೊ ಅವರಿಗೆ 2025ರ ನೊಬೆಲ್ ಶಾಂತಿ ಪ್ರಶಸ್ತಿ ನೀಡಲಾಯಿತು. ಈಗ ಕೆಲವು ತಿಂಗಳಿಂದ ಮಾದಕ ದ್ರವ್ಯಗಳ ಕಳ್ಳಸಾಗಣೆ ತಡೆಯುವ ನೆಪ ನೀಡಿ ಕೆರೆಬಿಯನ್ ಸಮುದ್ರದಲ್ಲಿ ಅಮೇರಿಕ ತನ್ನ ಅತಿದೊಡ್ಡ ಯುದ್ಧನೌಕೆಯನ್ನು ತಂದು ನಿಲ್ಲಿಸಿದೆ. ಇದೀಗ ಜನವರಿ 2ರ ನಡುರಾತ್ರಿ ದರೋಡೆಕೋರರಂತೆ ವೆನೆಝುವೆಲಾದ ಅಧ್ಯಕ್ಷರ ನಿವಾಸದ ಮೇಲೆ ದಾಳಿ ನಡೆಸಿ ಅವರನ್ನು ಪತ್ನಿಯ ಜೊತೆ ಅಪಹರಿಸಲಾಗಿದೆ. ಮುಂದೆ ತಾವೇ ಅಲ್ಲಿ ಆಡಳಿತ ನಡೆಸುವುದಾಗಿ ಟ್ರಂಪ್ ಹೇಳಿಕೆ ನೀಡಿದ್ದಾರೆ. ಅಮೇರಿಕದ ಇಂತಹ ವಿದೇಶಾಂಗ ನೀತಿಯು ಜಗತ್ತಿನ ಶಾಂತಿ ಕದಡಲು, ಭಯೋತ್ಪಾದನೆ ಬೆಳೆಯಲು ಮುಖ್ಯ ಕಾರಣವಾಗಿದೆ. ಆದ್ದರಿಂದ, ಇದು 'ವಿಶ್ವಮಾನವ'ರೆಲ್ಲರಿಗೂ ಸಂಬಂಧಪಟ್ಟ ವಿಷಯವಾಗಿದೆ.

ಆರ್ಥಿಕವಾಗಿ ತೀವ್ರ ಸಂಕಷ್ಟದಲ್ಲಿರುವ ಬಂಡವಾಳಶಾಹಿ ವ್ಯವಸ್ಥೆಯನ್ನು ಮೇಲೆತ್ತುವುದಕ್ಕಾಗಿ ಜಗತ್ತಿನ ದುರ್ಬಲ ರಾಷ್ಟ್ರಗಳ ಸಂಪತ್ತನ್ನು ದೋಚಲು ಅಮೇರಿಕವು ನಿರ್ಲಜ್ಜೆಯಿಂದ ಮುಂದಾಗಿದೆ. ದುರಂತವೆಂದರೆ, ಸಾಮ್ರಾಜ್ಯಶಾಹಿ ವಿರೋಧಿ ಸ್ವಾತಂತ್ರ್ಯ ಹೋರಾಟದ ಇತಿಹಾಸ ಹೊಂದಿರುವ ಭಾರತದಲ್ಲಿ ಅಧಿಕಾರ ಹಿಡಿದಿರುವ ಕೇಂದ್ರ ಬಿಜೆಪಿ ಸರ್ಕಾರ ಈ ಆಕ್ರಮಣವನ್ನು ಖಂಡಿಸುತ್ತಿಲ್ಲ. ಬದಲಿಗೆ ಭಾರತದ ಬಂಡವಾಳಶಾಹಿಗಳಿಗೆ ಇದರಿಂದಾಗುವ ಲಾಭ-ನಷ್ಟದ ಲೆಕ್ಕಾಚಾರ ಹಾಕಿ ಆತ್ಮವಂಚನೆಯ ಹೇಳಿಕೆ ನೀಡುತ್ತಿದೆ.

ಇಂತಹ ಸಂದರ್ಭದಲ್ಲಿ, ಒಂದು ಸಾರ್ವಭೌಮ ದೇಶದ ಮೇಲೆ ದಾಳಿ ಮಾಡಿದ ಅಮೇರಿಕದ ಆಕ್ರಮಣದ ವಿರುದ್ಧ ಜಗತ್ತಿನ ಶಾಂತಿಪ್ರಿಯ ಜನತೆ ತೀವ್ರವಾಗಿ ಹೋರಾಡಲು ಮುಂದಾಗಬೇಕು, ವೆನೆಝುವೆಲಾದ ಅಧ್ಯಕ್ಷರನ್ನು ಮತ್ತವರ ಪತ್ನಿಯನ್ನು ತಕ್ಷಣವೇ ಬಿಡುಗಡೆ ಮಾಡಬೇಕು, ಭಾರತ ಸರ್ಕಾರವು ಹಿಂದಿನಂತೆ ತನ್ನ ಸಾಮ್ರಾಜ್ಯಶಾಹಿ ವಿರೋಧಿ ಶಾಂತಿಪರ ನೀತಿಯನ್ನು ಪಾಲಿಸಿ ಅಮೇರಿಕದ ವಿರುದ್ಧ ಜಾಗತಿಕ ಅಭಿಪ್ರಾಯ ಮೂಡಿಸಲು ಮುಂದಾಗಬೇಕು ಎಂದು ಎಸ್‌ಯುಸಿಐ(ಸಿ) ಒತ್ತಾಯಿಸುತ್ತದೆ.

### ಕೇಂದ್ರ ಕಾರ್ಮಿಕ ಸಂಘಟನೆಗಳು ಮತ್ತು ಸಂಯುಕ್ತ ಕಿಸಾನ್ ಮೋರ್ಚಾ ಸಂಘಟಿತ ಬೃಹತ್ ಜಂಟಿ ಪ್ರತಿಭಟನೆಯ ಆಗ್ರಹ!

# ನಾಲ್ಕು ಕಾರ್ಮಿಕ ಸಂಹಿತೆಗಳು ಮತ್ತು ರೈತ ವಿರೋಧಿ ನೀತಿಗಳನ್ನು ಹಿಂಪಡೆಯಿರಿ!!

***ಹತ್ತು ಕೇಂದ್ರ ಕಾರ್ಮಿಕ ಸಂಘಟನೆಗಳು ಮತ್ತು ಸಂಯುಕ್ತ ಕಿಸಾನ್ ಮೋರ್ಚಾ(ಎಸ್‌ಕೆಎಂ) ಜಂಟಿಯಾಗಿ ನೀಡಿರುವ ಪತ್ರಿಕಾ ಹೇಳಿಕೆಯ ಆಯ್ದ ಭಾಗಗಳು:***

ನವೆಂಬರ್ 26ರಂದು ದೇಶಾದ್ಯಂತ, ಔಪಚಾರಿಕ ಮತ್ತು ಅನೌಪಚಾರಿಕ ವಲಯಗಳಲ್ಲಿ, ಸರ್ಕಾರಿ, ಸಾರ್ವಜನಿಕ ವಲಯದ ಉದ್ದಿಮೆಗಳಲ್ಲಿ ಮತ್ತು ಕೈಗಾರಿಕಾ ಪ್ರದೇಶಗಳಲ್ಲಿ, ಗ್ರಾಮೀಣ ಭಾರತದಲ್ಲಿ ಹಾಗೂ ಬ್ಲಾಕ್–ಉಪ ವಿಭಾಗ ಮಟ್ಟಗಳಲ್ಲಿ, ಅನೌಪಚಾರಿಕ ವಲಯದ ಕಾರ್ಮಿಕರು, ಕೃಷಿ ಕಾರ್ಮಿಕರು, ರೈತರು ಮತ್ತು ಇತರ ಜನಸಾಮಾನ್ಯರು, 4 ಕಾರ್ಮಿಕ ಸಂಹಿತೆಗಳು ಮತ್ತು ಕೇಂದ್ರ ಸರ್ಕಾರದ ರೈತ ವಿರೋಧಿ ನೀತಿಗಳ ವಿರುದ್ಧ ಬೃಹತ್ ಪ್ರಮಾಣದಲ್ಲಿ ಪ್ರತಿಭಟನೆ ನಡೆಸಿದರು. ಅನೇಕ ರಾಜ್ಯಗಳಲ್ಲಿ ವಿದ್ಯಾರ್ಥಿಗಳು ಮತ್ತು ಯುವಜನರ ಪಾಲ್ಗೊಳ್ಳುವಿಕೆ ಗಮನಾರ್ಹವಾಗಿತ್ತು.

ಕಾರ್ಮಿಕರು ಮತ್ತು ರೈತರು, ದೇಶದ ಎರಡು ಉತ್ಪಾದಕ ಶಕ್ತಿಗಳಾಗಿದ್ದು, ಪರಸ್ಪರರ ಸಮಸ್ಯೆಗಳಿಗೆ ಸ್ಪಂದಿಸುತ್ತಾ ಐಕ್ಯಮತವನ್ನು ವ್ಯಕ್ತಪಡಿಸುತ್ತಿದ್ದಾರೆ ಹಾಗೂ ಒಕ್ಕೂಟ ಆಂದೋಲನ ಬೆಳೆಸುತ್ತಿದ್ದಾರೆ. ಹತ್ತು ಕೇಂದ್ರ ಟ್ರೇಡ್ ಯೂನಿಯನ್‌ಗಳ ವೇದಿಕೆಯಿಂದ ಜುಲೈ 9, 2025 ರಂದು ನೀಡಲಾದ ರಾಷ್ಟ್ರವ್ಯಾಪಿ ಸಾರ್ವತ್ರಿಕ ಮುಷ್ಕರದ ಕರೆಗೆ, ಸ್ವತಂತ್ರ ವಲಯದ ಫೆಡರೇಶನ್‌ಗಳು, ಸಂಘಟನೆಗಳು ಮತ್ತು ಸಂಯುಕ್ತ ಕಿಸಾನ್ ಮೋರ್ಚಾ (SKM) ಹಾಗೂ ಕೃಷಿ ಕಾರ್ಮಿಕರ ಸಂಘಟನೆಗಳು ಅಭೂತಪೂರ್ವವಾಗಿ ಸ್ಪಂದಿಸಿದ್ದು, ದುಡಿಯುವ ಜನಸಾಮಾನ್ಯರ ಮತ್ತು ಒಟ್ಟಾರೆ ರಾಷ್ಟ್ರದ ಹಿತದೃಷ್ಟಿಯಿಂದ ಅವರ ನಡುವಿನ ಬಂಧವನ್ನು ಇದು ಮತ್ತಷ್ಟು ಬಲಪಡಿಸಿದೆ.

ಅಗತ್ಯ ವಸ್ತುಗಳ ಬೆಲೆ ಏರಿಕೆ, ಹೆಚ್ಚುತ್ತಿರುವ ನಿರುದ್ಯೋಗ, ಅದರಿಂದಾಗುತ್ತಿರುವ ಹತಾಶೆ, ಆತ್ಮಹತ್ಯೆಗಳು, ಹೆಚ್ಚುತ್ತಿರುವ ಅಸಮಾನತೆ, ಇವುಗಳ ವಿರುದ್ಧ ಪ್ರತಿಭಟನಾಕಾರರು ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಕಳೆದ 10 ವರ್ಷಗಳಿಂದ ಸರ್ಕಾರವು ಭಾರತದ ಕಾರ್ಮಿಕರ ಸಮ್ಮೇಳನವನ್ನು ನಡೆಸದೆ, ಅಂತರರಾಷ್ಟ್ರೀಯ ಕಾರ್ಮಿಕ ಮಾನದಂಡಗಳನ್ನು ಉಲ್ಲಂಘಿಸುತ್ತಿದೆ ಮತ್ತು ಕಾರ್ಮಿಕರ ಹಿತಾಸಕ್ತಿಗೆ ವಿರುದ್ಧವಾದ ನಿರ್ಧಾರಗಳನ್ನು ತೆಗೆದುಕೊಳ್ಳುವುದನ್ನು ಮುಂದುವರೆಸಿದೆ ಮತ್ತು ನವೆಂಬರ್ 21, 2025 ರಂದು, 'ವ್ಯಾಪಾರವನ್ನು ಸುಲಭಗೊಳಿಸುವ' ('Ease of doing Business') ಹೆಸರಿನಲ್ಲಿ ಉದ್ಯೋಗದಾತರಿಗೆ ಅನುಕೂಲವಾಗುವಂತೆ ನಾಲ್ಕು ಕಾರ್ಮಿಕ ಸಂಹಿತೆಗಳಿಗೆ ಥಟ್ಟನೆ ಅಂಗೀಕರಿಸಿ ಅಧಿಸೂಚನೆ ಹೊರಡಿಸಿದೆ. ಟ್ರೇಡ್ ಯೂನಿಯನ್‌ಗಳು ಈ ಕಾರ್ಮಿಕ ಸಂಹಿತೆಗಳನ್ನು, ಬ್ರಿಟಿಷ್ ಆಳ್ವಿಕೆಯ ಕಾಲದಿಂದ 150 ವರ್ಷಗಳ ಹೋರಾಟದ ನಂತರ ಗೆದ್ದಿರುವ ಕಾರ್ಮಿಕ ಹಕ್ಕುಗಳ ನಿರಾಕರಣೆ ಎಂದು ಪರಿಗಣಿಸುತ್ತವೆ.

ಈ ಸಂಹಿತೆಗಳು ನಮ್ಮ ಮುಷ್ಕರದ ಹಕ್ಕನ್ನು ನಿರಾಕರಿಸುತ್ತವೆ, ಯೂನಿಯನ್ ನೋಂದಣಿಗೆ ಸಮಸ್ಯೆ ತಂದೊಡ್ಡುತ್ತವೆ, ಯೂನಿಯನ್‌ಗಳ ಮಾನ್ಯತೆ ರದ್ದುಗೊಳಿಸುವುದನ್ನು ಸುಲಭಗೊಳಿಸುತ್ತವೆ, ರಾಜಿ ಸಂಧಾನ ಮತ್ತು ತೀರ್ಪು ಪ್ರಕ್ರಿಯೆಯನ್ನು ಕಠಿಣವಾಗಿಸುತ್ತವೆ, ಕಾರ್ಮಿಕ ನ್ಯಾಯಾಲಯಗಳನ್ನು ಮುಚ್ಚಿ ಟ್ರಿಬ್ಯುನಲ್‌ಗಳನ್ನು ಜಾರಿಗೆ ತರುತ್ತವೆ, ಯೂನಿಯನ್‌ಗಳ ನೋಂದಣಿ ರದ್ದುಗೊಳಿಸಲು ರಿಜಿಸ್ಟ್ರಾರ್‌ಗಳಿಗೆ ಹೆಚ್ಚಿನ ಅಧಿಕಾರವನ್ನು ನೀಡುತ್ತವೆ.

ಈಗ ವೇತನದ ವ್ಯಾಖ್ಯೆಯನ್ನು ಬದಲಾಯಿಸಲಾಗುತ್ತಿದೆ ಮತ್ತು ಯಾವೆಲ್ಲಾ ಉದ್ಯೋಗಗಳಿಗೆ ಕನಿಷ್ಠ ವೇತನ ಅನ್ವಯವಾಗುತ್ತದೆಯೋ, ಆ ಉದ್ಯೋಗಗಳ ಪಟ್ಟಿಯನ್ನೇ ರದ್ದುಗೊಳಿಸಲಾಗುತ್ತಿದೆ. ಕೆಲಸದ ಸ್ಥಳದಲ್ಲಿ ಪ್ರತಿಯೊಬ್ಬ ಕಾರ್ಮಿಕರ ಸುರಕ್ಷತೆ ಮತ್ತು ಅಲ್ಲಿ ಅವರ ಹಕ್ಕುಗಳು ಮತ್ತು ಅಧಿಕಾರಗಳನ್ನು ಸಂಪೂರ್ಣವಾಗಿ ಕೈಬಿಡುವ ರೀತಿಯಲ್ಲಿ, ವೃತ್ತಿಸ್ಥಳದಲ್ಲಿನ ಸುರಕ್ಷತೆ ಮತ್ತು ಕೆಲಸದ ಪರಿಸ್ಥಿತಿಗಳ ಸಂಹಿತೆ (The Occupational Safety and Working Conditions code) ಯನ್ನು ವಿನ್ಯಾಸಗೊಳಿಸಲಾಗಿದೆ; ತಪಾಸಣೆಗಳನ್ನು ರದ್ದುಪಡಿಸಲಾಗಿದೆ ಮತ್ತು ಉದ್ಯೋಗದಾತರಿಗೆ ಅನುಕೂಲ ಕಲ್ಪಿಸಲು ಸಹಾಯಕ (facilitator) ರನ್ನು ನೇಮಿಸಲಾಗುತ್ತಿದೆ.

ಕೈಗಾರಿಕಾ ಸಂಹಿತೆಯಲ್ಲಿನ ಬದಲಾವಣೆಯ ಮೂಲಕ, ಈ ಹಿಂದೆ 100 ಕಾರ್ಮಿಕರಿರುವ ಕಾರ್ಖಾನೆಗಳಿಗೆ ಅದು ಅನ್ವಯಿಸುತ್ತಿದ್ದು ಈಗ ಬದಲಾಗಿ, ಅದು 300 ಕಾರ್ಮಿಕರು ಎಂದು ಹೆಚ್ಚಿಸುವುದರಿಂದ ಶೇ. 70 ರಷ್ಟು ಕೈಗಾರಿಕೆಗಳು ಕಾರ್ಮಿಕ ಕಾನೂನುಗಳ ವ್ಯಾಪ್ತಿಯಿಂದ ಹೊರಗಿಡಲ್ಪಡುತ್ತವೆ; ಅಂತೆಯೇ, ವಿದ್ಯುತ್ ಬಳಸುವ ಕಾರ್ಖಾನೆಗೆ ಕಾಯ್ದೆಯಲ್ಲಿನ ಮಿತಿಯನ್ನು 10 ರಿಂದ 20 ಕ್ಕೆ ಮತ್ತು ವಿದ್ಯುತ್ ಬಳಸದ ಕಡೆ 20 ರಿಂದ 40 ಕ್ಕೆ ಬದಲಾಯಿಸುವುದರಿಂದ ಗಮನಾರ್ಹ ಸಂಖ್ಯೆಯ ಕಾರ್ಮಿಕರು ಕಾರ್ಮಿಕ ಕಾನೂನುಗಳ ವ್ಯಾಪ್ತಿಯಿಂದ ಹೊರದೂಡಲ್ಪಡುತ್ತಾರೆ; ಇದು ದಮನ ಮತ್ತು ಶೋಷಣೆ ಮಾಡಲು ಮಾಲೀಕರಿಗೆ ವ್ಯಾಪಕ ಅಧಿಕಾರವನ್ನು ನೀಡುತ್ತದೆ.

ನಿಶ್ಚಿತ ಅವಧಿಯ ಉದ್ಯೋಗ (fixed term employment) ಸಂಪೂರ್ಣವಾಗಿ ಕಾರ್ಮಿಕ ಕಾನೂನು ರಕ್ಷಣೆಯಿಂದ ಹೊರತಾಗಿರುವುದರಿಂದ, ಅಲ್ಲಿ ಯಾವುದೇ ರಕ್ಷಣೆ ಇಲ್ಲ. ಅನಿಯಮಿತ ತರಬೇತಿ ಮತ್ತು ತರಬೇತಿ ಹೊಂದಿದವರಿಗೆ ಅಲ್ಲಿಯೇ ಉದ್ಯೋಗ ನೀಡುವ ಯಾವುದೇ ಬದ್ಧತೆ ಇಲ್ಲದಿರುವುದು ಶೋಷಣೆಯ ಇನ್ನೊಂದು ಮಾರ್ಗವಾಗಿದೆ. ಉದ್ಯೋಗದಾತರ ಉಲ್ಲಂಘನೆಗಳನ್ನು ಅಪರಾಧ ಎಂದು ಪರಿಗಣಿಸಲಾಗುವುದಿಲ್ಲ, ಆದರೆ ಟ್ರೇಡ್ ಯೂನಿಯನ್ ನಾಯಕರ ಚಟುವಟಿಕೆಗಳನ್ನು ಅಪರಾಧೀಕರಣಗೊಳಿಸುವುದು ದೂರದ ಮಾತೇನಲ್ಲ!



ನ.26 ರಂದು ಫ್ರೀಡಂ ಪಾರ್ಕ್‌ನಲ್ಲಿ ಕೇಂದ್ರ ಕಾರ್ಮಿಕ ಸಂಘಟನೆಗಳು ಮತ್ತು ಎಸ್ ಕೆ ಎಂ ಹಾಗೂ ರೈತ ಸಂಘಟನೆಗಳು ಜಂಟಿಯಾಗಿ ಸಂಘಟಿಸಿದ್ದ ಪ್ರತಿಭಟನಾ ಸಭೆಯಲ್ಲಿ ನೆರೆದಿದ್ದ ರೈತ–ಕಾರ್ಮಿಕರು

'ಜನ ವಿಶ್ವಾಸ್' ಮಸೂದೆಯು, ಕ್ರಿಮಿನಲ್ 'ದಂಡ'ಗಳನ್ನು ಸಿವಿಲ್ 'ದಂಡಾತ್ಮಕ ಶುಲ್ಕ'ವನ್ನಾಗಿ ಬದಲಾಯಿಸುತ್ತದೆ; ಈ ಮೂಲಕ, 288 ನಿಬಂಧನೆಗಳನ್ನು ಕ್ರಿಮಿನಲ್ ಪ್ರಾಸಿಕ್ಯೂಷನ್ ಸ್ತರದಿಂದ ಆಡಳಿತಾತ್ಮಕ ಕ್ರಮದ ಜಾರಿಯ ಸ್ತರಕ್ಕೆ ವರ್ಗಾಯಿಸುತ್ತದೆ. ಕಾನೂನುಭಂಗ, 'ಅಪರಾಧ'ದ ಬದಲು ಕೇವಲ 'ಉಲ್ಲಂಘನೆ'ಯಾಗಿ, ಜೈಲು ಶಿಕ್ಷೆ ಅಥವಾ ಇನ್ನಿತರ ಶಿಕ್ಷೆಗೆ ಒಳಗಾಗುವ ಅಪರಾಧವೆನಿಸಿಕೊಳ್ಳುವುದಿಲ್ಲ.......ನ್ಯಾಯಾಂಗ ಪ್ರಕ್ರಿಯೆಗಳನ್ನು ರದ್ದುಗೊಳಿಸಲಾಗುವುದು ಮತ್ತು ಅಲ್ಲಿ ನೇಮಕವಾದ ಅಧಿಕಾರಿಯು ದಂಡಗಳನ್ನು ನಿರ್ಣಯಿಸಲಿದ್ದಾರೆ. ಕಾರ್ಮಿಕ ನ್ಯಾಯಾಲಯಗಳನ್ನು ಮುಚ್ಚಿ ಅದರ ಬದಲಿಗೆ ಟ್ರಿಬ್ಯುನಲ್ ವ್ಯವಸ್ಥೆ ಅಸ್ತಿತ್ವಕ್ಕೆ ಬರಲಿದೆ. ಪ್ರಸ್ತುತವಾಗಿ ಕೆಲವು ವಿಷಯಗಳಿಗೆ ಸಂಬಂಧಿಸಿದಂತೆ ಲಭ್ಯವಿರುವ ಉಚ್ಚ ನ್ಯಾಯಾಲಯದ ಮಧ್ಯಸ್ಥಿಕೆಗೂ ಕುತ್ತು ಬರಲಿದೆ.

ಗುತ್ತಿಗೆ ಪರವಾನಗಿಯ ಮಿತಿಯನ್ನು 20 ರಿಂದ 50 ಕ್ಕೆ ಹೆಚ್ಚಿಸಲು ಪ್ರಸ್ತಾಪಿಸಲಾಗಿದ್ದು, ಹೊರಗುತ್ತಿಗೆ ಮತ್ತು ಗುತ್ತಿಗೆದಾರಿ ಪದ್ಧತಿಗಳು ಸರ್ವೇಸಾಮಾನ್ಯವಾಗುತ್ತವೆ. ಮಂಜೂರಾದ ಹುದ್ದೆಗಳಿಗೆ ನೇಮಕಾತಿಯನ್ನು ಮಾಡದಿರುವುದು ಮಾತ್ರವಲ್ಲದೆ, ಹೊಸ ಹುದ್ದೆಗಳ ಸೃಷ್ಟಿಗೆ ನಿಷೇಧವಿದ್ದು, ಇದು ನಿರುದ್ಯೋಗ ಹೆಚ್ಚಳಕ್ಕೆ ಕಾರಣವಾಗುತ್ತದೆ. ನಿರುದ್ಯೋಗಿ ಯುವಕರಿಗೆ ನಿಯಮಿತ ಉದ್ಯೋಗ ನೀಡುವ ಬದಲು ನಿವೃತ್ತರನ್ನು ನೇಮಕಾತಿ ಮಾಡಲಾಗುತ್ತದೆ.

ಎಲ್ಲಾ ಸರ್ಕಾರಿ ಇಲಾಖೆಗಳು ಮತ್ತು ಸಾರ್ವಜನಿಕ ವಲಯದ ಉದ್ದಿಮೆಗಳಲ್ಲಿ ಖಾಲಿ ಇರುವ ಮಂಜೂರಾದ ಹುದ್ದೆಗಳಿಗೆ ತಕ್ಷಣದ ನೇಮಕಾತಿ, ಕೈಗಾರಿಕೆಗಳು ಮತ್ತು ಸೇವಾವಲಯಗಳಲ್ಲಿ ಹೆಚ್ಚಿನ ಉದ್ಯೋಗಗಳ ಸೃಷ್ಟಿ, ನರೇಗಾ ಕಾರ್ಮಿಕರ ದುಡಿಮೆ ದಿನಗಳು ಮತ್ತು ಸಂಭಾವನೆಯನ್ನು ಹೆಚ್ಚಿಸುವುದು ಮತ್ತು ನಗರ ಪ್ರದೇಶಗಳಿಗೆ ಇದೇ ರೀತಿಯ ಶಾಸನವನ್ನು ಜಾರಿಗೊಳಿಸುವಂತೆ ಯೂನಿಯನ್‌ಗಳು ಆಗ್ರಹಿಸುತ್ತಿವೆ. ಆದರೆ ಸರ್ಕಾರವು ಉದ್ಯೋಗದಾತರಿಗೆ ಪ್ರೋತ್ಸಾಹ ನೀಡಲು ELI (Employment Linked Incentive)–ಯೋಜನೆಯನ್ನು ಜಾರಿಗೆ ತಂದಿದೆ......ಸರ್ಕಾರಿ ಇಲಾಖೆಗಳಲ್ಲಿ ಮತ್ತು ಸಾರ್ವಜನಿಕ ವಲಯದಲ್ಲಿ, ಯುವಕರಿಗೆ ನಿಯಮಿತ ನೇಮಕಾತಿಯನ್ನು ಒದಗಿಸುವ ಬದಲು, ನಿವೃತ್ತರನ್ನು ನೇಮಕ ಮಾಡುವ ನೀತಿ ಮತ್ತು ಮತ್ತೊಂದೆಡೆ, ನಿಶ್ಚಿತ–ಅವಧಿಯ/ ಅಪ್ರೆಂಟಿಸ್‌ಗಳು/ ತರಬೇತಿ ಪಡೆಯುವವರು/ ಇಂಟರ್ನ್‌ಗಳನ್ನು ಪ್ರಮುಖ ಕೆಲಸಗಳಿಗೆ ನೇಮಿಸುವ ನೀತಿಯನ್ನು ಜಾರಿಗೆ ತರಲಾಗುತ್ತಿದೆ; ಇದು ರೈಲ್ವೆ, NMDC ಲಿಮಿಟೆಡ್, ಉಕ್ಕು ವಲಯ, ಬೋಧನಾ ವೃಂದ ಮುಂತಾದೆಡೆ ಕಾಣಬರುತ್ತಿದೆ. ದೇಶದ ಶೇ. 65 ರಷ್ಟು ಜನಸಂಖ್ಯೆ 35 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿದ್ದು, 20 ರಿಂದ 25 ವರ್ಷದವರಲ್ಲಿ ನಿರುದ್ಯೋಗ ಗರಿಷ್ಠವಾಗಿರುವಾಗ, ಈ ನೀತಿ ಹಾನಿಕಾರಕವಾಗಿದೆ.....

ಆಡಳಿತ ಪಕ್ಷವು ಅಧಿಕಾರದಲ್ಲಿ ಉಳಿಯಲು ಧ್ರುವೀಕರಣದ ಮತ್ತು ಕೋಮುವಾದಿ ದ್ವೇಷದ ರಾಜಕಾರಣವನ್ನು ಬಳಸುತ್ತಿದೆ; ಇದು ಭಾರತದ ಸಂವಿಧಾನದ ಮೂಲಭೂತ ಆಧಾರಗಳಾದ ಧರ್ಮನಿರಪೇಕ್ಷ ಪ್ರಜಾಪ್ರಭುತ್ವ, ವೈವಿಧ್ಯಮಯ ಸಂಸ್ಕೃತಿಗಳು, ನಂಬಿಕೆಗಳು ಮತ್ತು ಭಾಷೆಗಳಿಗೆ ಗೌರವ, ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಭಿನ್ನಮತಕ್ಕೆ ಅವಕಾಶ ನೀಡುವ ಮೂಲ ಸ್ವರೂಪದ ಮೌಲ್ಯಗಳಿಗೆ ಧಕ್ಕೆಯನ್ನುಂಟು ಮಾಡುತ್ತದೆ. ದುಡಿಯುವ ಜನರು, ಸಾಮಾನ್ಯ ಜನಸಮುದಾಯವು ದ್ವೇಷದ ಈ ರಾಜಕಾರಣವನ್ನು ತಿರಸ್ಕರಿಸಿ, ತಮ್ಮ ದಿನನಿತ್ಯದ ಬದುಕಿನ ವಿಷಯಗಳಾದ ಕೈಗೆಟಕುವ ಶಿಕ್ಷಣ, ಆರೋಗ್ಯ, ಮನೆ, ಶುದ್ಧ ಕುಡಿಯುವ ನೀರು, ನೈರ್ಮಲ್ಯ, ಉದ್ಯೋಗ, ಯೋಗ್ಯ ವೇತನ, ಸಾಮಾಜಿಕ ಭದ್ರತೆ, ವೃದ್ಧಾಪ್ಯ ಭದ್ರತೆಯಾಗಿ ಪಿಂಚಣಿ ಸೌಲಭ್ಯಗಳು ಇತ್ಯಾದಿಗಳಿಗಾಗಿ ಹೋರಾಡಬೇಕು. ಕಾರ್ಪೊರೇಟ್ ಲೂಟಿಯನ್ನು ತಡೆಯಲು ಮತ್ತು ಜನರ ಹಾಗೂ ರಾಷ್ಟ್ರದ ಒಳಿತಿಗಾಗಿ ತಮ್ಮ ಸಾರ್ವಜನಿಕ ವಲಯ/ಸಾರ್ವಜನಿಕ ಸೇವೆಗಳು, ನೀರು–ಕಾಡು–ಜಮೀನನ್ನು ರಾಷ್ಟ್ರೀಯ ಸ್ವತ್ತುಗಳನ್ನಾಗಿ ಉಳಿಸಲು ಜನಾಂದೋಲನಗಳನ್ನು ಬಲಪಡಿಸಬೇಕು.

# ಗಾಜ಼ಾ: ಸಾಮ್ರಾಜ್ಯವಾದ ಸೃಷ್ಟಿಸಿದ ಹಸಿವು–ಕ್ಷಾಮಗಳೇ ಇಲ್ಲಿ ನಿಜವಾದ ಯುದ್ಧ

ಗಾಜಾಪಟ್ಟಿಯ ಮೇಲೆ ಇಸ್ರೇಲಿನ ಯುದ್ಧ ಮುಂದುವರೆದಿದೆ. ಈಗಾಗಲೇ ಸಾವಿರಾರು ಜನ ಮೃತಪಟ್ಟಿದ್ದಾರೆ. ಲಕ್ಷಾಂತರ ಜನರಿಗೆ ತಲೆಯ ಮೇಲೆ ಸೂರಿಲ್ಲ. ಒಂದು ತುತ್ತು ಅನ್ನಕ್ಕಾಗಿ ಪ್ಯಾಲೆಸ್ಟೀನಿಯನ್ನರು ಪರದಾಡುತ್ತಿದ್ದಾರೆ. ಕೊನೆಗೂ 22 ಆಗಸ್ಟ್, 2025 ರಂದು ವಿಶ್ವಸಂಸ್ಥೆಯು ಗಾಜಾದಲ್ಲಿ ಕ್ಷಾಮವನ್ನು ಘೋಷಣೆ ಮಾಡಿದೆ. ಅದಾಗಲೇ ನೂರಾರು ಜನ ಹಸಿವಿನಿಂದ ಮೃತಪಟ್ಟಿದ್ದಾರೆ. ಕನಿಷ್ಠವೆಂದರೂ ಅಂತಹ 273 ಪ್ರಕರಣಗಳು ದೃಢಪಟ್ಟಿದ್ದವು. ಅವರಲ್ಲಿ 112 ಮಕ್ಕಳು ಸೇರಿವೆ. ನಿಜವಾದ ಸಂಖ್ಯೆಗಳು ಇವನ್ನು ಮೀರಿವೆ. ಸಾಮ್ರಾಜ್ಯಶಾಹಿ ಅಮೇರಿಕದ ಬೆಂಬಲದೊಂದಿಗೆ ಯುದ್ಧ ನಡೆಸುತ್ತಿರುವ ಇಸ್ರೇಲ್ ಈ ಹಸಿವು, ಹಾಹಾಕಾರಗಳಿಗೆ ಕಾರಣವಾಗಿದೆ. ವಿಶ್ವಸಂಸ್ಥೆಯಿಂದ ಇಷ್ಟೊಂದು ತಡವಾಗಿ ಈ ಘೋಷಣೆ ಬಂದಿರುವುದು ಸಹ ಕೇವಲ ಆಕಸ್ಮಿಕವಲ್ಲ, ಅದು ಅಧಿಕಾರ ಮದದ ಕ್ರೌರ್ಯವಾಗಿದೆ. ಇದು ಹಸಿವನ್ನು ಆಯುಧವಾಗಿ ಬಳಸಿದ ಸಾಮ್ರಾಜ್ಯಶಾಹಿ ಇತಿಹಾಸದ ಮತ್ತೊಂದು ಕರಾಳ ಅಧ್ಯಾಯ. ವಿಶ್ವಸಂಸ್ಥೆಯ ಇನ್‌ಟಿಗ್ರೇಟೆಡ್ ಫುಡ್ ಸೆಕ್ಯುರಿಟಿ ಫೇಸ್ ಕ್ಲಾಸಿಫಿಕೇಷನ್(ಐಪಿಸಿ)ನ ಪ್ರಕಾರ, 5 ಲಕ್ಷಕ್ಕಿಂತ ಅಧಿಕ ಗಾಜ಼ನ್ನರು ಭಯಾನಕ ಹಸಿವನ್ನು ಎದುರಿಸುತ್ತಿದ್ದಾರೆ. ಮತ್ತೊಂದು ದಶಲಕ್ಷ ಜನ ತೀವ್ರ ಹಸಿವಿನ ಗಡಿಯಲ್ಲಿದ್ದಾರೆ.

ಆದರೆ, ಈ ಘೋಷಣೆಯೂ ಎಂದಿನಂತೆ ಬಹಳ ತಡವಾಗಿ ಬಂತು. ಕಾಗದದ ಮೇಲಿನ ಅಂಕಿ–ಅಂಶಗಳನ್ನು ಕಣ್ಣುಬಿಟ್ಟು ನೋಡುವಷ್ಟರಲ್ಲಿ ಜನರು ಬೆಂಕಿಗೆ ಸಿಕ್ಕ ಪತಂಗಗಳಂತೆ ಸಾವಿಗೀಡಾಗುತ್ತಿದ್ದರು. ಇದು ಅವರ ವಿಧಾನದಲ್ಲಿನ ದೋಷವಲ್ಲ; ವ್ಯವಸ್ಥೆ ಇರುವುದೇ ಹೀಗೆ ಜನರು ಸತ್ತ ನಂತರವೇ ವಿಶ್ವಸಂಸ್ಥೆಯು ಕ್ಷಾಮವನ್ನು ಘೋಷಿಸುತ್ತದೆ.

### ಈ ಹಸಿವು ಮಾನವ ನಿರ್ಮಿತ

ಗಾಜ಼ಾದಲ್ಲಿ ಸೃಷ್ಟಿಯಾಗಿರುವ ಕ್ಷಾಮವು ಮಾನವ ನಿರ್ಮಿತವೆಂದು ವಿಶ್ವಸಂಸ್ಥೆಯ ವರದಿಯು ಸ್ಪಷ್ಟವಾಗಿ ಹೇಳುತ್ತದೆ. ಸಾಮ್ರಾಜ್ಯಶಾಹಿ ಅಮೇರಿಕ ಬೆಂಬಲಿತ "ಝಿಯೋನಿಸ್ಟ್ ಇಸ್ರೇಲ್", ಗಾಜ಼ಾ ಬೇಕರಿಗಳ ಮೇಲೆ ಬಾಂಬ್ ಹಾಕಿತು, ಹೊಲಗಳನ್ನು ನಾಶ ಮಾಡಿತು, ನೀರಿನ ಸರಬರಾಜು ನಾಶಮಾಡಿತು ಹಾಗೂ ನೆರವಿನ ವಾಹನಗಳನ್ನು ತಡೆಯಿತು. ಇಲ್ಲಿ ಶೇ.98ರಷ್ಟು ಕೃಷಿಭೂಪ್ರದೇಶ ನಾಶವಾಗಿದೆ. ಆಸ್ಪತ್ರೆಗಳು ಹಾಳಾಗಿವೆ. 400 ಆಹಾರ ವಿತರಣಾ ಕೇಂದ್ರಗಳನ್ನು ಇಸ್ರೇಲ್ ಮುಚ್ಚಿದೆ. ಅವುಗಳ ಬದಲಿಗೆ ಅಮೇರಿಕ–ಇಸ್ರೇಲ್ ಬೆಂಬಲಿತ "ಗಾಜ಼ಾ ಹ್ಯೂಮ್ಯಾನಿಟೇರಿಯನ್ ಫೌಂಡೇಶನ್" ಎಂಬ 4 ಕೇಂದ್ರಗಳನ್ನು ತೆರೆಯಿತು. ಅವು ನೆರವು ನೀಡುವ ಸ್ಥಳಗಳಲ್ಲ, ಬದಲಿಗೆ ವಧಾ ಸ್ಥಾನಗಳು!! ಕೇವಲ 2025ರ ಮೇನಿಂದ ಆಗಸ್ಟ್ ನಡುವಿನ ಅವಧಿಯಲ್ಲಿ ಈ ಸ್ಥಳಗಳಲ್ಲಿ 2,000 ಜನರು ಕೊಲ್ಲಲ್ಪಟ್ಟರು ಅಥವಾ ಗಾಯಗೊಂಡರು. ಆಹಾರವನ್ನು ವಿಮಾನದಿಂದ ಎಸೆಯುವ ಏರ್‌ಡ್ರಾಪ್‌ನ 'ನಾಟಕ'ದ ನೂಕುನುಗ್ಗಲಿನಲ್ಲಿ ಸಾವಿರಾರು ಜನರು ಗಾಯಗೊಂಡಿದ್ದಾರೆ. ಮಕ್ಕಳ ಪರಿಸ್ಥಿತಿಯಂತೂ ಹೇಳಲು ಸಾಧ್ಯವಿಲ್ಲ.

### ಕ್ಷಾಮದ ಮೂಲಕ ಸಾಮಾಜಿಕ ಹತ್ಯೆ

ಇಸ್ರೇಲ್ ನಿರ್ಬಂಧ ಹೇರಿತು, 4ನೇ ಪುಟಕ್ಕೆ

# ಇಂಡಿಗೋ ಬಿಕ್ಕಟ್ಟು: ಖಾಸಗೀಕರಣದ ಸೃಷ್ಟಿ

ದೇಶದ ವಿಮಾನ ಸಂಚಾರ ವ್ಯವಸ್ಥೆಯಲ್ಲಿ ಹಿಂದೆಂದೂ ಕಂಡರಿಯದ ಅತಿದೊಡ್ಡ ಬಿಕ್ಕಟ್ಟು 2025ರ ಡಿಸೆಂಬರ್ ತಿಂಗಳಲ್ಲಿ ಕಾಣಿಸಿಕೊಂಡಿತು. ಡಿಸೆಂಬರ್ 5ರಂದು ಬಹುದೊಡ್ಡ ಏರ್‌ಲೈನ್ಸ್ ಕಂಪನಿಯಾದ ಇಂಡಿಗೋ ಸಂಸ್ಥೆ ಒಂದೇ ದಿನದಲ್ಲಿ 1000ಕ್ಕೂ ಹೆಚ್ಚು ವಿಮಾನ ಹಾರಾಟವನ್ನು ಏಕಾಏಕಿ ರದ್ದು ಪಡಿಸಿದ ಪರಿಣಾಮ ಲಕ್ಷಾಂತರ ಜನರು ಹಲವು ಸಮಸ್ಯೆಗಳಿಗೆ, ಆತಂಕಕ್ಕೆ ಒಳಗಾದರು.

ತುರ್ತು ಕೆಲಸಕಾರ್ಯಗಳಿಗೆ ವಿಮಾನಯಾನವನ್ನು ನೆಚ್ಚಿಕೊಂಡವರು, ಟಿಕೆಟ್‌ಗಳನ್ನು ಖರೀದಿಸಿದ್ದರೂ ತಮ್ಮ ಪ್ರಯಾಣವನ್ನು ಕೈಬಿಡಬೇಕಾಯಿತು. ಇಂಡಿಗೋ ಹೊರತುಪಡಿಸಿ ಪರ್ಯಾಯ ವಿಮಾನದ ಟಿಕೆಟ್ ದರ ರೂ.5000 ದಿಂದ 1 ಲಕ್ಷಕ್ಕೆ ಏರಿತು. ಮುಂಬೈಯಿಂದ ದೆಹಲಿಯ ನಡುವೆಯ ಕಡಿಮೆ ಅವಧಿಯ ವಿಮಾನಯಾನಕ್ಕೂ ರೂ.1 ಲಕ್ಷ ಪಾವತಿಸಬೇಕಾದ ಅನಿವಾರ್ಯತೆ ನಿರ್ಮಾಣವಾಯಿತು. ಆದ್ದರಿಂದ, ಜನರು ಬಹುದೊಡ್ಡ ಸಂಖ್ಯೆಯಲ್ಲಿ ವಿಮಾನ ನಿಲ್ದಾಣಗಳಲ್ಲೇ ದಿಕ್ಕುತೋಚದೆ ನಿಂತರು. ಹೋಟೆಲ್ ರೂಂ ದರ ಸಿಕ್ಕಾಪಟ್ಟೆ ಏರಿಕೆಯಾಗಿ ಜನ ಊಟ, ನಿದ್ದೆ, ವಿಶ್ರಾಂತಿಯಿಲ್ಲದೆ ಹೈರಾಣಾದರು.

### ಬಿಕ್ಕಟ್ಟಿಗೆ ಕಾರಣ

ಇಂದು ಭಾರತೀಯ ವಿಮಾನಯಾನ ಕ್ಷೇತ್ರವು, ಎರಡು ಪ್ರಮುಖ ಕಾರ್ಪೋರೇಟ್ ದೈತ್ಯಗಳಾದ ಇಂಡಿಗೋ (ಶೇ.60) ಹಾಗೂ ಟಾಟಾ ಸಮೂಹ ಸಂಸ್ಥೆ(ಶೇ.32)ಗಳ ನಿಯಂತ್ರಣದಲ್ಲಿದೆ. ಹೀಗೆ ಶೇ.92 ರಷ್ಟು ಏಕಸ್ವಾಮ್ಯ ಕಂಪನಿಗಳ ಕೈವಶವಾಗಿರುವುದೇ ಈ ಬಿಕ್ಕಟ್ಟಿಗೆ ಪ್ರಮುಖ ಕಾರಣವಾಗಿದೆ.

ಪೈಲೆಟ್‌ಗಳು ಹಾಗೂ ವಿಮಾನಯಾನದ ಸಿಬ್ಬಂದಿ, ಗರಿಷ್ಠ ಎಷ್ಟು ಅವಧಿ ಕೆಲಸ ನಿರ್ವಹಿಸಬೇಕು ಎನ್ನುವ ವಿಷಯಕ್ಕೆ ಸಂಬಂಧಿಸಿದ ನಿಯಮಗಳನ್ನು FDTL (ಫ್ಲೈಟ್ ಡ್ಯೂಟಿ ಟೈಮ್ ಲಿಮಿಟೇಷನ್) ತಿಳಿಸುತ್ತದೆ. ಆದರೆ, ಭಾರತದ ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯವು (ಡಿಜಿಸಿಎ) ಅನುಸರಿಸುವ ಎಫ್‌ಡಿಟಿಎಲ್ ಮಾರ್ಗದರ್ಶಿ ಸೂತ್ರವು ಅಂತರರಾಷ್ಟ್ರೀಯ ಮಾನದಂಡಗಳ ಅನುಸಾರವಾಗಿ ಇಲ್ಲ. ಅಂತರರಾಷ್ಟ್ರೀಯ ಮಟ್ಟದಲ್ಲಿ ಪೈಲಟ್‌ಗಳಿಗೆ ವಾರಕ್ಕೆ 48 ಗಂಟೆಗಳ ಕಾಲ ವಿಶ್ರಾಂತಿ ಇದ್ದರೆ, ಭಾರತದಲ್ಲಿ ಅದು ಕೇವಲ 36 ಗಂಟೆಗಳಿಗೆ ಸೀಮಿತವಾಗಿದೆ.

ಯಾರಿಗೇ ಆಗಲಿ, ವಿಶ್ರಾಂತಿ ರಹಿತ ಧೀರ್ಘಾವಧಿ ಕೆಲಸವು ಅತೀವ ದಣಿವನ್ನು ಉಂಟುಮಾಡುತ್ತದೆ. ಇದಕ್ಕೆ ವಿಮಾನಯಾನದ ಸಿಬ್ಬಂದಿಗಳು ಹೊರತಾದವರಲ್ಲ. ಇವರಿಗೆ ಸೂಕ್ತ ವಿಶ್ರಾಂತಿಯನ್ನು ಖಾತ್ರಿ ಪಡಿಸದೆ ಹೋದಲ್ಲಿ ಕೇವಲ ಅವರ ಜೀವಕ್ಕೆ ಮಾತ್ರವಲ್ಲ, ಪ್ರಯಾಣಿಕರ ಜೀವಕ್ಕೂ ಸಹ ಕುತ್ತು ಬರಬಹುದಾದ ಸಂಭವವೇ ಹೆಚ್ಚು.

ಆದ್ದರಿಂದಲೇ, ಹಲವು ದಶಕಗಳಿಂದ ಪೈಲೆಟ್ ಹಾಗೂ ವಿಮಾನಯಾನದ ಸಿಬ್ಬಂದಿ, ಪ್ರಯಾಣಿಕರ ಸುರಕ್ಷತೆಗೆ ಆದ್ಯತೆ ನೀಡಬೇಕು ಹಾಗೂ ಪ್ರಪಂಚದಾದ್ಯಂತ ಬಹುತೇಕ ರಾಷ್ಟ್ರಗಳು ಒಪ್ಪಿಕೊಂಡಿರುವ ಅಂತರರಾಷ್ಟ್ರೀಯ ನಾಗರಿಕ ವಿಮಾನಯಾನ ಸಂಸ್ಥೆ (ICAO)ಯ ನಿಯಮಗಳಿಗೆ ಹೊಂದಿಕ್ಕೊಳ್ಳುವಂತಹ FDTL (ಫ್ಲೈಟ್ ಡ್ಯೂಟಿ ಟೈಮ್ ಲಿಮಿಟೇಷನ್) ನಿಯಮಗಳನ್ನು ಜಾರಿಗೊಳಿಸಬೇಕೆಂಬ ಬೇಡಿಕೆ ಇಟ್ಟಿದ್ದರು.

ಇದರ ಪರಿಣಾಮವಾಗಿ, 2024ರ ಮೇ ತಿಂಗಳಲ್ಲಿ ಹೊಸ FDTL ನಿಯಮಗಳನ್ನು ಡಿಜಿಸಿಎ ಪ್ರಕಟಿಸಿತು. ಇವುಗಳನ್ನು ಎರಡು ಹಂತದಲ್ಲಿ, ಅಂದರೆ 2025ರ ಜುಲೈ 1ರಂದು ನಿಯಮಗಳನ್ನು ಮೊದಲ ಹಂತದಲ್ಲಿ ಜಾರಿಗೊಳಿಸಿ ಹಾಗೂ ನವೆಂಬರ್ 1ರ ಹೊತ್ತಿಗೆ ಎರಡನೇ ಹಂತದಲ್ಲಿ ಅಷ್ಟೂ ಪ್ರಕ್ರಿಯೆ ಮುಗಿದಿರಬೇಕು ಎಂದು ತಿಳಿಸಿತು. ಈ ನಿಯಮಗಳನ್ನು ಜಾರಿಗೆ ತರಲು ಸಾಕಷ್ಟು ಕಾಲಾವಕಾಶ ನೀಡಿದಾಗ್ಯೂ ಇಂಡಿಗೋ ಸಂಸ್ಥೆ ನಿಯಮಗಳನ್ನು ಗಾಳಿಗೆ ತೂರಿ, ನಿಯಮ ಪಾಲನೆಗೆ ಬೇಕಿದ್ದ ಅವಶ್ಯಕ ಸಹ ಪೈಲೆಟ್‌ಗಳು, ಕ್ಯಾಪ್ಟನ್‌ಗಳು ಹಾಗೂ ಸಿಬ್ಬಂದಿಗಳನ್ನು ನೇಮಿಸಿಕೊಳ್ಳಲಿಲ್ಲ. ಕಟ್ಟುನಿಟ್ಟಾಗಿ ನಿಯಮಗಳನ್ನು ಪಾಲಿಸಲೇಬೇಕು ಎಂದು ತಾಕೀತು ಮಾಡಿದಾಗ ಇಂಡಿಗೋ ತನ್ನ ವಿಮಾನಗಳ ಹಾರಾಟವನ್ನೇ ಏಕಾಏಕಿ ನಿಲ್ಲಿಸಿತು. ಆದ್ದರಿಂದಲೇ, ಡಿಸೆಂಬರ್ 4, 5, 6 ರಂದು ದೇಶದಲ್ಲಿ ಅತಿ ದೊಡ್ಡ ಬಿಕ್ಕಟ್ಟು ವಿಮಾನಯಾನದಲ್ಲಿ ಉಂಟಾಯಿತು.

### ಖಾಸಗೀಕರಣದ ನೀತಿಯ ಫಲ

ಗರಿಷ್ಠ ವಿಮಾನಗಳು, ಕನಿಷ್ಠ ಸಿಬ್ಬಂದಿ ವರ್ಗ ಈ ಮೂಲಕ ಅತ್ಯಧಿಕ ಲಾಭಗಳಿಸುವುದೇ ಎಲ್ಲಾ ಖಾಸಗಿ ಕಂಪನಿಗಳ ಗುರಿ. ಲಾಭದ ಹಿಂದೆ ಬಿದ್ದ ಕಂಪನಿಗಳು ಅತಿ ಕಡಿಮೆ ಪೈಲೆಟ್‌ಗಳಿಂದ ಹೆಚ್ಚು ದುಡಿಸಿಕೊಂಡು ಲಾಭಗಳಿಸುವ ನಯವಂಚಕ ಯೋಜನೆಯನ್ನು ರೂಪಿಸುತ್ತವೆ. ಇದು ಕೇವಲ ವಿಮಾನಯಾನಕ್ಕೆ ಸಂಬಂಧಿಸಿದಲ್ಲ. ಬಸ್, ಟ್ರೈನ್ ಒಳಗೊಂಡಂತೆ ಎಲ್ಲಾ ಸಾರಿಗೆಗೂ ಅನ್ವಯಿಸುತ್ತದೆ. ಇಂಡಿಗೋ, ಏರ್ ಇಂಡಿಯಾ ಮತ್ತೆ ಯಾವುದೇ ಕಂಪನಿಗಳು ಇದೇ ನಿಯಮವನ್ನು ಪಾಲಿಸುತ್ತವೆ. ಏಕೆಂದರೆ, ಎಲ್ಲವೂ ಖಾಸಗಿ ಏರ್ಲೈನ್ಸ್‌ಗಳಾಗಿವೆ. ಇವರಿಗೆ ಬೇಕಿರುವುದು ಅತ್ಯಧಿಕ ಲಾಭ, ಅತೀ ಕಡಿಮೆ ನೌಕರರು. ಇದೇ ಸಮಸ್ಯೆಯ ಮೂಲ.

ಇದರ ವ್ಯತಿರಿಕ್ತ ಪರಿಣಾಮವಾಗಿಯೇ, ನಾವು ಈಗಾಗಲೇ ದೇಶದಲ್ಲಿ ಹಲವಾರು ವಿಮಾನ ಅಪಘಾತಗಳಿಗೆ ಸಾಕ್ಷಿಯಾಗಿದ್ದೇವೆ. 2018ರಿಂದ ಮೂರು ಅತಿದೊಡ್ಡ ಅಪಘಾತಗಳು ದೇಶದಲ್ಲಿ ಘಟಿಸಿವೆ. ಒಂದು ಮಂಗಳೂರಿನಲ್ಲಿ, ಮತ್ತೊಂದು ಕೊಯ್‌ಕೋಡ್‌ನಲ್ಲಿ ಮತ್ತು ಮೂರನೆಯದು ಅಹ್ಮದಾಬಾದಿನಲ್ಲಿ. ಈ ವಿಮಾನಗಳು ಎಂತಹ ದುರಂತಕ್ಕೀಡಾದವು ಎಂದರೆ ವಿಮಾನದಲ್ಲಿದ್ದ ಬಹುತೇಕ ಎಲ್ಲರೂ ತಮ್ಮ ಪ್ರಾಣವನ್ನು ತೆರಬೇಕಾಯಿತು. ಈ ರೀತಿ ಜಾಗತೀಕರಣ, ಖಾಸಗೀಕರಣ ಫಲವಾಗಿ ಅಸ್ತಿತ್ವಕ್ಕೆ ಬಂದ ಖಾಸಗಿ ಕಂಪನಿಗಳು ಜನರ ಜೀವದ ಜೊತೆ ಚೆಲ್ಲಾಟವಾಡುತ್ತಲೇ ತಮ್ಮ ಲಾಭದ ಹಸಿವನ್ನು ತೀರಿಸಿಕೊಳ್ಳುತ್ತವೆ.

### ಇಂದಿನ ಅವಶ್ಯಕತೆ

ಯಾವುದೇ ಕಂಪನಿಯು ಸರ್ಕಾರದ ನಿಯಮಗಳ ಅನುಸಾರ ನಡೆಯದೆ ಹೋದಲ್ಲಿ ಕಂಪನಿಗಳ ಮೇಲೆ ದೊಡ್ಡ ಮೊತ್ತದ ದಂಡ ವಿಧಿಸಬಹುದು, ಅಮಾನತು ಮಾಡಬಹುದು, ಆಪರೇಷನ್‌ಗಳನ್ನು ಸಂಪೂರ್ಣ ನಿಲ್ಲಿಸಬಹುದು, ಪರವಾನಗಿಯನ್ನು ವಾಪಸ್ ಪಡೆಯಬಹುದು. ಈ ರೀತಿ ಹಲವಾರು ಕಾನೂನಾತ್ಮಕ ಕ್ರಮಗಳನ್ನು ತೆಗೆದುಕೊಳ್ಳಬಹುದು. ವಿಪರ್ಯಾಸ ಎಂದರೆ ಇಂದು ಸರ್ಕಾರವು ಇಂಡಿಗೋದಂತಹ ಏಕಸ್ವಾಮ್ಯ ಮತ್ತು ಬಹುರಾಷ್ಟ್ರೀಯ ಕಂಪನಿಗಳ ಬಾಲಂಗೋಚಿಯಾಗಿ ಕಂಡೂ ಕಾಣದಂತೆ ಕೈಕಟ್ಟಿ ಕುಳಿತಿದೆ.

ಇಷ್ಟು ಮಾತ್ರವಲ್ಲದೆ, ಬಂಡವಾಳಶಾಹಿ ವ್ಯವಸ್ಥೆಯ ಮಾಲೀಕ ವರ್ಗಕ್ಕೆ ಸಂಪೂರ್ಣ ಅಧಿಕಾರವನ್ನು ಕೊಡುವುದ್ದಕ್ಕಾಗಿಯೇ, ಇತ್ತೀಚೆಗೆ ಕೇಂದ್ರ ಬಿಜೆಪಿ ಸರ್ಕಾರವು 4 ಲೇಬರ್ ಕೋಡ್‌ಗಳನ್ನು ಜಾರಿಗೊಳಿಸಿದೆ. ಈ ಮೂಲಕ ಕಾರ್ಮಿಕ ವರ್ಗವು ಗಳಿಸಿದ್ದ ಬಹುತೇಕ ಎಲ್ಲಾ ನ್ಯಾಯಸಮ್ಮತ ರಕ್ಷಣೆಯನ್ನು ಕಸಿದುಕೊಂಡಿದೆ. ಇಂದು ಕಾರ್ಮಿಕ ಪರ ಇರುವ ಕಾನೂನುಗಳನ್ನು ಉಲ್ಲಂಘಿಸುವ ಪ್ರಕರಣಗಳನ್ನು ನಾಗರಿಕ ಅಪರಾಧ (civil offence) ಎಂದು ಪರಿಗಣಿಸಿ ಅತ್ಯಂತ ಕಡಿಮೆ ಪ್ರಮಾಣದ ದಂಡ ವಿಧಿಸಲಾಗುತ್ತದೆಯೇ ಹೊರತು ತಪ್ಪಿತಸ್ಥರಿಗೆ ಯಾವುದೇ ಕಟುವಾದ ಶಿಕ್ಷೆ ಆಗುವ ಪ್ರಶ್ನೆಯೇ ಇಲ್ಲ. ಮತ್ತೊಂದೆಡೆ, ತಮಗಾಗುವ ಅನ್ಯಾಯದ ವಿರುದ್ಧ ಕಾರ್ಮಿಕರೇನಾದರೂ ಪ್ರತಿಭಟಿಸಿದರೆ ಅವರಿಗೆ ದಂಡ ವಿಧಿಸಿ, ಇದನ್ನು 'ಅನೈತಿಕ' ಎಂದು ಕರೆಯಲಾಗುತ್ತಿದೆ!

ಆದ್ದರಿಂದಲೇ, ಇಂಡಿಗೋ ವಿರುದ್ಧ ಕ್ರಮ ತೆಗೆದುಕೊಳ್ಳುವುದನ್ನು ಬಿಟ್ಟು ಸರ್ಕಾರ ಇದಕ್ಕೆ ಮತ್ತಷ್ಟು ರಿಯಾಯಿತಿಯನ್ನು ಕೊಡುತ್ತದೆ. ಹೊಸ ನಿಯಮಗಳು ಡಿಸೆಂಬರ್ 1 ರಿಂದ ಜಾರಿಯಾಗಬೇಕಿತ್ತು, ಈಗ ಅದನ್ನು ಫೆಬ್ರವರಿಗೆ ಮುಂದೂಡಲಾಗಿದೆ. ಫೆಬ್ರವರಿ 10 ನಂತರವೂ ಈ ನಿಯಮಗಳನ್ನು ಇಂಡಿಗೋ ಪಾಲಿಸುತ್ತದೆ ಎಂದೇನಲ್ಲ. ಏಕೆಂದರೆ ವಿಮಾನಯಾನಗಳ ಸಂಖ್ಯೆ ಅನುಗುಣವಾಗಿ ಸಾಕಷ್ಟು ಪೈಲೆಟ್ ಹಾಗೂ ಸಿಬ್ಬಂದಿ ವರ್ಗದ ನೇಮಕಾತಿ ಇನ್ನೂ ಪ್ರಾರಂಭವಾಗಿಲ್ಲ. ಹೀಗೆ ಬಿಕ್ಕಟ್ಟನ್ನು ತನ್ನ ಕೈಯಾರ ಸೃಷ್ಟಿಸಿ ಸರ್ಕಾರಗಳನ್ನು ಮತ್ತಷ್ಟು ಒತ್ತಡಕ್ಕೆ ಸಿಲುಕಿಸಿ ಮತ್ತಷ್ಟು ರಿಯಾಯಿತಿ ಪಡೆಯುವುದೇ ಇಂಡಿಗೋ ಅಂತಹ ಏಕಸ್ವಾಮ್ಯ ಕಂಪನಿಗಳ ಕುತ್ಸಿಹ ಯೋಜನೆಯಾಗಿದೆ.

ಈ ಬಿಕ್ಕಟ್ಟನ್ನು ಮಾಲೀಕ ವರ್ಗವೇ ಸೃಷ್ಟಿಸಿದ್ದು. ಸರ್ಕಾರದ ಮೇಲೆ ಒತ್ತಡ ಹೇರಿ ನಿಯಮಗಳನ್ನು ಸಡಿಲಗೊಳಿಸುವಂತಾಗಲಿ ಎನ್ನುವುದೇ ಆ ಹುನ್ನಾರ. ಆದ್ದರಿಂದ, ಪೈಲೆಟ್ ಹಾಗೂ ಸಿಬ್ಬಂದಿಯಿಂದ ಮಾತ್ರವಲ್ಲದೆ ಈ ಸಮಸ್ಯೆಯ ವಿರುದ್ಧ ಜನಸಾಮಾನ್ಯರಿಂದ ಬೃಹತ್ ಆಂದೋಲನ ಬೇಕಾಗಿದೆ. ಈ ಮೂಲಕ ಸರ್ಕಾರಗಳ ಮೇಲೆ ಒತ್ತಡ ಹೇರಿ ಇಂಡಿಗೋದಂತಹ ಖಾಸಗಿ ಸಂಸ್ಥೆಗಳಿಗೆ ಕಟ್ಟುನಿಟ್ಟಾಗಿ ನಿಯಮಗಳನ್ನು ಅನುಸರಿಸುವಂತೆ ಮಾಡಬೇಕಿದೆ. ಇಲ್ಲವಾದಲ್ಲಿ, ಜನಸಾಮಾನ್ಯರ ಜೀವಕ್ಕೆ ಯಾವುದೇ ಭದ್ರತೆ ಇಲ್ಲದಂತಾಗುತ್ತದೆ.

---

# ಗಾಜ಼ಾದಲ್ಲಿ ಹಸಿವು–ಕ್ಷಾಮ

3ನೇ ಪುಟದಿಂದ

ಅಮೇರಿಕ ಬಾಂಬುಗಳನ್ನು ಒದಗಿಸಿತು, ನಂತರ ಇವರು "ನೆರವು" ಎಂಬ ನಾಟಕವನ್ನಾಡಿದರು. ಒಂದು ಕಡೆ ಮಗುವನ್ನು ಚಿವುಟುವುದು, ಇನ್ನೊಂದೆಡೆ ತೊಟ್ಟಿಲು ತೂಗುವ ನಾಟಕ. ಸಾಮ್ರಾಜ್ಯಶಾಹಿ–ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಆಹಾರ ಹಕ್ಕಲ್ಲ; ಅದೊಂದು ವ್ಯಾಪಾರದ ಸರಕು. ಗೋದಾಮುಗಳಲ್ಲಿ ಧಾನ್ಯ ತುಂಬಿದೆ, ಆದರೆ, ಜನರು ಹಸಿವಿನಿಂದ ಸಾಯುತ್ತಾರೆ. ಏಕೆಂದರೆ, ಇಲ್ಲಿ ಲಾಭವೊಂದೇ ಮುಖ್ಯ. ಕಾರ್ಮಿಕವರ್ಗದ ಮೊದಲ ಶಿಕ್ಷಕರಾದ ಕಾರ್ಲ್‌ಮಾರ್ಕ್ಸ್, "ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಹಸಿವು ಎಂಬುದು ಸಾಮಾಜಿಕ ಹತ್ಯೆ" ಎಂದು ಹೇಳಿದರು. ಅದು ಈ ವ್ಯವಸ್ಥೆಯು ಉದ್ದೇಶಪೂರ್ವಕವಾಗಿ ಸೃಷ್ಟಿಸಿದ ಸಾವಿನ ಕೂಪ. ಇದಕ್ಕೆ ಗಾಜ಼ಾ ಅಪವಾದವಲ್ಲ; ಇದೇ ಸಾಮ್ರಾಜ್ಯಶಾಹಿ ವ್ಯವಸ್ಥೆಯ ನಗ್ನ ರೂಪ.

### "ಆಹಾರ ಏರ್‌ಡ್ರಾಪ್" ಎಂಬ ನಾಟಕ

ಪಾಶ್ಚಿಮಾತ್ಯ ಮಾಧ್ಯಮಗಳು ಪ್ಯಾರಾಶೂಟ್‌ಗಳಿಂದ ಬೀಳುವ ಆಹಾರದ ಪ್ಯಾಕೆಟ್‌ಗಳನ್ನು ತೋರಿಸಿ ಹಸಿವು ನಿವಾರಿಸಲು "ಪ್ರಯತ್ನ ಮಾಡಲಾಗುತ್ತಿದೆ" ಎಂಬ ಭ್ರಮೆಯನ್ನು ಹುಟ್ಟಿಸುತ್ತವೆ. ಆದರೆ, ಅದು ಮಾನವೀಯತೆ ಅಲ್ಲ; ಅಪಮಾನ. ಪ್ಯಾಲೆಸ್ಟೀನಿನ ಪ್ರಮುಖ ಲೇಖಕ ಘಸಾನ್ ಕನಾಫಾನಿ, "ವಸಾಹತುಶಾಹಿಯು ಕೇವಲ ಕೊಲ್ಲುವುದಿಲ್ಲ; ಅದು ಹಸಿವಿನಿಂದ ನರಳುವಂತೆ ಮಾಡುತ್ತದೆ, ಅವಮಾನಿಸುತ್ತದೆ" ಎಂದು ಒಮ್ಮೆ ಬರೆದಿದ್ದರು. ಆಕಾಶದಿಂದ ಬೀಳುವ ಆಹಾರ ಪ್ಯಾಕೆಟ್‌ಗಳು ಈ ನವ ವಸಾಹತುಶಾಹಿ ವ್ಯವಸ್ಥೆಯ ಪರಿಪೂರ್ಣ ಸ್ವರೂಪ. ಜನರ ಘನತೆಯ ಬದುಕು ಮತ್ತು ಭೂಮಿಯನ್ನು ಕಸಿದುಕೊಂಡು, ನಂತರ ಅವರಿಗೆ ಭಿಕ್ಷೆಯ ರೂಪದಲ್ಲಿ ಅನ್ನವನ್ನು ಎಸೆಯುವುದು. ಹಸಿವು ರಾಜಕೀಯದಿಂದ ಹುಟ್ಟಿದೆ; "ಆಹಾರ"ವು ಅದೇ ರಾಜಕೀಯದ ಭಾಗವಾಗಿದೆ.

### ಹಸಿವು: ಸಾಮ್ರಾಜ್ಯಶಾಹಿಗಳ ನೆಚ್ಚಿನ ಆಯುಧ

ಗಾಜ಼ಾದ ಇತಿಹಾಸದಲ್ಲಿ ಕ್ಷಾಮವೇನೂ ಹೊಸದಲ್ಲ. 1943ರಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ಉದ್ದೇಶಪೂರ್ವಕವಾಗಿ ಬಂಗಾಳದಲ್ಲಿ ಕ್ಷಾಮವನ್ನು ಸೃಷ್ಟಿಸಿದ್ದರು. ಆಗ ಲಕ್ಷಾಂತರ ಭಾರತೀಯರು ಸತ್ತಾಗ, ಬ್ರಿಟನ್ನಿನ ಪ್ರಧಾನಿಯಾದ ಚರ್ಚಿಲ್, ಭಾರತೀಯರು "ಮೊಲಗಳ ಹಾಗೆ ಸಂತಾನೋತ್ಪತ್ತಿ ಮಾಡುತ್ತಾರೆ" ಎಂದು ವ್ಯಂಗ್ಯವಾಡಿದ್ದರು. ಸುಡಾನ್, ಸೋಮಾಲಿಯಾ, ಯೆಮನ್ – ಈ ಎಲ್ಲ ರಾಷ್ಟ್ರಗಳಲ್ಲಿಯೂ ಸಾಮ್ರಾಜ್ಯಶಾಹಿ ಶಕ್ತಿಗಳು ಹಸಿವನ್ನು ಯುದ್ಧೋಪಾಯವಾಗಿ ಬಳಸಿವೆ. ಸುಡಾನಿನಲ್ಲಿ ನೆರವನ್ನು ತಡೆಹಿಡಿಯಲಾಯಿತು; ಸೋಮಾಲಿಯಾದಲ್ಲಿ ಅಮೇರಿಕ, ಭಯೋತ್ಪದಕರನ್ನು ಮಟ್ಟಹಾಕುವ ನೆಪವೊಡ್ಡಿ ನೆರವಿಗೆ ಕಡಿವಾಣ ಹಾಕಿ ಲಕ್ಷಾಂತರ ಜನರನ್ನು ಸಾವಿನ ದವಡೆಗೆ ದೂಡಿದೆ. ಯೆಮನ್‌ನಲ್ಲಿ ಅಮೇರಿಕ – ಸೌದಿ ಸೈನಿಕ ಬಲದಿಂದ ಹೇರಿದ ನಿಷೇಧ ಸಾವಿರಾರು ಜೀವಗಳನ್ನು ನಾಶ ಮಾಡಿತು.

ಈ ಎಲ್ಲ ಸಂದರ್ಭಗಳ ಮಾದರಿ ಒಂದೇ. ಕ್ಷಾಮ ಪ್ರಕೃತಿ ಸಹಜ ದುರಂತವಲ್ಲ; ಅದು ಸಾಮ್ರಾಜ್ಯಶಾಹಿ–ಬಂಡವಾಳಶಾಹಿ ದೇಶಗಳ ಯುದ್ಧೋದ್ಯಮದ ಆಯುಧ. ನಾಶವಾದ ಹೊಲಗಳ ಉಪಗ್ರಹ ಚಿತ್ರಗಳು, ಹಸಿದ ಮಕ್ಕಳ ವೀಡಿಯೊಗಳು, ಆಹಾರದ ಸಾಲುಗಳಲ್ಲಿ ಕೊಲೆಗೀಡಾದ ಜನರು – ಇವು ಲೋಕದ ಜನರ ಹೃದಯವನ್ನು ಕಲಕಿದರೆ, ಇಸ್ರೇಲ್ ಮತ್ತು ಅಮೇರಿಕಗಳು ಇದನ್ನು "ಅಪಪ್ರಚಾರ" ಎಂದು ತಳ್ಳಿಹಾಕುತ್ತವೆ. ಪಾಶ್ಚಾತ್ಯ ಮಾಧ್ಯಮ ಇದೇ ಶಬ್ದಗಳನ್ನು ಪುನರುಚ್ಚರಿಸಿ ಗಾಜ಼ಾದ ಅಳಲು ಅರಣ್ಯರೋದನವಾಗುವಂತೆ ಮಾಡುತ್ತದೆ.

### ಅಂತರರಾಷ್ಟ್ರೀಯ ಕಾನೂನು ಎಂಬ ಅಪಹಾಸ್ಯ

ಉದ್ದೇಶಪೂರ್ವಕವಾಗಿ ನಾಗರಿಕರನ್ನು ಹಸಿವಿನಿಂದ ನರಳುವಂತೆ ಮಾಡುವುದು, ಅಂತರರಾಷ್ಟ್ರೀಯ ಕಾನೂನಿನ ಪ್ರಕಾರ ಯುದ್ಧಾಪರಾಧ ಹಾಗೂ ಮಾನವೀಯತೆಯ ಮೇಲಿನ ಅಪರಾಧ ಎನ್ನಿಸಿಕೊಳ್ಳುತ್ತದೆ. ಆದರೆ, ಆ ಕಾನೂನೇ ಸಾಮ್ರಾಜ್ಯಶಾಹಿಗಳ ಕಪಿಮುಷ್ಟಿಯಲ್ಲಿರುವಾಗ ಅದು ಸಂಪೂರ್ಣ ನಿಷ್ಪ್ರಯೋಜಕವಾಗುತ್ತದೆ. ಅಮೇರಿಕ ನಿರಂತರವಾಗಿ ಇಸ್ರೇಲನ್ನು ರಕ್ಷಿಸುತ್ತದೆ; ಶಸ್ತ್ರಾಸ್ತ್ರಗಳನ್ನು ಪೂರೈಸುತ್ತದೆ. ವಿಟೊ ಅಧಿಕಾರವನ್ನು ಚಲಾಯಿಸುತ್ತದೆ. ಅಪರಾಧಿಗಳೇ ನ್ಯಾಯ ನೀಡುವವರಾದಾಗ, ನ್ಯಾಯ ಕಾಡಿನಪಾಲಾಗುತ್ತದೆ. ಬೇಲಿಯೇ ಎದ್ದು ಹೊಲ ಮೇಯುತ್ತದೆ. ಜನತೆ ಇದರ ವಿರುದ್ಧ ಹೋರಾಟಗಳನ್ನು ಕಟ್ಟಿದಾಗ ಮಾತ್ರ ಈ ಬಂಡವಾಳಶಾಹಿಗಳಿಗೆ ತಡೆಯೊಡ್ಡಲು ಸಾಧ್ಯ. ಇಲ್ಲದಿದ್ದರೆ, ಸಾಮ್ರಾಜ್ಯಶಾಹಿಗಳ ಪಾತಕೀ ಚರಿತ್ರೆಯ ಪುಸ್ತಕಕ್ಕೆ ಮತ್ತೊಂದು ಅಧ್ಯಾಯವಾಗುತ್ತದೆ, ಅಷ್ಟೆ.

### ಈಗ ತತ್‌ಕ್ಷಣ ಆಗಬೇಕಾದದ್ದೇನು?

* ಶಾಶ್ವತ ಯುದ್ಧ ವಿರಾಮ ಮತ್ತು ನಿರ್ಬಂಧವಿಲ್ಲದ ಮಾನವೀಯ ನೆರವಿನ ಪ್ರವೇಶಕ್ಕೆ ಅವಕಾಶ.
* ಪೌಷ್ಟಿಕ ಆಹಾರ ಮತ್ತು ವೈದ್ಯಕೀಯ ನೆರವು ದೊರಕಬೇಕು. ಕೇವಲ ಗೋಧಿ ಚೀಲಗಳಲ್ಲ.
* ಕೃಷಿಯ ಪುನರ್ಸ್ಥಾಪನೆ ಮತ್ತು ಸ್ವಾವಲಂಬನೆಗಾಗಿ ನೆರವು.
* ಹಸಿವನ್ನು ಯುದ್ಧಾಪರಾಧವಾಗಿ ಪರಿಗಣಿಸಿ ಹೊಣೆಗಾರರಿಗೆ ಉಗ್ರ ಶಿಕ್ಷೆ.

ಹೀಗಾಗಿ, ಗಾಜ಼ಾದಲ್ಲಿ ನಡೆಯುತ್ತಿರುವ ಹಸಿವು ಮಾನವೀಯ ಬಿಕ್ಕಟ್ಟಲ್ಲ. ಅದು ಯೋಜಿತ ರಾಜಕೀಯ ಅಪರಾಧ ಕೃತ್ಯ. ಅಲ್ಲಿ ದುರ್ಬಲರನ್ನು ಹಸಿವಿನಿಂದ ನರಳುವಂತೆ ಮಾಡಿ, ಸಾಮ್ರಾಜ್ಯವಾದವು ಅದನ್ನು ಭದ್ರತೆ ಎಂದು ಕರೆಯುತ್ತದೆ. ಬಂಡವಾಳವಾದಕ್ಕೆ ಹಸಿವು ಜನರನ್ನು ಸದೆಬಡಿಯುವ ಒಂದು ತಂತ್ರವಾಗಿದೆ. ಅದು ನೆರವನ್ನೇ ತನ್ನ ಪ್ರಚಾರದ ಸಾಮಾಗ್ರಿಯನ್ನಾಗಿಸಿಕೊಳ್ಳುತ್ತದೆ. ಈ ಘಳಿಗೆಯ ತುರ್ತು, ಬರೀ ಬಾಯುಪಚಾರದ ಸಾಂತ್ವನದ ಮಾತುಗಳಲ್ಲ. ಗಡಿಗಳನ್ನು ದಾಟಿ ಸಾಮ್ರಾಜ್ಯವಾದ–ಬಂಡವಾಳವಾದವು ಹೇರಿರುವ ನಿರ್ಬಂಧಗಳನ್ನು ಒಡೆಯಬೇಕು. ಸಾಮ್ರಾಜ್ಯಶಾಹಿಗಳು ಸೃಷ್ಟಿಸಿದ ಹಸಿವಿನ ಸೌಧವನ್ನು ಕೆಡವಬೇಕು. ಅಧಿಕಾರ ಹಾಗೂ ಲಾಭಕ್ಕಾಗಿ ಲಕ್ಷಾಂತರ ಜನರನ್ನು ಹಸಿವಿಗೆ ದೂಡಿ ಕೊಲ್ಲುವ ವ್ಯವಸ್ಥೆಗೆ ಅಂತ್ಯ ಹಾಡಬೇಕು.

# ಸರ್ಕಾರಿ ಶಾಲೆಗಳ ಧ್ವಂಸಕ್ಕಾಗಿ ಕೆ.ಪಿ.ಎಸ್ ಮ್ಯಾಗ್ನೆಟ್ ಯೋಜನೆ!

### ಏನಿದು ಕೆ.ಪಿ.ಎಸ್ ಮ್ಯಾಗ್ನೆಟ್ ಯೋಜನೆ?

ಹೆಸರು ಹೊಸದಿರಬಹುದು, ಆದರೆ ಈ ಹಿಂದೆ ಬಿಜೆಪಿ ಸರ್ಕಾರ ಜಾರಿಗೊಳಿಸಿದ್ದ ಸರ್ಕಾರಿ ಶಾಲೆಗಳ ವಿಲೀನ ಯೋಜನೆಗೂ ಹಾಗೂ ಪ್ರಸಕ್ತ ಕಾಂಗ್ರೆಸ್ ಸರ್ಕಾರವು ಜಾರಿಗೊಳಿಸಿದ್ದ 'ಹಬ್ ಅಂಡ್ ಸ್ಪೋಕ್' ಮಾದರಿಗೂ ಏನೂ ವ್ಯತ್ಯಾಸವಿಲ್ಲ. ಸಾರ್ವಜನಿಕ ಒತ್ತಡಕ್ಕೆ ಮಣಿದು ಪ್ರತಿ ಬಾರಿಯೂ ಹಿಂಪಡೆದಿದ್ದ ಯೋಜನೆಗಳಿಗೆ ಈಗ 'ಕೆ.ಪಿ.ಎಸ್ ಮ್ಯಾಗ್ನೆಟ್ ಶಾಲೆ' ಎಂಬ ಹೊಸ ಹೆಸರಿಟ್ಟು ಸರ್ಕಾರಿ ಶಾಲೆಗಳನ್ನು ಮುಚ್ಚುವ ಕೆಲಸಕ್ಕೆ ಸರ್ಕಾರವು ಅಸ್ತು ಎಂದಿದೆ.

### ಸರ್ಕಾರದ ಆದೇಶ ಏನೆನ್ನುತ್ತದೆ?

1. 'ಸಣ್ಣ ಗಾತ್ರದ ಶಾಲೆಗಳನ್ನು ಸಂಭಾವ್ಯ KPS ಶಾಲೆಗಳ ಆಯ್ಕೆಯಲ್ಲಿ ಸಮ್ಮಿಳಿತಗೊಳಿಸಿ, ಶಾಲಾ ಏಕೀಕರಣ ಪ್ರಕ್ರಿಯೆಗೆ ಆದ್ಯತೆ ನೀಡಬೇಕು', ಎಂದು. ಸಣ್ಣ ಗಾತ್ರದ ಶಾಲೆಗಳ ಸಮಸ್ಯೆಗಳನ್ನು ಪರಿಹರಿಸಲು ಶಿಕ್ಷಣ ಇಲಾಖೆಯು ಕನಿಷ್ಠವೆಂದರೆ 1,200 ವಿದ್ಯಾರ್ಥಿಗಳ ಸಾಮರ್ಥ್ಯದೊಂದಿಗೆ ಸಂಯುಕ್ತ ಹಾಗೂ ಸಂಪನ್ಮೂಲ ಶಾಲೆಗಳಾಗಿ ಕೆ.ಪಿ.ಎಸ್ ಮ್ಯಾಗ್ನೆಟ್ ಶಾಲೆಗಳನ್ನು ಸ್ಥಾಪಿಸುವ ಗುರಿಯನ್ನು ಹೊಂದಿದೆ.
2. 3 ರಿಂದ 5 ಕಿ.ಮೀ. ವ್ಯಾಪ್ತಿಯೊಳಗಿನ ಸಣ್ಣ ಗಾತ್ರದ ಶಾಲೆಗಳನ್ನು ಆಯ್ದ ಮ್ಯಾಗ್ನೆಟ್ ಶಾಲೆಗೆ ಜೋಡಿಸುವ ಸಂಭಾವ್ಯ ಶಾಲೆಗಳನ್ನು ಗುರುತಿಸಲಾಗಿದೆ.
3. 1 ರಿಂದ 5 ಕಿ.ಮೀ. ವ್ಯಾಪ್ತಿಯ ಒಳಗಿನ ಸಣ್ಣ ಸರ್ಕಾರಿ ಶಾಲೆಗಳನ್ನು ಪ್ರಸ್ತಾಪಿತ ಕರ್ನಾಟಕ ಪಬ್ಲಿಕ್ ಶಾಲೆ(ಕೆಪಿಎಸ್)ಗಳೊಂದಿಗೆ ಸಮ್ಮಿಳಿತಗೊಳಿಸುವುದು. (ಅಂದರೆ, ಒಂದು ಕೆಪಿಎಸ್ ಮ್ಯಾಗ್ನೆಟ್ ಶಾಲೆಯ ಸುತ್ತಮುತ್ತಲಿನ 8 ರಿಂದ 10 ಸರ್ಕಾರಿ ಶಾಲೆಗಳು ಶಾಶ್ವತವಾಗಿ ಮುಚ್ಚುತ್ತವೆ)

ಈ ಆದೇಶದಲ್ಲಿ ಉಲ್ಲೇಖವಾಗಿರುವ 'ಸಣ್ಣ ಗಾತ್ರದ ಶಾಲೆ, ಚಿಕ್ಕ ಶಾಲೆ' ಎಂಬ ಶಬ್ದಗಳ ಅರ್ಥವನ್ನು ಹುಡುಕಿದರೆ ಆಘಾತವಾಗುತ್ತದೆ. ಉದಾ: ಚನ್ನಪಟ್ಟಣ ಜಿಲ್ಲೆಯ ಹೊಂಗನೂರು ಕೆಪಿಎಸ್ ಶಾಲೆಗೆ ವಿಲೀನವಾದ 7 ಶಾಲೆಗಳಲ್ಲಿ, ಒಂದು ಶಾಲೆಯಲ್ಲಿ 100 ಮಕ್ಕಳಿದ್ದಾರೆ. ಉಳಿದ ಶಾಲೆಗಳಲ್ಲಿ 82, 80, 77, 31, 20, 2 ಮಕ್ಕಳಿದ್ದಾರೆ. 80–100 ಮಕ್ಕಳಿರುವ ಶಾಲೆಗಳು ಸಣ್ಣ ಗಾತ್ರದ ಶಾಲೆಗಳೇ? ಕಲಬುರಗಿ, ಯಾದಗಿರಿ, ಬೆಳಗಾವಿ ಜಿಲ್ಲೆಗಳಲ್ಲಿ 150 – 200 ಮಕ್ಕಳಿರುವ, 70 – 80 ವರ್ಷದ ಹಳೆಯ ಶಾಲೆಗಳು ಮುಚ್ಚುವ ಶಾಲೆಗಳ ಪಟ್ಟಿಯಲ್ಲಿವೆ! 'ಒಂದು ಮಗುವಿದ್ದರೂ ಶಾಲೆ ಮುಚ್ಚುವುದಿಲ್ಲ' ಎಂಬ ಸಚಿವರ ಹೇಳಿಕೆಗೂ, ಅವರ ಇಲಾಖೆಯಿಂದಲೇ ಹೊರಡಿಸಲಾದ ಆದೇಶಕ್ಕೂ ತಾಳಮೇಳವಿಲ್ಲ! ವಿಲೀನಗೊಳಿಸಲಾಗುವ ಶಾಲೆಗಳ ಶಿಕ್ಷಕರನ್ನು ವರ್ಗಾವಣೆ ಮಾಡುವ ನಿರ್ದೇಶನವೂ ಈ ಆದೇಶದಲ್ಲಿದೆ!

ಕೆಪಿಎಸ್ ಶಾಲೆಗಳಿಗಾಗಿ ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್(ಎಡಿಬಿ)ಯಿಂದ ರೂ.2,500 ಕೋಟಿ ಸಾಲವನ್ನು ಸರ್ಕಾರವು ಈಗಾಗಲೇ ಪಡೆದಿದೆ. ಈ ಹಣವನ್ನು ಪಡೆಯಲು ಯಾವಯಾವ ಷರತ್ತುಗಳಿಗೆ ರಾಜ್ಯ ಸರ್ಕಾರ ಸಹಿ ಹಾಕಿದೆ ಎಂಬ ಪ್ರಶ್ನೆಯ ಬಗ್ಗೆ ರಾಜ್ಯ ಸರ್ಕಾರವು ಮುಗುಮ್ಮಾಗಿದೆ, ಎಲ್ಲಾ ದಾಖಲೆಗಳನ್ನು ಬಹಿರಂಗಪಡಿಸುತ್ತಿಲ್ಲ. ಈ ಬೃಹತ್ ಸಾಲ ಹಾಗೂ ಬಡ್ಡಿಯನ್ನು ಮುಂದೆ ಜನರೇ ತೀರಿಸಬೇಕಾಗುತ್ತದೆಯಲ್ಲವೇ! ಕಲ್ಯಾಣ ಕರ್ನಾಟಕ ವ್ಯಾಪ್ತಿಯ 7 ಜಿಲ್ಲೆಗಳಲ್ಲಿ 200 ಕೆಪಿಎಸ್ ಶಾಲೆಗಳಿಗೆ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಅನುದಾನದಲ್ಲಿ ಹೆಚ್ಚುವರಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಶಾಲಾ ಶಿಕ್ಷಣ ಇಲಾಖೆಗೆ ಅಧಿಕಾರ ನೀಡಲಾಗಿದೆಯಂತೆ. ಕಲ್ಯಾಣ ಕರ್ನಾಟಕದ ಅಭಿವೃದ್ಧಿಗಾಗಿ ಮೀಸಲಿಟ್ಟ ದುಡ್ಡನ್ನೂ ಕಬಳಿಸುವ ಹುನ್ನಾರ ಇದು. ಅಭಿವೃದ್ಧಿಯ ಹಣವನ್ನು 'ಅತ್ಯಂತ ಹಿಂದುಳಿದ ಪ್ರದೇಶದ' ಸುಮಾರು 2,000 ಶಾಲೆಗಳನ್ನು ಮುಚ್ಚಲು ಬಳಸಲಾಗುತ್ತಿದೆ. ಇಷ್ಟೂ ಸಾಲದ್ದಕ್ಕೆ ಕೆಪಿಎಸ್ ಶಾಲೆಗಳ ಹೊಸ ಕಟ್ಟಡಗಳಿಗಾಗಿ ಸರ್ಕಾರವು ಖಾಸಗಿ ಕಂಪನಿಗಳತ್ತ ಕೈಚಾಚಿದೆ. 6ನೇ ತರಗತಿಯಿಂದ ನೀಡಲಾಗುವ ವೃತ್ತಿಪರ ಶಿಕ್ಷಣದ ಪಠ್ಯಕ್ರಮವನ್ನೂ ಸಹ 'ಉದ್ಯಮ ಪಾಲುದಾರರ' ಸಹಾಯದಿಂದ ವಿನ್ಯಾಸಗೊಳಿಸಲಾಗುವುದಂತೆ. 'ಶಾಲಾ ನಿರ್ವಹಣೆ ಹೊರಗುತ್ತಿಗೆ'ಗೆ, ಶಾಲೆಗಳು ತಮ್ಮ ಸ್ವಂತ ಮೂಲದಿಂದ ಆದಾಯವನ್ನು ಸಂಗ್ರಹಿಸಬೇಕಂತೆ. ಕೆ.ಪಿ.ಎಸ್ ಮ್ಯಾಗ್ನೆಟ್ ಶಾಲೆಗಳನ್ನು ಕ್ರಮೇಣವಾಗಿ ಖಾಸಗಿ ಕಂಪನಿಗಳಿಗೆ ಪರಭಾರೆ ಮಾಡುವ ಸಂಚು ಸ್ಪಷ್ಟವಾಗಿ ಕಾಣುವುದಲ್ಲವೇ!

ಕೆಪಿಎಸ್ ಶಾಲೆಗೆ ಮಕ್ಕಳನ್ನು ಕರೆತರಲು ಉಚಿತ ಬಸ್ ಸೌಲಭ್ಯ ಒದಗಿಸಲಾಗುವುದೆಂದು ಸರ್ಕಾರದ ಆದೇಶವಿದೆ ಎಂದು ಸಚಿವರು ಹೇಳಿದ್ದಾರೆ. ಆದರೆ, ಬಸ್ ವ್ಯವಸ್ಥೆಯನ್ನು ಮಾಡುವ ಜವಾಬ್ದಾರಿಯನ್ನು ಎಸ್‌ಡಿಎಮ್‌ಸಿಗಳಿಗೆ ಸರ್ಕಾರವು ವಹಿಸಿದೆ. ಇದೇ ವಿರೋಧಾಭಾಸ! ರಾಜ್ಯದಲ್ಲಿ ಬಹುತೇಕ ಹಳ್ಳಿಗಳಿಗೆ ಸಮರ್ಪಕ ಬಸ್ ಸೌಲಭ್ಯಗಳೇ ಇಲ್ಲದಿರುವಾಗ, ಹಳ್ಳಿಹಳ್ಳಿಗಳಿಂದ ಮಕ್ಕಳನ್ನು ಕೆಪಿಎಸ್ ಶಾಲೆಗೆ ಕರೆದೊಯ್ಯಲು ಬೇಕಾಗುವ ಸಾವಿರಾರು ಬಸ್‌ಗಳ ಪೂರೈಕೆಯಾದರೋ ಹೇಗೆ?

### ಅಮೇರಿಕದಲ್ಲಿ ವಿಫಲವಾಗಿ ತಿರಸ್ಕೃತವಾಗಿರುವ "ಮ್ಯಾಗ್ನೆಟ್ ಶಾಲೆ ಯೋಜನೆ"ಯ ಜಾರಿ ನಮ್ಮ ರಾಜ್ಯದಲ್ಲಿ...

ಶೈಕ್ಷಣಿಕ ಜಿಲ್ಲೆಗೊಂದು "ಮ್ಯಾಗ್ನೆಟ್ ಶಾಲೆ"ಯನ್ನು ಅಮೇರಿಕದಲ್ಲಿ 50 ವರ್ಷಗಳ ಹಿಂದೆ ಜಾರಿಗೆ ತರಲಾಯಿತು. ಅಲ್ಲಿ ವಿಫಲವಾದ "ಮ್ಯಾಗ್ನೆಟ್ ಶಾಲೆ ಯೋಜನೆಯ" ದುರಂತ ಅನುಕರಣೆಯೇ ಕರ್ನಾಟಕದ "ಕೆಪಿಎಸ್ ಮ್ಯಾಗ್ನೆಟ್ ಶಾಲೆಗಳು" ಎಂಬ ಅತ್ಯಂತ ಆಘಾತಕಾರಿ ವಿಚಾರ ಗೌಪ್ಯವಾಗೇನೂ ಉಳಿದಿಲ್ಲ. ಅಮೇರಿಕದ ಅನುಭವವೇನೆಂದರೆ, ಅಲ್ಲಿ, ನೆರೆಹೊರೆಯ ಶಾಲೆಗಳು ಮುಚ್ಚಿ ಹೋದವು, ದೂರದ ಮ್ಯಾಗ್ನೆಟ್ ಶಾಲೆಗಳಿಗೆ ಹೋಗಿಬರುವ ಸಾರಿಗೆ ವೆಚ್ಚವನ್ನು ಭರಿಸುವುದು ಸಹಸ್ರಾರು ಬಡ ಕುಟುಂಬಗಳಿಗೆ ಅಸಾಧ್ಯವಾಯಿತು. ಹೀಗಾಗಿ, ಬಡಜನರು, ಕಪ್ಪುಜನರು, ಲ್ಯಾಟಿನ್ ಅಮೇರಿಕನ್ನರು ಮತ್ತು ದುಡಿಯುವ ಜನರ ಕುಟುಂಬಗಳಿಗೆ ಸೇರಿದ ಮಕ್ಕಳು ಕ್ರಮೇಣ ಶಿಕ್ಷಣದಿಂದ ವಂಚಿತರಾದರು. ನಂತರ, ಮ್ಯಾಗ್ನೆಟ್ ಶಾಲೆಗಳಿಗೆ ಧನಸಹಾಯ ನೀಡುವ ಜವಾಬ್ದಾರಿಯಿಂದ ಸರ್ಕಾರ ಕೈ ತೊಳೆದುಕೊಂಡಿತು ಮತ್ತು ಆಗ ಮ್ಯಾಗ್ನೆಟ್ ಶಾಲೆಗಳ ನಿರ್ವಹಣೆಯನ್ನು ಕಾರ್ಪೊರೇಟ್ ಉದ್ಯಮಪತಿಗಳಿಗೆ ವಹಿಸಲಾಯಿತು. ಈ ಶಾಲೆಗಳು ಈಗ, ದುಬಾರಿ ಶುಲ್ಕಗಳನ್ನು ಸಂಗ್ರಹಿಸುವ ಹಣವುಳ್ಳವರ ಶಾಲೆಗಳಾಗಿವೆ!

ಸಾರ್ವಜನಿಕ ಶಿಕ್ಷಣವನ್ನು ಧ್ವಂಸ ಮಾಡಿರುವ ಇತಿಹಾಸವುಳ್ಳ ಅಮೇರಿಕದ "ಮ್ಯಾಗ್ನೆಟ್ ಶಾಲೆ ಯೋಜನೆ" ಯನ್ನು ಕರ್ನಾಟಕದಲ್ಲಿ ಏಕೆ ಯಥಾವತ್ತಾಗಿ ಅನುಷ್ಠಾನಕ್ಕೆ ತರಲಾಗುತ್ತಿದೆ? ಒಟ್ಟಾರೆಯಾಗಿ, ಕೆಪಿಎಸ್ ಶಾಲೆಯ ಮೂಲಕ ಸಾರ್ವತ್ರಿಕ ಶಿಕ್ಷಣದ ಹರಣವಾಗುತ್ತಿದೆಯಲ್ಲವೇ! ಇದಕ್ಕೆ ಹೊಂದಿಕೊಂಡೇ ಸರ್ಕಾರವು ಕುತರ್ಕವೊಂದನ್ನು ಪ್ರಚಾರ ಮಾಡುತ್ತಿದೆ. ಅದೆಂದರೆ, ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕ್ಷೀಣಿಸುತ್ತಿದೆ ಎಂದು.

### ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಕುಸಿಯಲು ಕಾರಣವೇನು?

ಶಾಲೆಗಳ ವಾಸ್ತವ ಚಿತ್ರಣವು ಹೀಗಿದೆ. ರಾಜ್ಯದ ಸರ್ಕಾರಿ ಶಾಲೆಗಳಲ್ಲಿ 59,000ಕ್ಕೂ ಅಧಿಕ ಶಿಕ್ಷಕರ ಹುದ್ದೆಗಳು ಖಾಲಿ ಇವೆ. ರಾಜ್ಯದ 7,000 ಸರ್ಕಾರಿ ಶಾಲೆಗಳು ಏಕೋಪಾಧ್ಯಾಯ ಶಾಲೆಗಳಾಗಿವೆ. ಶಾಲೆಯ ಮಕ್ಕಳಿಗೆ ಮೊಟ್ಟೆ ತರುವ, ಬಿಸಿ ಊಟಕ್ಕೆ ತರಕಾರಿ ತರುವ, ಪ್ರತಿನಿತ್ಯ ಮಾಡಿದ ಎಲ್ಲ ಕೆಲಸಗಳ ದಾಖಲೆಗಳನ್ನು ಬರೆಯುವ ಹಾಗೂ ಇಲಾಖೆಯ ಹತ್ತು ಹಲವಾರು ಆಡಳಿತಾತ್ಮಕ ಕೆಲಸಗಳನ್ನು ಶಾಲೆಯ ಶಿಕ್ಷಕರು ನಿರ್ವಹಿಸುತ್ತಾರೆ. ಅಂದರೆ, ಬೋಧನೆಯನ್ನು ಬಿಟ್ಟು ನಿಜಕ್ಕೂ 108 ಪಠ್ಯೇತರ ಕೆಲಸಗಳನ್ನು ಶಿಕ್ಷಕರು ಮಾಡುತ್ತಿದ್ದಾರೆ. ಇನ್ನು ಗುತ್ತಿಗೆ ಆಧಾರದಲ್ಲಿ ನೇಮಕಗೊಳ್ಳುವ ಶಿಕ್ಷಕರ ಜೀವನ ನಿರ್ವಹಣೆಯೇ ಕಷ್ಟಕರವಾಗಿರುವಾಗ ಗುಣಮಟ್ಟದ ಬೋಧನೆಯನ್ನು ಅವರಿಂದ ಬಯಸುವುದು ಸಾಧ್ಯವೇ? ರಾಜ್ಯದ 21,000ಕ್ಕೂ ಅಧಿಕ ಸರ್ಕಾರಿ ಶಾಲೆಗಳ ಕಟ್ಟಡಗಳು ದುರಸ್ತಿಗಾಗಿ ವರ್ಷಗಳಿಂದ ಕಾಯುತ್ತಿವೆ. 3,500ಕ್ಕೂ ಅಧಿಕ ಶಾಲೆಗಳಲ್ಲಿ ಬಳಕೆಗೆ ಯೋಗ್ಯ ಶೌಚಾಲಯವಿಲ್ಲ, 1,000ಕ್ಕೂ ಅಧಿಕ ಶಾಲೆಗಳಲ್ಲಿ ಯೋಗ್ಯ ವಿದ್ಯುತ್ ಸೌಲಭ್ಯವಿಲ್ಲ, ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಅತ್ಯಂತ ಶೋಚನೀಯ ಪರಿಸ್ಥಿತಿಯಲ್ಲಿರುವ ನಮ್ಮೂರ ಶಾಲೆಗಳು ಪೋಷಕರ ಹೃದಯದಲ್ಲಿ ನಡುಕ ಹುಟ್ಟಿಸುತ್ತವೆ. ತಮ್ಮ ಮಕ್ಕಳ ಶಿಕ್ಷಣ ಹಾಗೂ ಭವಿಷ್ಯದ ಬಗೆಗಿನ ಆತಂಕದಿಂದಾಗಿ ಪೋಷಕರು ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಕಳುಹಿಸಲು ಅಂಜುತ್ತಾರೆ. ಬೇರೆ ನಿರ್ವಾಹವಿಲ್ಲದೆ ಹೊಟ್ಟೆಬಟ್ಟೆ ಕಟ್ಟಿ ಪೋಷಕರು ತಮ್ಮ ಮಕ್ಕಳನ್ನು ಹತ್ತಿರದ ಖಾಸಗಿ ಶಾಲೆಗೆ ಸೇರಿಸಿದರೆ, ಬಡ ಕೂಲಿಕಾರರು, ರೈತರು ತಮ್ಮ ಮಕ್ಕಳನ್ನು ಶಾಲೆಯಿಂದ ಬಿಡಿಸಿ ದುಡಿಮೆ ಮಾಡಲು ಜೊತೆಯಲ್ಲಿ ಕರೆದೊಯ್ಯುತ್ತಾರೆ. ಶಿಕ್ಷಣಕ್ಕೆ ಅವಶ್ಯಕ ಹಣಕಾಸನ್ನು ನೀಡಿ, ಕಾಲಕಾಲಕ್ಕೆ ಶಿಕ್ಷಕರನ್ನು ನೇಮಕ ಮಾಡಿಕೊಂಡು, ಮೂಲಭೂತ ಸೌಕರ್ಯಗಳನ್ನು ಒದಗಿಸಿದ್ದರೆ ನಮ್ಮೂರ ಶಾಲೆಗಳಿಗೆ ಈ ದುಸ್ಥಿತಿ ಖಂಡಿತ ಬರುತ್ತಿರಲಿಲ್ಲ ಅಲ್ಲವೇ! ಹೀಗೆ, ಶಿಕ್ಷಣ ನೀಡಬೇಕಿರುವ ತನ್ನ ಸಂವಿಧಾನಬದ್ಧ ಜವಾಬ್ದಾರಿಯಿಂದ ಸರ್ಕಾರವು ಕೈ ಕೊಡವಿಕೊಂಡಿದೆ.

### ಈಗೇನಾಗಬೇಕು

ಭಾರತವನ್ನೂ ಸೇರಿದಂತೆ, ಜಗತ್ತಿನಾದ್ಯಂತ ಇಂದು ಏಕಸ್ವಾಮ್ಯ ಬಂಡವಾಳಗಾರರ ಹಿಡಿತದಲ್ಲಿ ಹೇರಳವಾಗಿ ಬಂಡವಾಳ ಶೇಖರಣೆಯಾಗಿದೆ. ಈ ಹೇರಳ ಬಂಡವಾಳವನ್ನು ಹೂಡಲು ಬಂಡವಾಳಶಾಹಿಗಳಿಗೆ ಲಾಭದಾಯಕ ಕ್ಷೇತ್ರಗಳ ಅವಶ್ಯಕತೆ ಇದೆ. ಜಾಗತೀಕರಣದ ಕಾಲದ ನಂತರದಲ್ಲಿ ಸಾಮ್ರಾಜ್ಯಶಾಹಿ – ಬಂಡವಾಳಶಾಹಿಗಳು ಸೇವಾ ಕ್ಷೇತ್ರಗಳಾದ ಬ್ಯಾಂಕ್, ವಿಮೆ, ಸಾರಿಗೆ, ಆರೋಗ್ಯ, ಶಿಕ್ಷಣ ಹಾಗೂ ಇತರ ಕ್ಷೇತ್ರಗಳನ್ನು ತಮ್ಮ ವ್ಯಾಪಕ ಹೂಡಿಕೆಗೆ ತೆರೆದಿಟ್ಟುಕೊಂಡು ಭೀಕರವಾಗಿ ಶೋಷಿಸುತ್ತಿದ್ದಾರೆ. ಇತರೆಲ್ಲಾ ಸೇವಾ ಕ್ಷೇತ್ರಗಳ ಮೇಲಾಗುತ್ತಿರುವ ದಾಳಿಯಂತೆ ಶಿಕ್ಷಣದ ಮೇಲೂ ಈಗ ಪ್ರಹಾರಗಳು ನಡೆಯುತ್ತಿವೆ. ಭಾರತದ ಸ್ವಾತಂತ್ರ್ಯ ಸಂಗ್ರಾಮದ ರಾಜಿರಹಿತ ಪಂಥದ ಹೋರಾಟಗಾರರು, ಮಹಾನ್ ಮಾರ್ಕ್ಸ್‌ವಾದಿ ಚಿಂತಕರು ಹಾಗೂ ನಮ್ಮ ಪಕ್ಷದ ಸ್ಥಾಪಕರೂ ಆದ ಕಾಮ್ರೇಡ್ ಶಿವದಾಸ್ ಘೋಷ್, "ವರ್ಗ ವಿಭಜಿತ ಸಮಾಜದಲ್ಲಿ, ಶೈಕ್ಷಣಿಕ ಸುಧಾರಣೆಗಳನ್ನು ಅರ್ಥ ಮಾಡಿಕೊಳ್ಳಲು ಎರಡು ದೃಷ್ಟಿಕೋನಗಳಿವೆ ಎಂಬುದನ್ನು ಮರೆಯಬೇಡಿ. ಒಂದು, ಬಂಡವಾಳಶಾಹಿ ವರ್ಗದ ವಿಶ್ವ ದೃಷ್ಟಿಕೋನವನ್ನು ಪ್ರತಿಬಿಂಬಿಸುತ್ತದೆ... ತರ್ಕ ಹಾಗೂ ವಿಜ್ಞಾನದ ಮೇಲೆ ಅವಲಂಬಿತವಾಗಿರದೆ, ನಂಬಿಕೆ, ಧರ್ಮದ ಮೇಲೆ ಅವಲಂಬಿತವಾಗಿ, ಕೊನೆಗೆ ಸಾಮಾಜಿಕ ಬದಲಾವಣೆಗೆ ಅಡ್ಡಿಯೊಡ್ಡುವ ಶಿಕ್ಷಣ ವ್ಯವಸ್ಥೆಯನ್ನು ರೂಪಿಸಿ, ರಚಿಸಿ, ಅದನ್ನು ಕಾರ್ಯರೂಪಕ್ಕೆ ತರುವುದು ಇದರ ಉದ್ದೇಶವಾಗಿದೆ. ಇನ್ನೊಂದು ದೃಷ್ಟಿಕೋನವೆಂದರೆ, ಅದು ಈ ಎಲ್ಲಾ ನೀತಿಗಳ ಬಗ್ಗೆ ಪ್ರಶ್ನೆಗಳನ್ನು ಎತ್ತುವ ಕ್ರಾಂತಿಕಾರಿ ದೃಷ್ಟಿಕೋನ. ಬಂಡವಾಳಶಾಹಿಗಳನ್ನು ಅಧಿಕಾರದಿಂದ ಕೆಳಗುರುಳಿಸಿ, ಅವರ ಶೋಷಣೆಯಿಂದ ಸಮಾಜವನ್ನು ಮುಕ್ತಗೊಳಿಸಲು, ಕ್ರಾಂತಿಕಾರಿ ಚಳವಳಿಯ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಪೂರಕವಾದ ತಾರ್ಕಿಕತೆ, ವೈಜ್ಞಾನಿಕ ಮನೋಭಾವವನ್ನು ಆಧರಿಸಿರುವ ಇದು ಇನ್ನೊಂದು ದೃಷ್ಟಿಕೋನ" ಎಂದು ಸಮಾಜ ಬದಲಾವಣೆಯ ವಿಷಯದಲ್ಲಿ ಸರಿಯಾದ ದೃಷ್ಟಿಕೋನವನ್ನು ಪಡೆದುಕೊಳ್ಳುವ ದಿಕ್ಕಿನಲ್ಲಿ ಶಿಕ್ಷಣದ ಮಹತ್ವವನ್ನು ಹೀಗೆ ವಿವರಿಸಿದ್ದಾರೆ. ಈ ಕ್ರಾಂತಿಕಾರಿ ದೃಷ್ಟಿಕೋನ ಮಾತ್ರವೇ ನಮ್ಮನ್ನು ಇಂದಿನ ಶೈಕ್ಷಣಿಕ ಸಂಕಟದಿಂದ ಹೊರತರಬಲ್ಲದು. ಶಿಕ್ಷಣ, ಆರೋಗ್ಯ, ಕನಿಷ್ಠ ಬದುಕುವ ಹಕ್ಕನ್ನೂ ಕಸಿಯುವ ಸರ್ಕಾರಗಳ, ಅಧಿಕಾರದಲ್ಲಿರುವವರ ಷಡ್ಯಂತ್ರವನ್ನು ಜನರು ಅರಿಯಬೇಕು. ತಮ್ಮ ಹಕ್ಕುಗಳಿಗಾಗಿ ಜನತೆ ಇಂದು ಕ್ರಾಂತಿಕಾರಿ ದೃಷ್ಟಿಕೋನದೊಂದಿಗೆ ಸಂಘಟಿತ ಹೋರಾಟಗಳಿಗಾಗಿ ಬೀದಿಗಿಳಿಯುವ ಅವಶ್ಯಕತೆಯಿದೆ. ಇದು ಬಂಡವಾಳಶಾಹಿ ಸರ್ಕಾರಗಳ ನಿರಂತರ ಆಕ್ರಮಣಗಳಿಗೆ ಉತ್ತರ ಹೇಳಲು ದುಡಿಯುವ ಜನರ ಬಳಿ ಇರುವ ಏಕೈಕ ಅಸ್ತ್ರವಾಗಿದೆ. ■

### ಸರ್ಕಾರಿ ಶಾಲೆಗಳನ್ನು ಮುಚ್ಚುವ ಪ್ರಕ್ರಿಯೆ ಈಗ ಜಾಗತೀಕ ವಿದ್ಯಮಾನ

- **ಚೀನಾದಲ್ಲಿ 2002–2010ರ ನಡುವೆ ಕೇಂದ್ರೀಕೃತ ವಸತಿ ಶಾಲೆಗಳ ಹೆಸರಿನಲ್ಲಿ ಶೇ.52ರಷ್ಟು ಗ್ರಾಮೀಣ ಪ್ರಾಥಮಿಕ ಶಾಲೆಗಳನ್ನು ಮುಚ್ಚಲಾಯಿತು.**
- **ಅಮೇರಿಕದಲ್ಲಿ ಟ್ರಂಪ್ 2ನೇ ಬಾರಿಗೆ ಅಧಿಕಾರವನ್ನು ವಹಿಸಿಕೊಂಡ ನಂತರ ಶಿಕ್ಷಣ ಇಲಾಖೆಯನ್ನೇ ಮುಚ್ಚಲಾಯಿತು.**
- **ಸ್ವೀಡನ್, ಮೆಕ್ಸಿಕೊಗಳಲ್ಲಿಯೂ ವಿಶ್ವ ಬ್ಯಾಂಕ್ ಸಾಲ ಪಡೆದು ಮಾದರಿ ಕೇಂದ್ರೀಕೃತ ಶಾಲೆಗಳನ್ನು ಸ್ಥಾಪಿಸಿ ಸಾವಿರಾರು ಗ್ರಾಮೀಣ ಶಾಲೆಗಳನ್ನು ಮುಚ್ಚಲಾಗಿದೆ.**
- **ಭಾರತದಲ್ಲಿ ಬಹುತೇಕ ಎಲ್ಲ ರಾಜ್ಯಗಳಲ್ಲೂ ಅಘೋಷಿತ "ಶಾಲಾ ಮುಚ್ಚುವ ಅಭಿಯಾನ" ಚಾಲ್ತಿಯಲ್ಲಿದೆ! ಕಳೆದ 10 ವರ್ಷಗಳಲ್ಲಿ ಮಧ್ಯಪ್ರದೇಶದಲ್ಲಿ 29,400, ಉತ್ತರ ಪ್ರದೇಶದಲ್ಲಿ 25,100 ಸೇರಿದಂತೆ ಸುಮಾರು 89,400ಗಿಂತಲೂ ಹೆಚ್ಚು ಶಾಲೆಗಳನ್ನು ಮುಚ್ಚಲಾಗಿದೆ.**

### ಶಿಕ್ಷಣದಲ್ಲಿ ಇಂದು ಸೃಷ್ಟಿಸಲಾಗುತ್ತಿರುವ ಅಸಮಾನತೆಯು ಆರ್ಥಿಕ ಅಸಮಾನತೆಯ ಮತ್ತೊಂದು ಮುಖ

**ಸರ್ಕಾರಗಳು ಶಿಕ್ಷಣವನ್ನು ಕೇವಲ ಉಳ್ಳವರ ಸ್ವತ್ತಾಗಿಸುತ್ತಿವೆ. ಆರ್ಥಿಕ ಬಲದ ಆಧಾರದ ಮೇಲೆ ಪ್ರತಿ ಮಗುವಿನ ಶೈಕ್ಷಣಿಕ ಭವಿಷ್ಯ ನಿರ್ಧಾರವಾಗುತ್ತಿದೆ. 1990ರ ನಂತರ ಜಾರಿಗೆ ಬಂದ ಜಾಗತೀಕರಣ, ಉದಾರೀಕರಣ, ಖಾಸಗೀಕರಣ ನೀತಿ ಶಿಕ್ಷಣವನ್ನು ಮಾರುಕಟ್ಟೆಯ ಸರಕನ್ನಾಗಿಸಿತು. ವಿಶ್ವ ಬ್ಯಾಂಕ್ ಪ್ರಾಯೋಜಿತ ಡಿಪಿಇಪಿಯಾಗಲಿ, ಅದರ ಮುಂದುವರಿಕೆಯಾದ ಸರ್ವ ಶಿಕ್ಷಣ ಅಭಿಯಾನ್(ಎಸ್‌ಎಸ್‌ಎ) ಆಗಲಿ, ಅವು ನಮ್ಮ ದೇಶದ ಶಿಕ್ಷಣ ವ್ಯವಸ್ಥೆಯನ್ನು ವ್ಯವಸ್ಥಿತವಾಗಿ ಧ್ವಂಸ ಮಾಡಿದವು. ವಿಶ್ವ ಬ್ಯಾಂಕ್ ಸಾಲ ಹಾಗೂ ಎಸ್‌ಎಸ್‌ಎ ಹಣ ಕೇವಲ ಕಟ್ಟಡ ನಿರ್ಮಾಣಕ್ಕೆ ಮೀಸಲಾಗಿತ್ತು. ಖಾಯಂ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಬಾರದು ಹಾಗೂ ಮೂಲಭೂತ ಸೌಕರ್ಯಗಳನ್ನು ಶಾಲೆಗಳಿಗೆ ಒದಗಿಸಬಾರದು ಎಂಬುದೇ ಆ ಕಾರ್ಯಕ್ರಮಗಳ ಮೂಲ ಷರತ್ತಾಗಿದ್ದವು.**

## ಕೆಪಿಎಸ್-ಮ್ಯಾಗ್ನೆಟ್ ಯೋಜನೆ ಮತ್ತು ಸರ್ಕಾರಿ ಶಾಲೆಗಳ ಮುಚ್ಚುವಿಕೆಯ ವಿರುದ್ಧ

# ವಿದ್ಯಾರ್ಥಿ-ಪೋಷಕರ 'ಬೆಳಗಾವಿ ಚಲೋ'!

'ಕೆಪಿಎಸ್-ಮ್ಯಾಗ್ನೆಟ್' ಯೋಜನೆಯ ನೆಪದಲ್ಲಿ ರಾಜ್ಯದ 40,000ಕ್ಕೂ ಅಧಿಕ ಸರ್ಕಾರಿ ಶಾಲೆಗಳನ್ನು ಮುಚ್ಚಿ, ಅವನ್ನು ಕೆಪಿಎಸ್ ಶಾಲೆಗಳಲ್ಲಿ ವಿಲೀನಗೊಳಿಸುವ ರಾಜ್ಯ ಸರ್ಕಾರದ ನಿರ್ಧಾರದ ವಿರುದ್ಧ, ಬೆಳಗಾವಿಯಲ್ಲಿ ನಡೆದ ಚಳಿಗಾಲದ ಅಧಿವೇಶನದ ಸಂದರ್ಭದಲ್ಲಿ, ನಮ್ಮ ವಿದ್ಯಾರ್ಥಿ ಸಂಘಟನೆ ಎಐಡಿಎಸ್‌ಓ ನೇತೃತ್ವದಲ್ಲಿ ನೂರಾರು ಗ್ರಾಮಸ್ಥರು, ಪೋಷಕರು ಮತ್ತು ವಿದ್ಯಾರ್ಥಿಗಳು ಬೃಹತ್ ಪ್ರತಿಭಟನೆ ನಡೆಸಿದರು.



ಪ್ರತಿಭಟನೆಗೆ ಮುಂಚಿತವಾಗಿಯೇ ಪಡೆದಿದ್ದ ಅನುಮತಿಯನ್ನು ಅಂತಿಮ ಕ್ಷಣದಲ್ಲಿ ರದ್ದುಗೊಳಿಸಿ ಹೋರಾಟವನ್ನು ವಿಫಲಗೊಳಿಸಲು ಆಡಳಿತವು ನಾನಾ ಅಡೆತಡೆಗಳನ್ನು ಉಂಟುಮಾಡಿತು. ಎಐಡಿಎಸ್‌ಓ ನಾಯಕರ ಹಿಂದೆ ಪೊಲೀಸ್ ಗೂಢಚಾರರು ತಿರುಗಾಡುತ್ತಿದ್ದರು. ಶಾಲಾ-ಕಾಲೇಜುಗಳ ಮುಂದೆ ಪೊಲೀಸರನ್ನು ನಿಯೋಜಿಸಲಾಗಿತ್ತು. ಇದ್ಯಾವುದರಿಂದಲೂ ಹೋರಾಟದ ದೃಢಸಂಕಲ್ಪವನ್ನು ಅಲುಗಾಡಿಸಲು ಸಾಧ್ಯವಾಗಲಿಲ್ಲ. "ಸರ್ಕಾರ ನಮ್ಮ ಮಕ್ಕಳ ಭವಿಷ್ಯವನ್ನೇ ಕಸಿದುಕೊಳ್ಳುತ್ತಿದೆ; ಅವರು ನಮ್ಮನ್ನು ಜೈಲಿಗೆ ಹಾಕಿದರೂ ಸರಿ, ನಾವು ಹೋರಾಟ ನಿಲ್ಲಿಸುವುದಿಲ್ಲ" ಎಂದು ನೂರಾರು ತಂದೆ-ತಾಯಂದಿರು, ಗ್ರಾಮಸ್ಥರು ಹಾಗೂ ಹಿರಿಯರು ಅನೇಕ ಹಳ್ಳಿಗಳಿಂದ ಹೊರಟು ಬಂಧನಕ್ಕೆ ಸಿದ್ಧರಾಗಿಯೇ ಬೆಳಗಾವಿಗೆ ಬಂದು ಸೇರಿದರು.

### ರಾಣಿ ಚೆನ್ನಮ್ಮ ವೃತ್ತದಲ್ಲಿ ಮೊಳಗಿದ ಕ್ರಾಂತಿಕಾರಿ ಘೋಷಣೆಗಳು!

ಯಾವ ನಿರ್ಬಂಧಗಳನ್ನೂ ಲೆಕ್ಕಿಸದೆ, ಪೊಲೀಸರ ಸರ್ಪಗಾವಲನ್ನು ಭೇದಿಸಿದ ಪ್ರತಿಭಟನಾಕಾರರು ರಾಣಿ ಚೆನ್ನಮ್ಮ ವೃತ್ತದಲ್ಲಿ ಜಮಾಯಿಸಿದರು.

ತಮ್ಮ ಹಳ್ಳಿಯ ಶಾಲೆಗಳನ್ನು ಉಳಿಸಿಕೊಳ್ಳಲು ದಿನದ ದುಡಿಮೆಯನ್ನು ತೊರೆದು ಬಂದಿದ್ದ ತಂದೆ-ತಾಯಂದಿರು ಮತ್ತು ಗ್ರಾಮಸ್ಥರು ಸರ್ಕಾರದ ನಡೆಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಜನರ ಈ ಕೆಚ್ಚೆದೆಯನ್ನು ಕಂಡು ಪೊಲೀಸರಿಗೂ ಜನಸಮೂಹವನ್ನು ಚದುರಿಸಲು ಸಾಧ್ಯವಾಗಲಿಲ್ಲ. ನಂತರ ಈ ಪ್ರತಿಭಟನೆಯು ಜಿಲ್ಲಾಧಿಕಾರಿಗಳ ಕಚೇರಿಯತ್ತ ಒಂದು ಪ್ರಬಲ ಮೆರವಣಿಗೆಯಲ್ಲಿ ಸಾಗಿತು.

### ಜನ ಹೋರಾಟಕ್ಕೆ ಮಣಿದ ಅಧಿಕಾರಿಗಳು

ಜಿಲ್ಲಾಧಿಕಾರಿ ಕಚೇರಿಯನ್ನು ತಲುಪಿದ ನಂತರ ಎಐಡಿಎಸ್‌ಓ ಮುಖಂಡರು ಮತ್ತು ಗ್ರಾಮದ ಹಿರಿಯರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಅವರು ಕೆಪಿಎಸ್-ಮ್ಯಾಗ್ನೆಟ್ ನೀತಿಯ ದೋಷಗಳನ್ನು ಎಳೆಎಳೆಯಾಗಿ ಬಿಚ್ಚಿಟ್ಟರು ಮತ್ತು ಗ್ರಾಮೀಣ ಶಿಕ್ಷಣದ ದುಸ್ಥಿತಿಯನ್ನು ಎತ್ತಿ ತೋರಿಸಿದರು. ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿ ಜಾಗ ಖಾಲಿ ಮಾಡುವಂತೆ ಪೊಲೀಸರು ಎಷ್ಟೇ ಒತ್ತಡ ಹೇರಿದರೂ, ಶಿಕ್ಷಣ ಮಂತ್ರಿಗಳು ಅಥವಾ ಶಿಕ್ಷಣ ಇಲಾಖೆಯ ಉನ್ನತ ಅಧಿಕಾರಿಗಳು ಸ್ಥಳಕ್ಕೆ ಬಂದು ಉತ್ತರಿಸುವವರೆಗೂ ಕದಲುವುದಿಲ್ಲ ಎಂದು ಪ್ರತಿಭಟನಾಕಾರರು ಪಟ್ಟು ಹಿಡಿದರು. ಪ್ರತಿಭಟನೆಯ ತೀವ್ರತೆಗೆ ಮಣಿದು, ಪ್ರಾಥಮಿಕ ಶಿಕ್ಷಣ ಇಲಾಖೆಯ ನಿರ್ದೇಶಕರು ಸ್ಥಳಕ್ಕೆ ಆಗಮಿಸಿದರು. ಅವರು ಸರ್ಕಾರದ ವಿಲೀನ ನೀತಿಯನ್ನು ಸಮರ್ಥಿಸಿಕೊಳ್ಳಲು ಪ್ರಯತ್ನಿಸಿದರೂ, ಗ್ರಾಮದ ಶಾಲೆಗಳ ನೈಜ ಸ್ಥಿತಿಯ ಕುರಿತು ಪ್ರತಿಭಟನಾಕಾರರು ಮಂಡಿಸಿದ ತೀಕ್ಷ್ಣ ಮತ್ತು ತಾರ್ಕಿಕ ವಾದಗಳ ಮುಂದೆ ಅವರು ಮೌನವಹಿಸಬೇಕಾಯಿತು.

### ಹೋರಾಟ ಮುಂದುವರಿಯಲಿದೆ

ವಿದ್ಯಾರ್ಥಿ-ವಿರೋಧಿ ಕೆಪಿಎಸ್-ಮ್ಯಾಗ್ನೆಟ್ ನೀತಿಯನ್ನು ಸಂಪೂರ್ಣವಾಗಿ ಹಿಂಪಡೆಯುವವರೆಗೂ ಈ ಚಳವಳಿ ಮುಂದುವರಿಯಲಿದೆ ಎಂಬ ಎಚ್ಚರಿಕೆಯೊಂದಿಗೆ ಪ್ರತಿಭಟನೆಯನ್ನು ಮುಕ್ತಾಯಗೊಳಿಸಲಾಯಿತು. ಶಾಲೆಗಳನ್ನು ಮುಚ್ಚಲು ಅಧಿಕಾರಿಗಳು ಹಳ್ಳಿಗಳಿಗೆ ಬಂದರೆ, ಜನರಿಂದ ತೀವ್ರ ಪ್ರತಿರೋಧ ಎದುರಿಸಬೇಕಾಗುತ್ತದೆ ಎಂದು ಗ್ರಾಮಸ್ಥರು ಇದೇ ವೇಳೆ ಪ್ರತಿಜ್ಞೆ ಮಾಡಿದರು.

ಸಾರ್ವಜನಿಕ ಶಿಕ್ಷಣ ಮತ್ತು ಸರ್ಕಾರಿ ಶಾಲೆಗಳ ಪರಂಪರೆಯನ್ನು ಉಳಿಸಲು ಕರ್ನಾಟಕದ ಜನತೆ ಎಚ್ಚೆತ್ತುಕೊಂಡಿದ್ದಾರೆ ಮತ್ತು ರಾಜಿರಹಿತ ಹೋರಾಟಕ್ಕೆ ಸಿದ್ಧರಾಗಿದ್ದಾರೆ ಎಂಬ ಸ್ಪಷ್ಟ ಸಂದೇಶವನ್ನು ಈ ಪ್ರತಿಭಟನೆಯು ರವಾನಿಸಿದೆ.

## 'ಘಟಕ ಕಾಲೇಜು ಬೇಡ' – ಎಐಡಿಎಸ್‌ಓ



ಬೆಂಗಳೂರು ನಗರದ ಹೃದಯಭಾಗದಲ್ಲಿರುವ ಆರ್‌ಸಿ ಕಾಲೇಜು ಮತ್ತು ಸರಕಾರಿ ಕಲಾ ಕಾಲೇಜುಗಳನ್ನು ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 'ಘಟಕ ಕಾಲೇಜು'ಗಳನ್ನಾಗಿ ಪರಿವರ್ತಿಸುವುದನ್ನು ಖಂಡಿಸಿ, ಎಐಡಿಎಸ್‌ಓ ನೇತೃತ್ವದಲ್ಲಿ ನೂರಾರು ವಿದ್ಯಾರ್ಥಿಗಳು ಫ್ರೀಡಂ ಪಾರ್ಕಿನಲ್ಲಿ ಪ್ರತಿಭಟನೆ ನಡೆಸಿದರು.

## 40,000 ಸರ್ಕಾರಿ ಶಾಲೆಗಳಿಗೆ ಮಾರಕವಾಗಲಿರುವ

# 'ಕೆ.ಪಿ.ಎಸ್ -ಮ್ಯಾಗ್ನೆಟ್ ಶಾಲೆ' ಯೋಜನೆ ಕೈಬಿಡಿ!!

## 'ಜನ ಸಮಾವೇಶ'ದ ಆಗ್ರಹ!





'ಕೆಪಿಎಸ್-ಮ್ಯಾಗ್ನೆಟ್ ಶಾಲೆ' ಹೆಸರಿನಲ್ಲಿ ರಾಜ್ಯ ಸರ್ಕಾರವು ಸುಮಾರು 40 ಸಾವಿರ ಸರ್ಕಾರಿ ಶಾಲೆಗಳನ್ನು ಮುಚ್ಚುತ್ತಿರುವುದರ ವಿರುದ್ಧ ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ (ಎಐಎಸ್‌ಇಸಿ) – ಕರ್ನಾಟಕ ಸಮಿತಿಯು ಬೆಂಗಳೂರಿನ ಗಾಂಧಿ ಭವನದಲ್ಲಿ, ಕಳೆದ ಡಿ.11ರಂದು ಸಂಘಟಿಸಿದ್ದ ರಾಜ್ಯ ಮಟ್ಟದ ಜನ ಸಮಾವೇಶದಲ್ಲಿ ರಾಜ್ಯದ ಶಿಕ್ಷಣ ತಜ್ಞರು, ಮಾಜಿ ಉಪಕುಲಪತಿಗಳು, ಸಾಹಿತಿಗಳು, ಹೋರಾಟಗಾರರು, ಪಾಲಕ-ಪೋಷಕರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರು ಹಾಗೂ ಸಾಹಿತಿಗಳಾದ ಪ್ರೊ.ಎಸ್.ಜಿ.ಸಿದ್ದರಾಮಯ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಪ್ರೊ. ಎಲ್.ಎನ್. ಮುಕುಂದರಾಜ್, ಡಿಎಸ್‌ಎಸ್ ರಾಜ್ಯ ಸಂಚಾಲಕ ಶ್ರೀ. ಮಾವಳ್ಳಿ ಶಂಕರ್, ಶಿಕ್ಷಣ ಉಳಿಸಿ ಸಮಿತಿಯ ಉಪಾಧ್ಯಕ್ಷ ಶ್ರೀ. ವಿ.ಎನ್. ರಾಜಶೇಖರ್, ಶಿಕ್ಷಣತಜ್ಞ ಪ್ರೊ. ನಿರಂಜನ ಆರಾಧ್ಯ, ಹಂಪಿ ಕನ್ನಡ ವಿಶ್ವವಿದ್ಯಾಲಯದ ಮಾಜಿ ಉಪಕುಲಪತಿಗಳಾದ ಪ್ರೊ. ಎ.ಮುರಿಗೆಪ್ಪ, ಶಿಕ್ಷಣತಜ್ಞರಾಗಿರುವ ಡಾ.ಎ.ಆರ್.ವಾಸವಿ, ತುಮಕೂರು ವಿಶ್ವವಿದ್ಯಾಲಯದ ಮಾಜಿ ಉಪಕುಲಪತಿ ಡಾ. ಎ.ಎಚ್.ರಾಜಾಸಾಬ್, ಕಲಬುರ್ಗಿ ವಿವಿಯ ನಿವೃತ್ತ ಪ್ರಾಧ್ಯಾಪಕರು, ಸಾಹಿತಿಗಳಾದ ಪ್ರೊ. ಕಾಶಿನಾಥ ಅಂಬಲಗೆ, ಕನ್ನಡ ಪ್ರಾಧ್ಯಾಪಕರಾದ ಡಾ.ಕೆ.ನಾರಾಯಣಸ್ವಾಮಿ, ಬೆಂಗಳೂರು ನಗರ ವಿವಿಯ ಸಿಂಡಿಕೇಟ್ ಸದಸ್ಯರಾದ ಡಾ. ಫ್ರಾನ್ಸಿಸ್ ಅಸ್ಸಿಸಿ ಅಲ್ಮೈಡಾ, ಕರ್ನಾಟಕ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ. ಸಿ.ಆರ್.ಮೊಹಮ್ಮದ್ ಇಮ್ತಿಯಾಜ್, ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿಯ ವಿದ್ಯಾರ್ಥಿ ನಾಯಕರಾದ ಕಾ. ಸುಭಾಷ್ ಬೆಟ್ಟದಕೊಪ್ಪ, ಚನ್ನಪಟ್ಟಣದ ಸಂತೆ ಮೊಗೆನಹಳ್ಳಿ ಸರ್ಕಾರಿ ಶಾಲೆ ಉಳಿಸಿ ಆಂದೋಲನದ ಶ್ರೀ. ರಾಜು ಜೆ. ಮತ್ತು ಸಮಾವೇಶದ ಅಧ್ಯಕ್ಷತೆಯನ್ನು ವಹಿಸಿದ್ದ ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿಯ ರಾಜ್ಯ ಅಧ್ಯಕ್ಷರಾದ ಪ್ರೊ. ಅಲ್ಲಮಪ್ರಭು ಬೆಟ್ಟದೂರು – ಈ ಎಲ್ಲರೂ, ಒಕ್ಕೊರಲಿನಿಂದ ಸರ್ಕಾರದ ಈ ಜನ ವಿರೋಧಿ ನೀತಿಯನ್ನು ಖಂಡಿಸುತ್ತಾ, ಯಾವುದೇ ಸರ್ಕಾರಿ ಶಾಲೆಗಳನ್ನು ಮುಚ್ಚಬಾರದು ಎಂದು ಆಗ್ರಹಿಸಿದರು. ಚಿಂತಕರಾದ ಶ್ರೀ. ಶಿವಸುಂದರ್, ಪ್ರೊ. ನಾಗರಾಜ್, ಶಿಕ್ಷಣ ಉಳಿಸಿ ಸಮಿತಿಯ ಕರ್ನಾಟಕ ರಾಜ್ಯ ಕಾರ್ಯದರ್ಶಿ ಕಾ. ಮಹೇಶ್ ಎಸ್. ಜಿ. ಹಾಗೂ ವಿವಿಧ ಜಿಲ್ಲೆಗಳ ಶಿಕ್ಷಕರು, ಪೋಷಕರು ಹಾಗೂ ವಿದ್ಯಾರ್ಥಿಗಳು ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

# "ಸಾರ್ವಜನಿಕ ಶಿಕ್ಷಣ ಉಳಿಸಿ"

## ಎಐಡಿಎಸ್‌ಓ ಜಿಲ್ಲಾ ಸಮ್ಮೇಳನ-ಸಮಾವೇಶಗಳ ಆಗ್ರಹ!

ವೈಜ್ಞಾನಿಕ-ಜನತಾಂತ್ರಿಕ-ಧರ್ಮನಿರಪೇಕ್ಷ ಶಿಕ್ಷಣವನ್ನು ಪ್ರತಿಪಾದಿಸುತ್ತಾ, ಅದಕ್ಕಾಗಿ ಹೋರಾಡುತ್ತಿರುವ ನಮ್ಮ ವಿದ್ಯಾರ್ಥಿ ಮುಂದಳ ಎಐಡಿಎಸ್‌ಓ ಕೆ.ಪಿ.ಎಸ್ ಮ್ಯಾಗ್ನೆಟ್ ಶಾಲೆ ಯೋಜನೆಯಡಿ 40 ಸಾವಿರಕ್ಕೂ ಹೆಚ್ಚು ಶಾಲೆಗಳನ್ನು ಮುಚ್ಚಲು ನಿರ್ಧರಿಸಿರುವ ರಾಜ್ಯ ಸರ್ಕಾರದ ನಿಲುವಿನ ವಿರುದ್ಧ ಸಂಘಟಿತ ಹೋರಾಟ ಕಟ್ಟುತ್ತಿದೆ. ಇದಕ್ಕೆ ಪೂರಕವಾಗಿ ಯಾದಗಿರಿ, ಹಾಸನ(ಡಿ.13), ವಿಜಯನಗರ(ಡಿ.20), ಕಲುಬುರಗಿ(ಡಿ.29)ಗಳಲ್ಲಿ ಸಂಘಟಿಸಲಾದ ಜಿಲ್ಲಾ ಸಮಾವೇಶ-ಸಮ್ಮೇಳನಗಳಲ್ಲೂ ಅದು ಪ್ರತಿಧ್ವನಿಸಿ, ಆ ಜಿಲ್ಲೆಗಳಲ್ಲಿ ಸಮರಶೀಲ ವಿದ್ಯಾರ್ಥಿ ಹೋರಾಟ ಸಮಿತಿಗಳು ಆಯ್ಕೆಯಾದವು.



ಹಾಸನ




ವಿಜಯನಗರ



ಕಲುಬುರಗಿ

## ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ (ಪ್ರತಿಬಂಧಕ) ಮಸೂದೆ 2025

# ದ್ವೇಷ ತಡೆಗಟ್ಟಲು ಇನ್ನೊಂದು ಕಾನೂನು ಅನಿವಾರ್ಯವೇ?

ರಾಜ್ಯ ವಿಧಾನ ಮಂಡಲದ 2025ರ ಚಳಿಗಾಲದ ಅಧಿವೇಶನದಲ್ಲಿ 'ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ ಪ್ರತಿಬಂಧಕ ಮಸೂದೆ 2025' ಮಂಡನೆಯಾಗಿ ಅಂಗೀಕಾರವೂ ಆಗಿದೆ. ರಾಜ್ಯಪಾಲರ ಅಂಕಿತ ಮಾತ್ರವೇ ಬಾಕಿ ಇದೆ. ಈ ಮಸೂದೆಯನ್ನು ಸದನದಲ್ಲಿ ವಿರೋಧಿಸಿದ ವಿರೋಧ ಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್, ಇದಕ್ಕೆ ಸಹಿ ಹಾಕದಂತೆ ರಾಜ್ಯಪಾಲರನ್ನು ಒತ್ತಾಯಿಸಿವೆ. ರಾಜ್ಯದ ಪ್ರಜ್ಞಾವಂತ ಜನತೆ ಈ ವಿಷಯದ ಕುರಿತು ವಸ್ತುನಿಷ್ಠವಾಗಿ ಅರ್ಥಮಾಡಿಕೊಳ್ಳಬೇಕಾದ ಅವಶ್ಯಕತೆ ಇದೆ.

ಪ್ರತಿಗಾಮಿ ಬಂಡವಾಳಶಾಹಿ ವ್ಯವಸ್ಥೆಯು ದಿನದಿಂದ ದಿನಕ್ಕೆ ಅಧೋಗತಿಗೆ ಇಳಿಯುತ್ತಿರುವ ಕಾರಣದಿಂದ ರಾಜಕೀಯ, ಸಂಸ್ಕೃತಿ, ಮೌಲ್ಯಗಳು, ನೈತಿಕತೆ, ಸಭ್ಯತೆ ಇವೆಲ್ಲವೂ ಪಾತಾಳಕ್ಕೆ ಇಳಿಯುತ್ತಿವೆ. ಸಮಾಜವನ್ನು ಮುನ್ನಡೆಸಬೇಕಾದ ರಾಜಕೀಯ ನಾಯಕರು ಪರಸ್ಪರ ಲಂಗುಲಗಾಮಿಲ್ಲದೆ ನಾಲಿಗೆ ಹರಿಬಿಡುತ್ತಾರೆ. ಧಾರ್ಮಿಕ ವ್ಯಕ್ತಿಗಳೂ ಇದರಲ್ಲಿ ಹಿಂದೆ ಬಿದ್ದಿಲ್ಲ. ಟೀಕೆಯ ಹೆಸರಿನಲ್ಲಿ ನಾಲಿಗೆ ಕತ್ತರಿಸಿ, ತಲೆಕಡಿ, ಕೈಕಾಲು ತೆಗಿ ಎಂಬ ಪದಪ್ರಯೋಗ ಮಾಮೂಲಿ ಆಗಿದೆ. ಬೇರೆ ಧರ್ಮಗಳ, ಸಮುದಾಯಗಳ ಬಗ್ಗೆಯೂ ಅವಹೇಳನ, ಅಸಹನೆ ಬರುವಂತಹ ಸುಳ್ಳು ಸುದ್ದಿಗಳ ಪ್ರಸಾರ, ಭಾಷಣಗಳನ್ನು 'ಧಾರ್ಮಿಕ' ಎಂದೆನಿಸಿಕೊಂಡಿರುವ ವ್ಯಕ್ತಿಗಳೂ ಮಾಡುತ್ತಾರೆ. ಇವುಗಳ ಪರಿಣಾಮವಾಗಿ ಸಮಾಜದಲ್ಲಿ ದ್ವೇಷ ಆಧಾರಿತ ಅಪರಾಧಗಳ ಸಂಖ್ಯೆ ಹೆಚ್ಚುತ್ತಿದೆ ಎಂಬುದು ಕೂಡ ಸತ್ಯ. ಬಿಜೆಪಿ ಮತ್ತು ಸಂಘಪರಿವಾರ ಇಂತಹ ವಾತಾವರಣದ ಅತಿಹೆಚ್ಚು ಲಾಭವನ್ನು ಪಡೆದಿವೆ ಮತ್ತು ಇದರಿಂದ ಬೆಳೆದಿವೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಇದು ಕೇವಲ ಕರ್ನಾಟಕದ ಕಥೆಯಲ್ಲ, ಇಡೀ ದೇಶದ ವಾತಾವರಣ ಹೀಗಾಗಿದೆ. ಇಡೀ ಜಗತ್ತನ್ನೇ ಒಂದುಗೂಡಿಸಬಲ್ಲ ಸಾಮಾಜಿಕ ಮಾಧ್ಯಮಗಳು ದ್ವೇಷ-ಅಸಹನೆಗಳನ್ನು ಬಿತ್ತುವ ಕಾರ್ಖಾನೆಗಳಾಗಿವೆ. ಸಹಜವಾಗಿ, ನಾಡಿನ ಪ್ರಗತಿಪರ ಚಿಂತಕರಿಗೆ, ಶಾಂತಿ ಸೌಹಾರ್ದತೆ ಬಯಸುವ ಪ್ರಜ್ಞಾವಂತ ಜನಸಾಮಾನ್ಯರಿಗೆ ಈ ಬೆಳವಣಿಗೆ ಆತಂಕದ ಸಂಗತಿಯಾಗಿದೆ.

ಇಂತಹ ಸಂದರ್ಭದಲ್ಲಿ ರಾಜ್ಯದ ಕಾಂಗ್ರೆಸ್ ಸರ್ಕಾರ ಜಾರಿಗೆ ತರಲು ಹೊರಟಿರುವ ಈ ಮಸೂದೆಯು ಈ ಸಮಸ್ಯೆಗೆ ರಾಮಬಾಣ ಎಂಬಂತೆ ಕೆಲವರಿಗೆ ಭಾಸವಾಗಬಹುದು. ಕಾಂಗ್ರೆಸ್ ಸರ್ಕಾರವು ಸಿದ್ಧಪಡಿಸಿರುವ ಕಾರಣದಿಂದ ಅದು ಬಿಜೆಪಿ-ಆರ್‌ಎಸ್‌ಎಸ್‌ಗಳನ್ನು ಕಟ್ಟಿಹಾಕಲು ರೂಪಿಸಿರುವ ಕಾಯ್ದೆ ಎಂದು ತೀರ್ಮಾನಿಸಿರುವ ಬಿಜೆಪಿ ಇದು ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣ ಎಂದು ಬೊಬ್ಬೆ ಹಾಕುತ್ತಿದೆ. ಒಂದು ಕಾಲದಲ್ಲಿ ಆರ್‌ಎಸ್‌ಎಸ್ ನಿಷೇಧಿಸಬೇಕೆಂದು ವಾದಿಸಿದ್ದ ಜೆಡಿಎಸ್ ನಾಯಕ ಕುಮಾರಸ್ವಾಮಿ ಈಗ ಬಿಜೆಪಿಯ ಬಾಲಂಗೋಚಿಯಾಗಿ ಆರ್‌ಎಸ್‌ಎಸ್ ಬೆಂಬಲಕ್ಕೆ ನಿಂತಿದ್ದಾರೆ.

### ಈ ಮಸೂದೆ ಏನು ಹೇಳುತ್ತದೆ

ಯಾವುದೇ ವ್ಯಕ್ತಿ ಅಥವಾ ಸಂಘಟನೆಗಳ ವಿರುದ್ಧ ಮತ, ಜನಾಂಗ, ಜಾತಿ ಅಥವಾ ಸಮುದಾಯ, ಹುಟ್ಟು, ಲಿಂಗ, ಪ್ರದೇಶ, ಭಾಷೆ, ಬುಡಕಟ್ಟು ಇತ್ಯಾದಿಗಳ ಆಧಾರದಲ್ಲಿ ಪ್ರಚಾರ ಮಾಡುವ ಮೂಲಕ ಅಸಹನೆ, ದ್ವೇಷ, ಅನೈಕ್ಯತೆ ಬರುವಂತೆ ಮಾಡುವುದನ್ನು ಈ ಮಸೂದೆ ದ್ವೇಷ ಅಪರಾಧ ಎಂದು ವ್ಯಾಖ್ಯಾನಿಸಿದೆ. ಇಂತಹ ಭಾವನೆ ಮೂಡಿಸುವ ಭಾಷಣ, ಕರಪತ್ರ, ಪುಸ್ತಕ, ಬರಹ, ಚಿತ್ರ, ವಿಡಿಯೋ, ಸಂಕೇತ ಇತ್ಯಾದಿಗಳನ್ನು ನೇರವಾಗಿ ಅಥವಾ ವಿದ್ಯುನ್ಮಾನ ಮಾಧ್ಯಮದಲ್ಲಿ ಪ್ರಸಾರ ಮಾಡುವುದು ದ್ವೇಷ ಭಾಷಣದ ಪರಿಧಿಯಲ್ಲಿ ಬರಲಿದೆ.

ಕಲೆ, ಸಾಹಿತ್ಯ, ಪರಂಪರೆ, ವಿಜ್ಞಾನ, ಕಲಿಕೆ ಅಥವಾ ಧಾರ್ಮಿಕ ಉದ್ದೇಶಗಳಿಗೆ ಪುಸ್ತಕ, ಕರಪತ್ರ ಇತ್ಯಾದಿಗಳ ರೂಪದಲ್ಲಿ ಪ್ರಕಟಣೆ ಅಥವಾ ಸಂಗ್ರಹ ಮಾಡಿದ್ದರೆ ಅವುಗಳಿಗೆ ವಿನಾಯಿತಿ ನೀಡಲಾಗಿದೆ.

ಒಬ್ಬ ವ್ಯಕ್ತಿಯೂ ದ್ವೇಷ ಅಪರಾಧ ಮಾಡಬಹುದು ಎಂಬ ಮುನ್ಸೂಚನೆ ಇದ್ದರೆ, ಡಿವೈಎಸ್ಪಿ ಅಥವಾ ಮೇಲಿನ ಪೊಲೀಸ್ ಅಧಿಕಾರಿಗಳು ತಮ್ಮ ವಿವೇಚನೆಯನ್ನು ಬಳಸಿ ಬಂಧನದಂತಹ ಪ್ರತಿಬಂಧಕ ಕ್ರಮಗಳನ್ನು ಕೈಗೊಳ್ಳಬಹುದು. ಜನಪರ ಹೋರಾಟಗಾರರನ್ನು ಕಟ್ಟಿಹಾಕಲು ಈ ಪರಿಚ್ಛೇದವನ್ನು ಆಳುವ ಸರ್ಕಾರಗಳು ಹೇಗೆ ಬೇಕಾದರೂ ಬಳಸಿಕೊಳ್ಳಬಹುದು!

ದ್ವೇಷಾಪರಾಧಗಳು ಜಾಮೀನುರಹಿತ ಸಂಜ್ಞೇಯ (Cognizable) ಅಪರಾಧಗಳಾಗಿವೆ. ಇಂತಹ ಅಪರಾಧ ಸಾಬೀತಾದರೆ ಮೊದಲ ಬಾರಿಗೆ ಕನಿಷ್ಠ 1 ವರ್ಷದಿಂದ ಗರಿಷ್ಠ 7 ವರ್ಷಗಳವರೆಗೆ ಜೈಲುಶಿಕ್ಷೆ, ಮತ್ತು ರೂ. 50 ಸಾವಿರ ದಂಡ. ಅಪರಾಧ ಮರುಕಳಿಸಿದರೆ/ಪುನರಾವರ್ತನೆಯಾದರೆ 2 ರಿಂದ 10 ವರ್ಷಗಳವರೆಗೆ ಜೈಲು ಮತ್ತು ರೂ. 1 ಲಕ್ಷ ದಂಡ ಎಂದು ಹೇಳಲಾಗಿದೆ.

### ಈಗಾಗಲೇ ದ್ವೇಷ ನಿಯಂತ್ರಣಕ್ಕೆ ಕಾನೂನುಗಳಿಲ್ಲವೇ?

ಖಂಡಿತ ಇವೆ. ಭಾರತೀಯ ನ್ಯಾಯ ಸಂಹಿತೆ 2023ರ ಕಲಂ 196, 197, 298 ನಿರ್ದಿಷ್ಟವಾಗಿ ಇಂತಹ ಅಪರಾಧಗಳನ್ನು ನಿಯಂತ್ರಿಸುವ ಕಾನೂನುಗಳು. ಈ ಸೆಕ್ಷನ್‌ಗಳಲ್ಲಿ ಅಪರಾಧ ಸಾಬೀತಾದರೆ ಗರಿಷ್ಠ 8-10 ವರ್ಷಗಳವರೆಗೆ ಶಿಕ್ಷೆ ವಿಧಿಸಬಹುದು. ಹಿಂದೆ ಇದ್ದ ಐಪಿಸಿ ಕಾಯ್ದೆಯ ಪರಿಷ್ಕೃತ ರೂಪ ಇದು.

ಇದಲ್ಲದೆ, ಮಾಹಿತಿ ತಂತ್ರಜ್ಞಾನ ಕಾಯ್ದೆ 2000 ಕೂಡ ಅಂತರ್ಜಾಲದ ಮೂಲಕ ಹರಡುವ ಆಕ್ಷೇಪಾರ್ಹ ಪೋಸ್ಟ್‌ಗಳನ್ನು ಅಪರಾಧವೆಂದು ಪರಿಗಣಿಸುತ್ತದೆ. ಈ ಎಲ್ಲ ಕಾಯ್ದೆಗಳು ಇದ್ದಾಗ್ಯೂ, ಕಾಂಗ್ರೆಸ್ ಸರ್ಕಾರದ ಅವಧಿಯಲ್ಲೂ ದ್ವೇಷ ಭಾಷಣ, ದ್ವೇಷ ಅಪರಾಧಗಳು ನಡೆಯುತ್ತಲೇ ಇವೆ. ಪ್ರಕರಣಗಳು ದಾಖಲಾದರೂ ಆರೋಪಿಗಳು ಬಹಳ ಸುಲಭವಾಗಿ ಜಾಮೀನು ಪಡೆಯುತ್ತಾರೆ ಮತ್ತು ತಮ್ಮ ಚಾಳಿಯನ್ನು ಮತ್ತೆ ಮುಂದುವರಿಸುತ್ತಿದ್ದಾರೆ. ರಾಜ್ಯದಲ್ಲಿ ಯಾವುದೇ ಸರ್ಕಾರ ಬಂದರೂ ಕೋಮುವಾದದ ಪ್ರಯೋಗಶಾಲೆಯಾದ ಕರ್ನಾಟಕದ ಕರಾವಳಿಯಲ್ಲಿ ಬದಲಾವಣೆ ಆಗುತ್ತಿಲ್ಲ.

ಸಂಘಪರಿವಾರದ ಕೋಮುವಾದಿ ರಾಜಕೀಯವನ್ನು ನಿಯಂತ್ರಿಸಲು ಈ ಕಾಯ್ದೆ ಸಹಕಾರಿಯಾಗಬಲ್ಲದು ಎಂದು ಕೆಲವು ಪ್ರಗತಿಪರರು ನಂಬಿದ್ದಾರೆ. ತಾನು ಅಧಿಕಾರಕ್ಕೆ ಬಂದು 2 ವರ್ಷಗಳ ನಂತರವೂ ಕೋಮುವಾದಿ ಶಕ್ತಿಗಳನ್ನು ಮಟ್ಟ ಹಾಕಲು ವಿಫಲವಾದ ಕಾಂಗ್ರೆಸ್ ಸರ್ಕಾರ ತನ್ನ ಬೆಂಬಲಿಗರನ್ನು ಸಮಾಧಾನಪಡಿಸಲು ಈ ಕಾಯ್ದೆ ತಂದಿದೆಯೇ ಎಂಬ ಪ್ರಶ್ನೆ ಮೂಡುತ್ತದೆ.

### ಕಠಿಣ, ಕರಾಳ ಕಾಯ್ದೆಗಳು ಫಲ ನೀಡಿವೆಯೇ?

ನಮ್ಮ ದೇಶದ ಸುರಕ್ಷತೆಯ ಹೆಸರಿನಲ್ಲಿ ಯುಎಪಿಎ, ಎನ್‌ಎಸ್‌ಎ ಮುಂತಾದ ಕಠಿಣ ಕಾಯ್ದೆಗಳಿವೆ, ದೇಶದ್ರೋಹದ ಸೆಕ್ಷನ್‌ಗಳಿವೆ. ಈ ಕಾಯ್ದೆಗಳಲ್ಲಿ ಜಾಮೀನು ದೊರಕುವುದು ಸುಲಭವಿಲ್ಲ. ಸಾಬೀತಾದರೆ ಜೀವಾವಧಿ ಶಿಕ್ಷೆಯೂ ಆಗಬಹುದು. ಹೋರಾಟಗಾರರನ್ನು, ಸರ್ಕಾರದ ನಡೆಗಳನ್ನು ಪ್ರತಿರೋಧಿಸುವ ರಾಜಕೀಯ ವಿರೋಧಿಗಳನ್ನು ಇಂತಹ ಕಾಯ್ದೆಗಳಡಿಯಲ್ಲಿ ಸಿಕ್ಕಿಸಿ ಅಪ್ಪಚ್ಚಿ ಮಾಡಲಾಗುತ್ತದೆ. ಎಷ್ಟೋ ಮಂದಿ 5-10 ವರ್ಷ ವಿಚಾರಣೆಯೂ ಇಲ್ಲದೆ, ಜಾಮೀನೂ ಇಲ್ಲದೆ ಜೈಲುಗಳಲ್ಲಿ ಕೊಳೆಯುತ್ತಾರೆ. ಪ್ರೊ. ಆನಂದ್ ತೇಲ್ತುಂಬ್ಡೆ, ಡಾ: ಬಿನಾಯಕ್ ಸೇನ್‌ರಂತಹ ಸಾರ್ವಜನಿಕ ಜೀವನದ ಹೆಸರಾಂತ ವ್ಯಕ್ತಿಗಳೇ ಇದರಿಂದ ನಲುಗಿದ್ದಾರೆ. ಇನ್ನು ಯುಎಪಿಎ ಕಾಯ್ದೆ ಎಷ್ಟೇ ಕಠಿಣವಾಗಿರಲಿ, ಇದರಡಿಯಲ್ಲಿ ಅಪರಾಧ ಸಾಬೀತಾಗಿರುವ ಪ್ರಕರಣಗಳು ಶೇ. 3ಕ್ಕಿಂತ ಕಡಿಮೆ. ಅಂದರೆ ಬಹುತೇಕ ಪ್ರಕರಣಗಳು ಸಾಕ್ಷ್ಯಾಧಾರಗಳೇ ಇಲ್ಲದ ರಾಜಕೀಯ ಪ್ರೇರಿತ ಸುಳ್ಳು ಮೊಕದ್ದಮೆಗಳು ಎಂದೇ ಅರ್ಥ.

ಶಿಕ್ಷೆಯ ಉದ್ದೇಶ ಸಂತ್ರಸ್ತರಿಗೆ ಪರಿಹಾರ ಒದಗಿಸುವುದು, ಅಪರಾಧ ತಡೆಗಟ್ಟುವುದು ಮತ್ತು ಮನಃಪರಿವರ್ತನೆ ಮಾಡುವುದೇ ಹೊರತು ಸೇಡು ತೀರಿಸಿಕೊಳ್ಳುವುದಲ್ಲ ಎಂಬುದು ನ್ಯಾಯಶಾಸ್ತ್ರದ ಮೂಲ ಪರಿಕಲ್ಪನೆ. ಹಾಗಾಗಿ, ಅಪರಾಧಗಳು ಘಟಿಸಿದಾಗ ಶಿಕ್ಷೆಯ ಖಚಿತತೆ ಹೆಚ್ಚು ಮುಖ್ಯವಾಗುತ್ತದೆ, ಅಂದರೆ ತಪ್ಪು ಮಾಡಿದಾತ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ ಎಂಬಷ್ಟು ದಕ್ಷತೆ ವ್ಯವಸ್ಥೆಯಲ್ಲಿ ಇರಬೇಕು. ಶಿಕ್ಷೆಯ ಪ್ರಮಾಣ ಎಷ್ಟೇ ಕಠಿಣವಾಗಿದ್ದರೂ, ತಪ್ಪಿಸಿಕೊಳ್ಳಲು ನೂರು ದಾರಿಗಳಿದ್ದರೆ ಅಂತಹ ನ್ಯಾಯದಾನ ವ್ಯವಸ್ಥೆ ಉದ್ದೇಶಿತ ಗುರಿಯನ್ನು ತಲುಪಲಾರದು. ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ಸಾಮೂಹಿಕ ಅತ್ಯಾಚಾರದ ಅಪರಾಧಿಗಳು ಕೂಡ ಸನ್ನಡತೆಗಾಗಿ ಬಿಡುಗಡೆಯ ಭಾಗ್ಯ ಪಡೆಯುವ ದೇಶ ನಮ್ಮದು!!!

ಹಾಗಾಗಿ ಕಾಯ್ದೆ ಕಠಿಣ ಆದ ಮಾತ್ರಕ್ಕೆ ಅದಕ್ಕೆ ಸಂಬಂಧಿಸಿದ ಅಪರಾಧಗಳು ಕಡಿಮೆಯಾದ ನಿದರ್ಶನಗಳು ಕಡಿಮೆ ಮತ್ತು ಸಾಮಾನ್ಯವಾಗಿ ಈ ವ್ಯವಸ್ಥೆಯ ವಿರೋಧಿಗಳ ವಿಷಯದಲ್ಲಿ ಸರ್ಕಾರ ಕಾನೂನುಗಳನ್ನು ಬಿಗಿಯಾಗಿ ಬಳಸುವ ಹಾಗೂ ವ್ಯವಸ್ಥೆಗೆ ಶರಣಾಗುವವರನ್ನು ರಕ್ಷಿಸುವ ಬೇಕಾದಷ್ಟು ಉದಾಹರಣೆಗಳು ನಮ್ಮ ಮುಂದಿವೆ.

### ಹಾಗಾದರೆ ಬೇಕಾಗಿರುವುದೇನು

ದ್ವೇಷ ಅಪರಾಧಗಳನ್ನು ತಡೆಗಟ್ಟಬೇಕು, ಅಂತಹ ಅಪರಾಧಿಗಳಿಗೆ ಖಚಿತವಾಗಿ ತಕ್ಕ ಶಿಕ್ಷೆ ಆಗಬೇಕು ಎಂಬುದರಲ್ಲಿ ಎರಡು ಮಾತಿಲ್ಲ. ಹಾಗೆಯೇ ಅಭಿವ್ಯಕ್ತಿ ಸ್ವಾತಂತ್ರ್ಯ ಎಂಬುದು ಮಿತಿಯಿಲ್ಲದ ಹಕ್ಕು ಎಂದೂ ವಾದಿಸಲಾಗುವುದಿಲ್ಲ. ಎಲ್ಲ ಹಕ್ಕು ಮತ್ತು ಸ್ವಾತಂತ್ರ್ಯಗಳು ಕೂಡ ಸಮಾಜದ ಪ್ರಗತಿಗೆ ಮತ್ತು ಸಾಮಾಜಿಕ ಸ್ವಾಸ್ಥ್ಯದ ಉದ್ದೇಶದಿಂದಲೇ ಮೂಡಿ ಬಂದಿವೆ. ಅವುಗಳಿಗೆ ವ್ಯತಿರಿಕ್ತವಾಗಿ ಹೋದರೆ ಅದನ್ನು ನಿರ್ಬಂಧಿಸುವ ಜವಾಬ್ದಾರಿ ಕೂಡ ಸರ್ಕಾರದ್ದೇ.

ಇದಕ್ಕಾಗಿ ಮೊದಲಿಗೆ ಸಮಾಜದಲ್ಲಿ ಜನತಾಂತ್ರಿಕ ಮೌಲ್ಯಗಳ ಬಗ್ಗೆ ಜನರಲ್ಲಿ ಅರಿವು-ಒಲವು ಮೂಡಿಸಬೇಕು. ದ್ವೇಷ ಬಿತ್ತುವ, ಸೌಹಾರ್ದತೆ ಕದಡುವ ಖೂಳರನ್ನು ಜನರೇ ದೂರ ಇಡುವಂತಹ ವಾತಾವರಣ ನಿರ್ಮಿಸಬೇಕು. ಅಷ್ಟಾಗಿಯೂ, ಅಪರಾಧ ಮಾಡುವವರಿಗೆ, ಎಷ್ಟೇ ಪ್ರಭಾವಿಗಳಾದರೂ ಶಿಕ್ಷೆಯಾಗುವಂತೆ ನೋಡಿಕೊಳ್ಳಬೇಕು. ಈ ಕ್ರಮಗಳನ್ನು ಕೈಗೊಳ್ಳದೆ, ಹೊಸಹೊಸ, ಕಠಿಣ ಕಾನೂನುಗಳನ್ನು ರೂಪಿಸುತ್ತಾ ಹೋದರೆ ಅವುಗಳು ದುರ್ಬಳಕೆಯಾಗುವ ಅಪಾಯವೇ ಹೆಚ್ಚು. ಒಂದು ಜನವಿರೋಧಿ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಕಾನೂನು ಎಂಬುದು ಕೂಡ ಆಳುವ ವರ್ಗದ ಕೈಯಲ್ಲಿ ಅಸ್ತ್ರವಾಗಿದೆ. ಅದನ್ನು ಸರ್ಕಾರಗಳು ವ್ಯವಸ್ಥೆಯನ್ನು ಕಾಪಾಡುವ ಪ್ರಶ್ನೆ ಬಂದಾಗ ಪರಿಣಾಮಕಾರಿಯಾಗಿ ಪ್ರಯೋಗಿಸುತ್ತವೆ ಎಂಬುದನ್ನು ದುಡಿಯುವ ಜನತೆ ಮರೆಯಬಾರದು. ಈ ಹಿನ್ನೆಲೆಯಲ್ಲಿ ಅವಲೋಕಿಸಿದಾಗ ಈ ದ್ವೇಷ ಅಪರಾಧ ನಿಯಂತ್ರಣ ಮಸೂದೆ ಅನಗತ್ಯ ಎಂದೇ ಹೇಳಬಹುದು.

# ಮಹಿಳೆಯರು ಮತ್ತು ಮಕ್ಕಳ ಮೇಲಿನ ಅಪರಾಧಗಳನ್ನು ತೊಡೆದುಹಾಕಲು ಎಐಎಂಎಸ್‌ಎಸ್ ಸಮಾವೇಶ

ಮಹಿಳೆಯರು ಮತ್ತು ಮಕ್ಕಳ ಮೇಲೆ ನಡೆಯುತ್ತಿರುವ ಅಪರಾಧಗಳ ವಿರುದ್ಧ ಸಮರ ಹೂಡುವ ಆಶಯದೊಂದಿಗೆ ಎಐಎಂಎಸ್‌ಎಸ್ 4 ತಿಂಗಳ ಕಾಲ ರಾಜ್ಯವ್ಯಾಪಿ ಸಭೆ, ಸಮಾವೇಶ, ಸಹಿ-ಸಂಗ್ರಹಣೆಯನ್ನು ಹಮ್ಮಿಕೊಂಡಿದೆ. ಅದರ ಭಾಗವಾಗಿ ಇದೇ ಜನವರಿ 7ರಂದು ಬೆಂಗಳೂರಿನ ಗಾಂಧಿ ಭವನದಲ್ಲಿ ರಾಜ್ಯ ಮಟ್ಟದ ಮಹಿಳಾ ಸಮಾವೇಶವನ್ನು ಸಂಘಟಿಸಿತ್ತು. ಹಿರಿಯ ರಂಗಕರ್ಮಿ ಪ್ರೊ. ರಾಮೇಶ್ವರಿ ವರ್ಮಾ ಸಮಾವೇಶವನ್ನು ಉದ್ಘಾಟನೆ ಮಾಡಿದರು. ಮುಖ್ಯ ಅತಿಥಿಗಳಾಗಿ ಎಸ್‌ಯುಸಿಐ(ಕಮ್ಯುನಿಸ್ಟ್) ಪಕ್ಷದ ರಾಜ್ಯ ಕಾರ್ಯದರ್ಶಿ ಕಾಮ್ರೇಡ್ ಕೆ. ಉಮಾ ಮಾತನಾಡಿದರು. ವಿವಿಧ ಗೋಷ್ಠಿಗಳಲ್ಲಿ ನಿಮ್ಹಾನ್ಸ್‌ನ ಮನಶ್ಶಾಸ್ತ್ರ ವಿಭಾಗದ ತಜ್ಞೆ ಡಾ: ಶ್ರೀದೇವಿ ಕುಮಾರ್ ಹಾಗೂ ಎಐಎಂಎಸ್‌ಎಸ್ ಅಖಿಲ ಭಾರತ ಉಪಾಧ್ಯಕ್ಷೆ ಡಾ:ಸುಧಾ ಕಾಮತ್, ಅಕ್ಕಮಹಾದೇವಿ ವಿ.ವಿಯ ವಿಶ್ರಾಂತ ಉಪಕುಲಪತಿ ಪ್ರೊ. ಸಬಿಹಾ ಭೂಮಿಗೌಡ ಹಾಗೂ ಚಲನಚಿತ್ರ ಗೀತರಚನೆಕಾರ ಶ್ರೀ. ಕವಿರಾಜ್ ಮಾತನಾಡಿದರು. ಎಐಎಂಎಸ್‌ಎಸ್‌ನ ಅಧ್ಯಕ್ಷೆ ಕಾಮ್ರೇಡ್ ಎಂ. ಎನ್. ಮಂಜುಳಾ,



ಹಿರಿಯ ರಂಗಕರ್ಮಿ ಪ್ರೊ.ರಾಮೇಶ್ವರಿ ವರ್ಮಾ ರವರಿಂದ ಸಮಾವೇಶ ಉದ್ಘಾಟನೆ

ರಾಜ್ಯ ಕಾರ್ಯದರ್ಶಿ ಕಾಮ್ರೇಡ್ ಎಸ್. ಶೋಭಾ ಮತ್ತು ರಾಜ್ಯ ಉಪಾಧ್ಯಕ್ಷೆ ಕಾಮ್ರೇಡ್ ಹರಿಣಿ ಕಾರ್ಯಕ್ರಮದ ವಿವಿಧ ಗೋಷ್ಠಿಗಳನ್ನು ನಿರ್ವಹಿಸಿದರು. ವೆನೆಜುವೆಲಾ ಮೇಲೆ ಅಮೇರಿಕ ನಡೆಸಿದ ಅಪ್ರಚೋದಿತ ಧಾಳಿಯನ್ನು ಖಂಡಿಸಿ ಸಮಾವೇಶವು ಗೊತ್ತುವಳಿಯನ್ನು ಅಂಗೀಕರಿಸಿತು.



ಎಸ್‌ಯುಸಿಐ(ಸಿ) ರಾಜ್ಯ ಕಾರ್ಯದರ್ಶಿಗಳಾದ ಕಾಮ್ರೇಡ್ ಕೆ. ಉಮಾ ಮಾತನಾಡುತ್ತಿರುವುದು. ವೇದಿಕೆಯ ಮೇಲೆ (ಎಡದಿಂದ) ಕಾ. ಶೋಭಾ ಎಸ್., ಡಾ: ಸುಧಾ ಕಾಮತ್, ಪ್ರೊ. ರಾಮೇಶ್ವರಿ ವರ್ಮ, ಕಾ. ಎಂ. ಎನ್. ಮಂಜುಳ



ಸಮಾವೇಶದಲ್ಲಿ ಭಾಗವಹಿಸಿದ್ದ ಮಹಿಳೆಯರು

# ನಿಜವಾದ ದೇಶಪ್ರೇಮ, ನಿಜವಾದ ರಾಷ್ಟ್ರವಾದ ಅಂದರೆ ಏನು?

ಭಾಗ–02

*[ನಮ್ಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಆರ್‌ಎಸ್‌ಎಸ್, ಹಿಂದೂ ಮಹಾಸಭಾಗಳ ಪಾತ್ರ ಹಾಗೂ ಅವುಗಳ ಮುಖಂಡರಾಗಿದ್ದ ಡಾ:ಶಾಮಪ್ರಸಾದ್ ಮುಖರ್ಜಿ, ವಿ.ಡಿ.ಸಾವರ್ಕರ್‌ಗಳ ಬಗ್ಗೆ ಪ್ರಧಾನಿ ಮೋದಿ ಆಗಸ್ಟ್ 15ರಂದು ತಮ್ಮ ಭಾಷಣದಲ್ಲಿ ವಿಪರೀತ ಹಾಡಿ ಹೊಗಳಿದ್ದರು. ಐತಿಹಾಸಿಕ ಪುರಾವೆಗಳಿಲ್ಲದ ಹಲವಾರು ಮಾತುಗಳನ್ನು ಅಂದು ಪ್ರಧಾನಿ ಆಡಿದ್ದರು. ಆ ಭಾಷಣದ ವಿಶ್ಲೇಷಣೆಯ ಮುಂದುವರಿದ ಭಾಗ–2 ಇಲ್ಲಿದೆ]*

ಡಾ: ಶಾಮ್‌ಪ್ರಸಾದ್ ಮುಖರ್ಜಿ ಅವರನ್ನು ಪ್ರಧಾನಿ ಮೋದಿ ಹಾಡಿ ಹೊಗಳಿದ್ದಾರೆ. ಆದರೆ, ಅದೇ ಶಾಮ್ ಪ್ರಸಾದ್ ಮುಖರ್ಜಿ ಪಶ್ಚಿಮ ಬಂಗಾಳದ ಸಮ್ಮಿಶ್ರ ಸರ್ಕಾರದ ಉಪಮುಖ್ಯಮಂತ್ರಿಯಾಗಿದ್ದಾಗ 1942ರ ಜುಲೈ 26ರಂದು ಬ್ರಿಟಿಷ್ ಯಜಮಾನರಿಗೆ ಒಂದು ಪತ್ರದ ಮೂಲಕ "ಈಗ ನಾನು ಕಾಂಗ್ರೆಸ್ ಹರಿಬಿಟ್ಟಿರುವ ವಿಶಾಲ ವ್ಯಾಪ್ತಿಯ ಯಾವುದೇ ಚಳುವಳಿಯ ಪ್ರತಿಫಲವಾಗಿ ಪ್ರಾಂತ್ಯದಲ್ಲಿ ಸೃಷ್ಟಿಯಾಗಬಹುದಾದ ಪರಿಸ್ಥಿತಿಯ ಬಗ್ಗೆ ನಿಮಗೆ ತಿಳಿಸಬಯಸುತ್ತೇನೆ. ಯುದ್ಧದ ಸಮಯದಲ್ಲಿ ಯಾರಾದರೂ, ಆಂತರಿಕ ಬಿಕ್ಕಟ್ಟು ಅಥವಾ ಅಭದ್ರತೆ ಉಂಟಾಗುವಂತೆ ಜನರ ಭಾವನೆಯನ್ನು ಬಡಿದೆಬ್ಬಿಸುವ ಯೋಜನೆ ಹೊಂದಿದ್ದರೆ, ಅದನ್ನು ಈಗ ಅಸ್ತಿತ್ವದಲ್ಲಿರುವ ಯಾವುದೇ ಸರ್ಕಾರವು ಪ್ರತಿರೋಧಿಸಬೇಕು" ಎಂದು ತಮ್ಮ ಸರ್ಕಾರದ ಬಗ್ಗೆ ಭರವಸೆ ನೀಡಿದ್ದರು. (ಮೂ: ಶಾಮ್‌ಪ್ರಸಾದ್ ಮುಖರ್ಜಿ, ದಿನಚರಿಯ ಪುಟಗಳಿಂದ, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ಪುಟ–179) ಅಂತಹ ಪರಿಸ್ಥಿತಿಯನ್ನು ನಿಭಾಯಿಸಲು ವಿಷಯವಾರು ಯಾವ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಬಂಗಾಳದ ರಾಜ್ಯಪಾಲರಿಗೆ ಸಲಹೆಯನ್ನೂ ಅವರು ನೀಡುತ್ತಾ, "ಈಗ ಪ್ರಶ್ನೆಯೆಂದರೆ, ಈ ಚಳುವಳಿಯನ್ನು (ಕ್ವಿಟ್ ಇಂಡಿಯಾ) ಬಂಗಾಳದಲ್ಲಿ ಯಾವ ರೀತಿ ಎದುರಿಸಬೇಕು? ಕಾಂಗ್ರೆಸ್‌ನ ಅತ್ಯುತ್ತಮ ಪ್ರಯತ್ನಗಳಿದ್ದರೂ ಕೂಡ ಈ ಚಳುವಳಿಯು ರಾಜ್ಯದಲ್ಲಿ ಬೇರೂರದಂತೆ ನೋಡಿಕೊಳ್ಳುವ ರೀತಿಯಲ್ಲಿ ಪ್ರಾಂತ್ಯದ ಆಡಳಿತವು ಕೆಲಸ ಮಾಡಬೇಕು. ನಮಗೆ, ಅದರಲ್ಲೂ ಜವಾಬ್ದಾರಿಯುತ ಮಂತ್ರಿಗಳಿಗೆ, ಕಾಂಗ್ರೆಸ್ ಯಾವ ಸ್ವಾತಂತ್ರ್ಯಕ್ಕಾಗಿ ಚಳುವಳಿಯನ್ನು ಆರಂಭಿಸಿದೆಯೋ, ಅದು ಈಗಾಗಲೇ ಜನರ ಪ್ರತಿನಿಧಿಗಳ ಕೈಯಲ್ಲಿದೆ ಎಂದು ಜನರಿಗೆ ಹೇಳಲು ಸಾಧ್ಯ. ಅದು ತುರ್ತು ಸಂದರ್ಭದಲ್ಲಿ ಕೆಲವು ಕ್ಷೇತ್ರಗಳಲ್ಲಿ ಸೀಮಿತವಾಗಬಹುದು. ಭಾರತೀಯರು ಬ್ರಿಟಿಷರನ್ನು ನಂಬಬೇಕು; ಅದು ಬ್ರಿಟನ್ನಿನ ಸಲುವಾಗಿ ಅಲ್ಲ ಅಥವಾ ಬ್ರಿಟಿಷರು ಅನುಕೂಲ ಪಡೆದುಕೊಳ್ಳುತ್ತಾರೆ ಎನ್ನುವುದಕ್ಕಲ್ಲ, ಬದಲಿಗೆ ಸ್ವತಃ ಪ್ರಾಂತ್ಯದ ರಕ್ಷಣೆ ಮತ್ತು ಸ್ವಾತಂತ್ರ್ಯಕ್ಕಾಗಿ" ಎಂದು ಬರೆದಿದ್ದರು. (ಎ.ಜಿ. ನೂರಾನಿ ಬರೆದ 'ಆರ್‌ಎಸ್‌ಎಸ್ ಮತ್ತು ಬಿಜೆಪಿ: ಒಂದು ಶ್ರಮ ವಿಭಜನೆ' ಕೃತಿಯಲ್ಲಿ ಉಲ್ಲೇಖ, ಲೆಫ್ಟ್ ವರ್ಡ್ ಬುಕ್ಸ್, 56–57) ಹಿಂದೂ ಮಹಾಸಭಾ 1947ರ ಆಗಸ್ಟ್ 15ರಂದು ನಾವು ಗಳಿಸಿದ ಸ್ವಾತಂತ್ರ್ಯದ ಸಂಭ್ರಮಾಚರಣೆಯನ್ನು ಬಹಿಷ್ಕರಿಸಿತು.

### ಎರಡು ರಾಷ್ಟ್ರ ತತ್ವ ಮತ್ತು ದೇಶದ ವಿಭಜನೆ

ಈಗ ನಾವು ಮೂರನೇ ಪ್ರಶ್ನೆಗೆ ಬರೋಣ. ಅದು ಧರ್ಮಾಧಾರಿತ ದೇಶ ವಿಭಜನೆಯನ್ನು ಕುರಿತದ್ದು. ನಾವು ಇತಿಹಾಸದ ವೈಜ್ಞಾನಿಕ ತತ್ವದ ಆಧಾರದ ಮೇಲೆ ರಾಷ್ಟ್ರದ ಉದಯದ ಸಾರಾಂಶವನ್ನು ಈಗಾಗಲೇ ಹಿಂದಿನ ಭಾಗ–1ರಲ್ಲಿ ವಿವರಿಸಿದ್ದೇವೆ.

ಆದರೆ ಆರ್‌ಎಸ್‌ಎಸ್–ಹಿಂದೂ ಮಹಾಸಭಾಗಳು ಆ ಚಾರಿತ್ರಿಕ ಸತ್ಯವನ್ನು ಒಪ್ಪುವುದಿಲ್ಲ. ಅವರ ಚಿಂತಕ ಗೋಲ್ವಾಲ್ಕರ್, "ನಾವು ರಾಷ್ಟ್ರವಾದವನ್ನು ಒಂದು ಪ್ರಾಚೀನ ವಾಸ್ತವ ಎಂದೂ ಮತ್ತು ಹಿಂದೂಗಳು ಭಾರತದ ರಾಷ್ಟ್ರೀಯ ಸಮಾಜದವರು ಎಂಬ ರಾಷ್ಟ್ರವಾದಕ್ಕೆ ಹಿಂದಿರುಗಬೇಕು" ಎನ್ನುತ್ತಾರೆ. ಅಂದರೆ, ರಾಷ್ಟ್ರವಾದವು ಒಂದು ಪ್ರಾಚೀನ ಪರಿಕಲ್ಪನೆಯಾಗಿತ್ತು ಮತ್ತು ಭಾರತದಲ್ಲಿ (ಅಂದರೆ ಋಷಿಮುನಿಗಳ ಕಾಲದ ಭಾರತದಲ್ಲಿ) ಹಿಂದೂಗಳ ರಾಷ್ಟ್ರೀಯ ಸಮಾಜವಿತ್ತು ಎಂದರ್ಥ. ಪ್ರಪಂಚದಲ್ಲಿ ಎಲ್ಲಾದರೂ ಕೇವಲ ಧರ್ಮಾಧಾರಿತವಾದ ಒಂದಾದರೂ ದೇಶವಿದೆಯೇ? ಹಾಗಾಗಿದ್ದರೆ ಯುರೋಪಿನಲ್ಲಿ ಕ್ರೈಸ್ತ ಧರ್ಮಾಧಾರಿತ ಒಂದೇ ಒಂದು ದೇಶವಿರುತ್ತಿತ್ತು; ಅರಬ್ ರಾಷ್ಟ್ರದಲ್ಲಿ ಇಸ್ಲಾಂ ಆಧಾರಿತ ಒಂದೇ ದೇಶವಿರುತ್ತಿತ್ತು ಅಥವಾ ಇಡೀ ಅಮೇರಿಕ ಖಂಡ ಒಂದೇ ದೇಶವಾಗುತ್ತಿತ್ತು. ಆದ್ದರಿಂದ, ಪ್ರಾಚೀನ ಕಾಲದಲ್ಲೂ ಭಾರತದಲ್ಲಿ ಧರ್ಮಾಧಾರಿತವಾದ ದೇಶದ ಪರಿಕಲ್ಪನೆ ಇತ್ತು ಎನ್ನುವುದು ಹಸಿಸುಳ್ಳನ್ನು ಪ್ರಚಾರ ಮಾಡುವ ಭಯಾನಕ ಕೆಲಸ.

ಈಗ ಹಿಂದೂ ರಾಷ್ಟ್ರೀಯತೆಯ ಪರಿಕಲ್ಪನೆಯು ಎಲ್ಲಿಂದ ಹುಟ್ಟಿತು ಎನ್ನುವ ಪ್ರಶ್ನೆಗೆ ಬರೋಣ. 1923 ರಲ್ಲಿ 'ಹಿಂದುತ್ವದ ಮೂಲ ಪಾಠಗಳು' ಕೃತಿಯನ್ನು 'ಮರಾಠ' ಎನ್ನುವ ಹುಸಿ ನಾಮಧೇಯದಲ್ಲಿ ಬರೆದ ಸಾವರ್ಕರ್, ಹಿಂದುತ್ವ ಅಥವಾ ಹಿಂದೂ ರಾಷ್ಟ್ರೀಯತೆಯ ಬಗ್ಗೆ ಒಂದು ರೂಪುರೇಷೆಯನ್ನು ಕೊಟ್ಟರು. ನಂತರ 1937ರಲ್ಲಿ ಅಹಮದಾಬಾದ್‌ನಲ್ಲಿ ನಡೆದ ಹಿಂದೂ ಮಹಾಸಭಾದ 19ನೇ ಅಧಿವೇಶನವನ್ನು ಉದ್ದೇಶಿಸಿ, "ಭಾರತದಲ್ಲಿ ಎರಡು ವಿರೋಧಿ ರಾಷ್ಟ್ರಗಳು ಅಕ್ಕಪಕ್ಕದಲ್ಲಿವೆ. ಭಾರತವು ಈಗಾಗಲೇ ಸಾಮರಸ್ಯದ ರಾಷ್ಟ್ರವಾಗಿ ಬೆಸೆದಿದೆ ಅಥವಾ ಹಾಗಾಗಬೇಕೆಂದು ಬಯಸುವುದರಿಂದಲೇ ಬೆಸೆಯಬಹುದು ಎಂದು ಭಾವಿಸುತ್ತಾ ಹಲವಾರು ಬಾಲಿಶ ರಾಜಕಾರಣಿಗಳು ಗಂಭೀರ ತಪ್ಪುಗಳನ್ನು ಮಾಡುತ್ತಿದ್ದಾರೆ... ಭಾರತವನ್ನು ಇಂದು ಏಕೀಕೃತವಾದ ಮತ್ತು ಏಕರೂಪದ ರಾಷ್ಟ್ರವಾಗಿ ಭಾವಿಸುವುದು ಅಸಾಧ್ಯ. ಅದಕ್ಕೆ ತದ್ವಿರುದ್ಧವಾಗಿ, ಭಾರತದಲ್ಲಿ ಪ್ರಧಾನವಾಗಿ ಎರಡು ರಾಷ್ಟ್ರಗಳಿವೆ – ಒಂದು ಹಿಂದೂ ರಾಷ್ಟ್ರ ಮತ್ತು ಇನ್ನೊಂದು ಮುಸಲ್ಮಾನ ರಾಷ್ಟ್ರ" ಎಂದು ಅಬ್ಬರಿಸಿದ್ದರು.

ಹೀಗೆ, ಸಾವರ್ಕರ್ ಕೃತಿಯಲ್ಲಿ ಮೊದಲಿಗೆ ಪ್ರಸ್ತಾಪವಾದ ಎರಡು ರಾಷ್ಟ್ರಗಳ ತತ್ವವು 1937ರಲ್ಲಿ ಹಿಂದೂ ಮಹಾಸಭಾದ ಗೊತ್ತುವಳಿಯ ಮೂಲಕ ಅಂಗೀಕೃತವಾಯಿತು. 1939ರ ಅಕ್ಟೋಬರ್ 9ರಂದು ಬಾಂಬೆಯಲ್ಲಿ ಸಾವರ್ಕರ್ ಜೊತೆಯ ಭೇಟಿಯ ನಂತರ ಅಂದಿನ ಭಾರತದ ವೈಸ್‌ರಾಯ್ ಲಿನ್‌ಲಿತ್‌ಗೊ ಅಂದಿನ ಭಾರತದ ರಾಜ್ಯ ಕಾರ್ಯದರ್ಶಿ ಜೆಟ್‌ಲ್ಯಾಂಡ್‌ಗೆ ನೀಡಿದ ವರದಿಯಲ್ಲಿ, "ಅವರು (ಸಾವರ್ಕರ್) ಹೇಳಿದರು – ಈಗ ಪರಿಸ್ಥಿತಿ ಹೇಗಿದೆಯೆಂದರೆ, ಬ್ರಿಟನ್ನಿನ ಸರ್ಕಾರ ಹಿಂದೂಗಳನ್ನು ಒಲಿಸಿಕೊಂಡು ಅವರೊಡನೆಯೇ ಕಾರ್ಯ ನಿರ್ವಹಿಸಬೇಕಾಗುತ್ತದೆ. ಈಗ ನಮ್ಮಿಬ್ಬರ ಹಿತಾಸಕ್ತಿಗಳು ಒಂದೇ ಆಗಿದ್ದು ನಾವು ಜೊತೆಗೂಡಬೇಕಾಗಿರುವುದು ಅತ್ಯವಶ್ಯಕ... ನಮ್ಮ ಹಿತಾಸಕ್ತಿಗಳು ಎಷ್ಟು ನಿಕಟವಾಗಿ ಬೆಸೆದಿವೆ ಎಂದರೆ, ಹಿಂದುತ್ವಕ್ಕೆ ಮತ್ತು ಗ್ರೇಟ್ ಬ್ರಿಟನ್‌ಗೆ ಪರಸ್ಪರ ಸ್ನೇಹಿತರಾಗಿರುವುದು ಅತ್ಯಗತ್ಯ ಮತ್ತು ಹಳೆಯ ವೈರತ್ವವು ಇನ್ನು ಮುಂದೆ ಅಗತ್ಯವಿಲ್ಲ" ಎಂದು ಬರೆದಿದ್ದರು. (ದಿ ವೀಕ್, 24.01.16)

ಮೂರು ವರ್ಷಗಳ ನಂತರ, ಜಿನ್ನಾ ನಾಯಕತ್ವದ ಆಲ್ ಇಂಡಿಯಾ ಮುಸ್ಲಿಂ ಲೀಗ್ ಅದೇ ಪರಿಕಲ್ಪನೆಯನ್ನು ತನ್ನ ಲಾಹೋರ್ ಅಧಿವೇಶನದಲ್ಲಿ ಅಳವಡಿಸಿಕೊಂಡಿತು. ಸಾವರ್ಕರ್, 1943ರ ಆಗಸ್ಟ್ 15ರಂದು ನಾಗಪುರದಲ್ಲಿ "ನನಗೆ ಜಿನ್ನಾ ಜೊತೆ ಎರಡು ರಾಷ್ಟ್ರ ತತ್ವದ ಬಗ್ಗೆ ಯಾವುದೇ ತಕರಾರಿಲ್ಲ. ನಾವು ಹಿಂದೂಗಳು ಸ್ವತಃ ನಾವೇ ಒಂದು ದೇಶ ಮತ್ತು ಹಿಂದೂ ಹಾಗೂ ಮುಸ್ಲಿಮರು ಎರಡು ದೇಶಗಳೆನ್ನುವುದು ಚಾರಿತ್ರಿಕ ಸಂಗತಿ" ಎಂದಿದ್ದರು. ಹೀಗೆ ಸಾವರ್ಕರ್ ಹಿಂದೂ ಕೋಮುವಾದವನ್ನು ನ್ಯಾಯಸಮ್ಮತವೆಂದು ಮತ್ತು ಹಿಂದೂ ಪ್ರತ್ಯೇಕತೆಯನ್ನು ರಾಷ್ಟ್ರವಾದಿ ಎಂದೂ ಸಮರ್ಥಿಸಿಕೊಂಡರು ಮತ್ತು ನಮ್ಮ ದೇಶದ ವಿಭಜನೆಗೆ ಬುನಾದಿಯಾದ ಎರಡು ರಾಷ್ಟ್ರಗಳ ತತ್ವವನ್ನು ಬೆಂಬಲಿಸಿದರು. ಭಾರತವನ್ನು ಹಿಂದೂ ರಾಷ್ಟ್ರವನ್ನಾಗಿ (ಹಿಂದೂ ಧಾರ್ಮಿಕ ರಾಷ್ಟ್ರವನ್ನಾಗಿ) ಪರಿವರ್ತಿಸುವ ಹಿಂದೂ ಮಹಾಸಭಾದ ಅಭಿಪ್ರಾಯವನ್ನು ಗೋಲ್ವಾಲ್ಕರ್ ಅನುಮೋದಿಸಿದರು. "ಸ್ವತಃ ಹಿಂದೂಗಳೇ ಒಂದು ರಾಷ್ಟ್ರ ಅಥವಾ ರಾಷ್ಟ್ರೀಯತೆ... ಹಿಂದೂಗಳು ಒಂದು ರಾಷ್ಟ್ರವೆನ್ನುವ ಪ್ರತಿಪಾದನೆಯನ್ನು ವಿವೇಕವುಳ್ಳ ಯಾವ ವ್ಯಕ್ತಿಯನ್ನು ಪ್ರಶ್ನಿಸುವುದಿಲ್ಲ... ನಮ್ಮ ರಾಷ್ಟ್ರ ಎಂದರೆ ಮತ್ತು ಇದರ ಹೊರತಾಗಿಯೂ ಬಹುಸಂಖ್ಯಾತರು ಎನ್ನುವ ಪ್ರಶ್ನೆಗೂ ಯಾವಾಗಲೂ ಹಿಂದೂ ರಾಷ್ಟ್ರವೆಂದೇ ಅರ್ಥ ಮತ್ತು ಬೇರೇನೂ ಅಲ್ಲ." (ನಾವು ಅಥವಾ ನಮ್ಮ ರಾಷ್ಟ್ರೀಯತೆಯ ವ್ಯಾಖ್ಯಾನ)

ಈ ತಿಳುವಳಿಕೆಯು ಚಾರಿತ್ರಿಕವಾಗಿ ಸಾಬೀತಾಗಿರುವ ಸತ್ಯವೇ? ಅವಲೋಕಿಸೋಣ. ಈ ಯುಗದ ಮಹಾನ್ ಮಾರ್ಕ್ಸ್‌ವಾದಿ ಚಿಂತಕರಾದ ಕಾಮ್ರೇಡ್ ಶಿವದಾಸ್ ಘೋಷ್, "ಬರ್ಮಾ ಜನರಲ್ಲಿ ಮುಸ್ಲಿಮರು ಗಣನೀಯ ಸಂಖ್ಯೆಯಲ್ಲಿದ್ದರೂ ಕೂಡ, ಬರ್ಮಾ ಜನರು ಒಂದು ರಾಷ್ಟ್ರವಾಗಿ ಹೊರಹೊಮ್ಮಲು ಸಾಧ್ಯವಾಯಿತು ಎನ್ನುವುದನ್ನು ನಾವು ಮರೆಯಲು ಸಾಧ್ಯವೇ? ಬಹಳ ದೊಡ್ಡ ಸಂಖ್ಯೆಯಲ್ಲಿ ಮುಸ್ಲಿಮರಿದ್ದರೂ ಕೂಡ ಇಂಡೋನೇಷಿಯಾದ ಜನರೂ ಕೂಡ ಒಂದು ರಾಷ್ಟ್ರವಾಗಿ ಹೊರಹೊಮ್ಮಲು ಸಾಧ್ಯವಾಗಿದೆ. ಚೀನಾ ಮತ್ತು ಸೋವಿಯತ್ ಒಕ್ಕೂಟದಲ್ಲಿ ಮುಸ್ಲಿಮರ ಸಂಖ್ಯೆ ಕಡಿಮೆ ಪ್ರಮಾಣದಲ್ಲೇನೂ ಇಲ್ಲ. ಹಾಗಿದ್ದರೂ ಕೂಡ ಚೀನಿಯರು ಮತ್ತು ಸೋವಿಯತ್ ಜನತೆ ಏಕರೂಪದ ರಾಷ್ಟ್ರವಾಗಿ ಹೊರಹೊಮ್ಮಿದ್ದಾರೆ. ...ವಿಭಜನೆಗೂ ಮುನ್ನ ಭಾರತದಲ್ಲಿ ಪ್ರತ್ಯೇಕ ರಾಷ್ಟ್ರಕ್ಕಾಗಿ ಆಗ್ರಹಿಸಿದಂತೆ ಈ ಯಾವ ದೇಶದಲ್ಲೂ ಮುಸ್ಲಿಮರು ಪ್ರತ್ಯೇಕ ರಾಷ್ಟ್ರವನ್ನು ಕೇಳಿಲ್ಲ ಅಥವಾ ಕೇಳುತ್ತಿಲ್ಲ. ನಮ್ಮ ದೇಶದಲ್ಲಾದಂತೆ ಈ ಯಾವ ದೇಶಕ್ಕೂ ಮುಸಲ್ಮಾನ ಮತ್ತು ಮುಸಲ್ಮಾನೇತರ ಜನಸಂಖ್ಯೆಯ ಆಧಾರದ ಮೇಲೆ ವಿಭಜನೆಯಾಗುವ ದುರದೃಷ್ಟ ಬರಲಿಲ್ಲ" ಎಂದು ವಿವರಿಸಿದ್ದಾರೆ. (ಕೋಮು ಸಮಸ್ಯೆಯ ಕುರಿತು)

### ಸಾವರ್ಕರ್ ದೇಶಪ್ರೇಮ ಎಂಥದ್ದು!

ಸಾವರ್ಕರ್, ನೇತಾಜಿ, ಭಗತ್ ಸಿಂಗ್ ಅಥವಾ ಗಾಂಧೀಜಿ ಇವರೆಲ್ಲರಿಗಿಂತ ಎತ್ತರದವರು ಎಂದು ಬಿಂಬಿಸುವ ಒಂದು ಪಟ್ಟಭದ್ರ ಗುಂಪಿನ ಪ್ರಯತ್ನವನ್ನು ದೃಷ್ಟಿಯಲ್ಲಿ ಇಟ್ಟುಕೊಂಡು, ಸಾವರ್ಕರ್ ಪರಿಕಲ್ಪನೆಯ ದೇಶಪ್ರೇಮ ಹಾಗೂ ರಾಷ್ಟ್ರವಾದದ ಗುಣಲಕ್ಷಣವನ್ನು ಚರ್ಚಿಸುವ ಅನಿವಾರ್ಯತೆ ಬಂದಿದೆ. ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದರಿಂದ ಅಂಡಮಾನ್ ಜೈಲಿನಲ್ಲಿ 'ಕಾಲಾಪಾನಿ' ಶಿಕ್ಷೆಗೊಳಗಾಗಿದ್ದ ಸಾವರ್ಕರ್ ಸ್ವಾತಂತ್ರ್ಯ ಚಳುವಳಿಯನ್ನು ಬೆಂಬಲಿಸುವುದರಿಂದ ತಮ್ಮ ಬಿಡುಗಡೆಯಾಗುವುದಿಲ್ಲ ಎನ್ನುವುದನ್ನು ಬಹಳ ಬೇಗನೆ ಕಂಡುಕೊಂಡರು. ಅದರ ಬದಲಿಗೆ, ತಾನು ಬ್ರಿಟಿಷ್ ಸಾಮ್ರಾಜ್ಯಶಾಹಿ ಆಳ್ವಿಕರಿಗೆ ಬದ್ಧನಾಗಿ, ಹಿಂದುತ್ವದ ವಿಚಿತ್ರ ತತ್ವವನ್ನು ಅಳವಡಿಸಿಕೊಂಡು, ಪ್ರತಿಗಾಮಿ ಸಾಮ್ರಾಜ್ಯಶಾಹಿ–ಬಂಡವಾಳಶಾಹಿಗಳ ಸೇವಕನಾಗುವುದೇ ಅವರಿಗೆ ಉತ್ತಮವೆನಿಸಿತು. ಆದ್ದರಿಂದ, ಅವರು ಕ್ಷಮಾಯಾಚನೆಯನ್ನು ಕೋರಿ, ಬಿಡುಗಡೆಗೆ ಅಂಗಲಾಚಿ ಬ್ರಿಟಿಷ್ ಸರ್ಕಾರಕ್ಕೆ ಒಂದಾದ ಮೇಲೊಂದು ದಯಾಭಿಕ್ಷೆಯ ಪತ್ರಗಳನ್ನು ಬರೆದರು. ಅವರು, ತಾನು ಬ್ರಿಟಿಷ್ ಸರ್ಕಾರಕ್ಕೆ ನಿಷ್ಠನಾಗಿರುವ ಭರವಸೆ ನೀಡಿದ್ದಲ್ಲದೆ, ಇದು ಒಂದೊಮ್ಮೆ ತಮ್ಮನ್ನು ಮಾರ್ಗದರ್ಶಕನೆಂದು ಪರಿಗಣಿಸುತ್ತಿದ್ದ ದೇಶ, ವಿದೇಶಗಳಲ್ಲಿನ ದಾರಿತಪ್ಪಿದ ಭಾರತೀಯ ಯುವಕರನ್ನೆಲ್ಲ ವಾಪಸ್ ಕರೆತರುತ್ತದೆ ಸರ್ಕಾರದ ಇಚ್ಛೆಯಂತೆ ತಾನು ಅದರ ಸೇವೆಗೆ ಸಿದ್ಧವಾಗಿದ್ದು, ತನ್ನಲ್ಲಿನ ಈ ಬದಲಾವಣೆ ಪ್ರಜ್ಞಾಪೂರ್ವಕವಾಗೇ ಇದ್ದ ಕಾರಣ ಇನ್ನು ಮುಂದೆಯೂ ಅದು ಹಾಗೆಯೇ ಇರುವ ಭರವಸೆಯನ್ನೂ ಅವರು ನೀಡಿದ್ದರು. (ಅಂಡಮಾನ್‌ನಲ್ಲಿ ದಂಡನೆಯ ಒಪ್ಪಂದಗಳು, ಆರ್.ಸಿ.ಮಂಜುಂದಾರ್, ಭಾರತ ಸರ್ಕಾರದ ಸಂಸ್ಕೃತಿ ಇಲಾಖೆಯಿಂದ ಪ್ರಕಟಿತ, 1974)

ಅಂಡಮಾನ್ ಜೈಲಿನಿಂದ ಬಿಡುಗಡೆಯಾದ ನಂತರ, "ಈಗ ನಮ್ಮ ನೆಲವನ್ನು ತಲುಪಿರುವ ಯುದ್ಧವು(ಎರಡನೇ ವಿಶ್ವಯುದ್ಧ) ಏಕಕಾಲದಲ್ಲಿ ಅಪಾಯ ಮತ್ತು ಅವಕಾಶಗಳನ್ನು ಒಳಗೊಂಡಿದೆ. ಹಾಗಾಗಿ ಮಿಲಿಟರೀಕರಣವನ್ನು ತೀವ್ರಗೊಳಿಸಬೇಕು ಮತ್ತು ಸೇನೆ, ನೌಕಾಪಡೆ, ವಾಯುಪಡೆಗಳಿಗೆ ಮತ್ತು ವಿಭಿನ್ನ 9ನೇ ಪುಟಕ್ಕೆ




ಎಐಯುಟಿಯುಸಿ ಅಖಿಲ ಭಾರತ ಉಪಾಧ್ಯಕ್ಷರಾದ ಕಾಮ್ರೇಡ್ ಸ್ವಪನ್ ಘೋಷ್ ರವರು ಎಐಪಿಎಫ್ ಅಖಿಲ ಭಾರತ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದರು.

ಎಐಪಿಎಫ್

## 3ನೇ ಅಖಿಲ ಭಾರತ ವಿದ್ಯುತ್ ನೌಕರರ ಯಶಸ್ವಿ ಸಮ್ಮೇಳನ

ವಿದ್ಯುತ್ ವಲಯದ ಖಾಯಂ ಹಾಗೂ ಹೊರಗುತ್ತಿಗೆ ನೌಕರರ ಸಂಘಟನೆಗಳ ಒಕ್ಕೂಟವಾಗಿರುವ ಆಲ್ ಇಂಡಿಯಾ ಪವರ್‌ಮೆನ್ಸ್ ಫೆಡರೇಷನ್ (ಎಐಪಿಎಫ್)ಗೆ ಕೆಪಿಟಿಸಿಎಲ್ ವಿದ್ಯುತ್ ವಿತರಣ ಗುತ್ತಿಗೆ ಕಾರ್ಮಿಕರ ಸಂಘ, ಕರ್ನಾಟಕ ವಿದ್ಯುತ್ ಸರಬರಾಜು ಕಂಪನಿಗಳ ಗುತ್ತಿಗೆ ನೌಕರರ ಸಂಘ, ಕರ್ನಾಟಕ ವಿಂಡ್ ಮಿಲ್ ಎನರ್ಜಿ ನೌಕರರ ಸಂಘ ಮತ್ತು ಕರ್ನಾಟಕ ಸೋಲಾರ್ ಎನರ್ಜಿ ನೌಕರರ ಸಂಘಗಳು ಸೇರ್ಪಡೆಯಾಗಿದ್ದು, ಸಾವಿರಾರು ಗುತ್ತಿಗೆ ನೌಕರರನ್ನು ಸಂಘಟಿಸಿ ಅತ್ಯಂತ ಯಶಸ್ವಿ ಹೋರಾಟಗಳನ್ನು ಸಂಘಟಿಸುತ್ತಿದೆ. ಈ ಫೆಡರೇಷನ್‌ನ 3ನೇ ಅಖಿಲ ಭಾರತ ಸಮ್ಮೇಳನವು 2025ರ ಡಿ. 13 ಮತ್ತು 14ರಂದು ಕೋಲ್ಕತ್ತಾದ ಮೌಲಾಲಿ ಯುವ ಕೇಂದ್ರದಲ್ಲಿ ಅತ್ಯಂತ ಯಶಸ್ವಿಯಾಗಿ ನಡೆಯಿತು. ಎಐಯುಟಿಯುಸಿ ಅಖಿಲ ಭಾರತ ಉಪಾಧ್ಯಕ್ಷರಾದ ಕಾಮ್ರೇಡ್ ಸ್ವಪನ್ ಘೋಷ್ ಎಐಪಿಎಫ್ ಅಖಿಲ ಭಾರತ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದರು. ಸಮ್ಮೇಳನದ ಸಮಾರೋಪದಲ್ಲಿ ಮುಖ್ಯ ಭಾಷಣಕಾರರಾಗಿ ಎಐಯುಟಿಯುಸಿ ಪ್ರಧಾನ ಕಾರ್ಯದರ್ಶಿಗಳಾದ ಕಾಮ್ರೇಡ್ ಶಂಕರದಾಸ್ ಗುಪ್ತಾ ಮಾತನಾಡಿದರು. ಸಮ್ಮೇಳನವು ಕಾಮ್ರೇಡ್ ಕೆ. ಸೋಮಶೇಖರ್‌ರನ್ನು ಅಧ್ಯಕ್ಷರಾಗಿ ಮತ್ತು ಕಾಮ್ರೇಡ್ ಸಮರ್ ಸಿನ್ಹಾ ಪ್ರಧಾನ ಕಾರ್ಯದರ್ಶಿಯಾಗಿರುವ 68 ಸದಸ್ಯರ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಿತು.

ಧಾರವಾಡ: ಹಿರಿಯ ಸಾಹಿತಿ ಡಾ.ಸಿದ್ಧಲಿಂಗ ಪಟ್ಟಣಶೆಟ್ಟಿ ಅಭಿನಂದನಾ ಕಾರ್ಯಕ್ರಮ : ಪಿಸಿಎಐ

# “ಜನಸಾಮಾನ್ಯರ ನೋವಿನ ಕುರಿತ ಸಾಹಿತ್ಯ ಬಹುಕಾಲ ನಿಲ್ಲುತ್ತದೆ” : ದಾಮೋದರ ಮೌಜೋ




ಅಭಿನಂದನೆಯನ್ನು ಸ್ವೀಕರಿಸಿ ಮಾತನಾಡಿದ ಹಿರಿಯ ಸಾಹಿತಿ ಡಾ.ಸಿದ್ಧಲಿಂಗ ಪಟ್ಟಣಶೆಟ್ಟಿ



ನೆರೆದಿದ್ದ ಸಾಹಿತ್ಯಾಸಕ್ತರು

“ದನಿಯಿಲ್ಲದವರ, ಈ ಸಮಾಜದ ಅಂಚಿನಲ್ಲಿರುವ ಜನಸಾಮಾನ್ಯರ ಕುರಿತು ಬರೆದ ಸಾಹಿತ್ಯ ಬಹುಕಾಲ ನಿಲ್ಲುತ್ತದೆ. ಡಾ ಸಿದ್ಧಲಿಂಗ ಪಟ್ಟಣಶೆಟ್ಟಿ ಅವರು ಭಾರತೀಯ ಭಾಷೆಗಳ ನಡುವಿನ ಸೇತುವೆಯಾಗಿ ಬಹುತ್ವವನ್ನು ಎತ್ತಿ ಹಿಡಿದ ಲೇಖಕ” ಎಂದು ಗೋವಾ ರಾಜ್ಯದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ದಾಮೋದರ ಮೌಜೋ ಬಣ್ಣಿಸಿದರು. ಅವರು ಪ್ರೊಗ್ರೆಸಿವ್ ಕಲ್ಚರಲ್ ಅಸೋಸಿಯೇಶನ್ ಆಫ್ ಇಂಡಿಯಾ (ಪಿಸಿಎಐ) ಸಂಘಟನೆಯು ಧಾರವಾಡದ ಆಲೂರು ವೆಂಕಟರಾವ್ ಸಭಾಭವನದಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಪುರಸ್ಕಾರಕ್ಕೆ ಭಾಜನರಾಗಿರುವ ಸಿದ್ಧಲಿಂಗ ಪಟ್ಟಣಶೆಟ್ಟಿ ಅವರ ಅಭಿನಂದನಾ ಸಮಾರಂಭ ಹಾಗೂ ಸಂವಾದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ನಾವು ಈ ಸಮಾಜದ ಓರೆಕೋರೆಗಳ ಕುರಿತು ನಮ್ಮ ಭಿನ್ನಮತವನ್ನು ದಾಖಲಿಸಲು ಬರೆಯಬೇಕು. ಅಂದಾಗ ಮಾತ್ರ ಒಂದು ಹೊಸ ಎಚ್ಚರ ಮೂಡಲು ಸಾಧ್ಯ. ದೇಶದಲ್ಲಿ ಎಲ್ಲ ಭಾಷೆಗಳು ಶ್ರೇಷ್ಠವೇ. ಯಾವ ಭಾಷೆಯನ್ನೂ ಸಹ ನಾವು ತಿರಸ್ಕರಿಸಬಾರದು. ಆದರೆ, ಯಾವುದೇ ಭಾಷೆಯ ಹೇರಿಕೆಯಿಂದ ಸಮಸ್ಯೆಗಳು ಉದ್ಭವಿಸುತ್ತವೆ. ಯುವ ಲೇಖಕರು ತಮ್ಮ ಪರಂಪರೆಯ ಮೌಲ್ಯಗಳನ್ನು ಹೀರಿಕೊಂಡು ಹೊಸದನ್ನು ಕಟ್ಟಲು ಪ್ರಯತ್ನಿಸಬೇಕು ಎಂದು ಅವರು ಅಭಿಪ್ರಾಯಪಟ್ಟರು.

ಸಿದ್ಧಲಿಂಗ ಪಟ್ಟಣಶೆಟ್ಟಿ ಅವರ ಕಾವ್ಯದ ಕುರಿತು ಮಾತನಾಡಿದ ಬುಕ್ ಬ್ರಹ್ಮ ಸಂಚಾಲಕ ದೇವು ಪತ್ತಾರ, “ಅವರ ಕಾವ್ಯದ ಗುಣವಿಶೇಷವೇ ಪ್ರತಿಮೆಗಳು. ಅವರ ಕವಿತೆಗಳಲ್ಲಿ ಒಂದರಿಂದ ಇನ್ನೊಂದಕ್ಕೆ ಬದಲಾವಣೆ, ಬೆಳವಣಿಗೆ, ಕವಿತೆ ಕಟ್ಟುವ ಕಸುಬುದಾರಿಕೆ ಕಾಣುತ್ತದೆ ಎಂದರು. ಅವರು ಯಾವಾಗಲೂ ಅಧಿಕಾರ ಕ್ರೇಂದ್ರದಿಂದ ಅಂತರ ಕಾಯ್ದುಕೊಂಡು ಬಂದವರು. ತಪ್ಪುಗಳು ಕಂಡಾಗ ಖಂಡಿಸದೇ ಕೂತವರಲ್ಲ” ಎಂದು ಬಣ್ಣಿಸಿದರು. ಸಿದ್ಧಲಿಂಗ ಪಟ್ಟಣಶೆಟ್ಟಿ ಗದ್ಯದ ಬಗ್ಗೆ ಲೇಖಕಿ ಡಾ. ಪ್ರಜ್ಞಾ ಮತ್ತಿಹಳ್ಳಿ ಉಪನ್ಯಾಸ ನೀಡಿದರು. ರಂಗಕರ್ಮಿ, ಶಿರೀಷ್ ಜೋಶಿ ಅವರ ರಂಗಸಾಹಿತ್ಯದ ಕುರಿತು ಮಾತನಾಡಿದರು. ಅಭಿನಂದನೆ ಸ್ವೀಕರಿಸಿದ ಪಟ್ಟಣಶೆಟ್ಟಿಯವರು “ಯುವಲೇಖಕರು ಸತತ ಓದು ಬರವಣಿಗೆಯಿಂದ ಸಾಹಿತ್ಯದಲ್ಲಿ ಮುಂದುವರಿಯಬೇಕು. ಸಾಮಾನ್ಯ ಜನರ ಒಡನಾಟದಲ್ಲಿ ಬದುಕಿನ ಅನುಭವಗಳನ್ನು ದಾಖಲಿಸಬೇಕು” ಎಂದರು. ಅಧ್ಯಕ್ಷತೆ ವಹಿಸಿದ್ದ ಧಾರವಾಡ ಜನಜಾಗೃತಿ ಅಭಿಯಾನದ ಸಲಹೆಗಾರ ರಾಮಾಂಜನಪ್ಪ ಆಲ್ದಳ್ಳಿ ಅವರು, ಪಟ್ಟಣಶೆಟ್ಟಿಯವರು ಸದಾ ನಮ್ಮ ಪ್ರಗತಿಪರ ಆಶಯದ ಕಾರ್ಯಕ್ರಮಗಳಿಗೆ ಬೆಂಬಲಿಸುತ್ತ ಬಂದಿದ್ದಾರೆ. ಯುವಜನತೆ, ಹಿರಿಯರ ಸ್ಫೂರ್ತಿಯ ಮಾತುಗಳ ಆಶಯದಂತೆ ಸಾಂಸ್ಕೃತಿಕ ಚಳುವಳಿಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಕರೆ ನೀಡಿದರು. ಶ್ರೀಮತಿ ಹೇಮಾ ಪಟ್ಟಣಶೆಟ್ಟಿ, ಪಿಸಿಎಐನ ಸದಸ್ಯರಾದ ಡಾ. ಸುನೀತಕುಮಾರ್ ಶೆಟ್ಟಿ ಮತ್ತು ಅಲಕಾ ರಾವ್ ಉಪಸ್ಥಿತರಿದ್ದರು.




ಬೆಳಗಾವಿಯಲ್ಲಿ ಭಾರಿ ಪ್ರತಿಭಟನಾ ಮೆರವಣಿಗೆ

## ವಿಬಿ–ಜಿ ರಾಮ್‌ಜಿ ಕಾಯ್ದೆ ವಾಪಸಾತಿಗೆ ಆಗ್ರಹ

ಡಿ.30ರಂದು ಬೆಳಗಾವಿ ನಗರದಲ್ಲಿ ನಮ್ಮ ಪಕ್ಷ ಎಸ್‌ಯುಸಿಐ(ಸಿ) ಮತ್ತು ಅಖಿಲ ಭಾರತ ರೈತ ಕೃಷಿ–ಕಾರ್ಮಿಕ ಸಂಘಟನೆ (ಎಐಕೆಕೆಎಂಎಸ್)ಗಳ ವತಿಯಿಂದ ಇತ್ತೀಚೆಗೆ ಕೇಂದ್ರವು ಊರ್ಜಿತಗೊಳಿಸಿದ ವಿಬಿ– ಜಿ ರಾಮ್ ಜಿ ಕಾಯ್ದೆಯನ್ನು ವಾಪಸ್ ಪಡೆಯಬೇಕೆಂದು ಕೂಲಿ ಕಾರ್ಮಿಕರ ಬೃಹತ್ ಪ್ರತಿಭಟನಾ ಮೆರವಣಿಗೆಯನ್ನು ಹಮ್ಮಿಕೊಳ್ಳಲಾಗಿತ್ತು. ಕೃಷಿ ಕೂಲಿ ಕಾರ್ಮಿಕರು ಜಮಾವಣೆಗೊಂಡು ನಂತರ ಜಿಲ್ಲಾಧಿಕಾರಿ ಕಛೇರಿಗೆ ಧಾವಿಸಿ, ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತ್ ಅಧಿಕಾರಿಗಳ ಮೂಲಕ ಪ್ರಧಾನ ಮಂತ್ರಿಗೆ ಆಗ್ರಹಪತ್ರವನ್ನು ರವಾನಿಸಿದರು. ಪ್ರತಿಭಟನಾ ಸಭೆಯನ್ನು ಉದ್ದೇಶಿಸಿ, ಪಕ್ಷದ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯರಾದ ಕಾಮ್ರೇಡ್ ರಾಮಾಂಜನಪ್ಪ ಆಲ್ದಳ್ಳಿ ಮಾತನಾಡಿದರು. ನರೇಗಾ ಕಾಯ್ದೆಯನ್ನು ಇನ್ನಷ್ಟು ಜನಸ್ನೇಹಿಯಾಗಿ ರೂಪಿಸಿ, ಮಾನವ ದಿನಗಳನ್ನು 200ಕ್ಕೆ ಏರಿಸಬೇಕು, ಕೂಲಿ ದರವನ್ನು ರೂ.600ಕ್ಕೆ ಏರಿಸಿ ಮರು ಜಾರಿ ಮಾಡಬೇಕೆಂದು ಪ್ರತಿಭಟನಾಕಾರರು ಆಗ್ರಹಿಸಿದರು.

8ನೇ ಪುಟದಿಂದ

## ನಿಜವಾದ ರಾಷ್ಟ್ರವಾದ ಅಂದರೆ ಏನು?

ಯುದ್ಧ ಸಾಮಗ್ರಿಗಳ ತಯಾರಿಕಾ ಘಟಕಗಳನ್ನು ಹಿಂದೂಗಳು ಸೇರಿಕೊಳ್ಳುವಂತೆ ಹುರಿದುಂಬಿಸಲು ಹಿಂದೂ ಮಹಾಸಭಾದ ಪ್ರತಿಯೊಂದು ನಗರ ಮತ್ತು ಹಳ್ಳಿಯಲ್ಲಿರುವ ಎಲ್ಲಾ ಶಾಖೆಗಳು ಸಕ್ರಿಯವಾಗಿ ತೊಡಗಿಕೊಳ್ಳಬೇಕು...” ಆದ್ದರಿಂದ, ಎಲ್ಲಾ ಬಗೆಯ ಮಿಲಿಟರಿ ಪಡೆಗೆ ಸೇರಿಕೊಳ್ಳಲು ಹಿಂದೂಗಳನ್ನು, ಅದರಲ್ಲೂ ಮುಖ್ಯವಾಗಿ ಬಂಗಾಳ ಮತ್ತು ಅಸ್ಸಾಂ ಪ್ರಾಂತ್ಯಗಳ ಹಿಂದೂಗಳನ್ನು ಎಷ್ಟು ಸಾಧ್ಯವೊ ಅಷ್ಟು ಪರಿಣಾಮಕಾರಿಯಾಗಿ ನಾವು ಬಡಿದೆಬ್ಬಿಸಬೇಕು” ಎಂದು ಬರೆದರು. (ಮೇಲಿನದೇ ಪುಸ್ತಕ, ಪುಟ: 460–61)

ಆನಂತರ, ತಮ್ಮ ಹಿಂದೂ ರಾಷ್ಟ್ರದ ಪರಿಕಲ್ಪನೆಯ ಸಾರಾಂಶವನ್ನು ವಿವರಿಸುತ್ತಾ ಗೋಲ್ವಾಲ್ಕರ್, “ಭಾರತದಲ್ಲಿರುವ ವಿದೇಶಿ ಜನಾಂಗಗಳು ಹಿಂದೂರಾಷ್ಟ್ರದ ವೈಭವೀಕರಣವನ್ನು ಬಿಟ್ಟರೆ ಬೇರೆ ಯಾವ ವಿಚಾರವನ್ನು ಪ್ರೋತ್ಸಾಹಿಸಬಾರದು ಮತ್ತು ತಮ್ಮ ಪ್ರತ್ಯೇಕ ಅಸ್ತಿತ್ವವನ್ನು ಕಳೆದುಕೊಳ್ಳಬೇಕು ಅಥವಾ ಯಾವುದೇ ಹಕ್ಕುಗಳನ್ನು, ನಾಗರೀಕ ಹಕ್ಕುಗಳನ್ನೂ ಸಹ ಕೇಳದೆ ಹಿಂದೂರಾಷ್ಟ್ರಕ್ಕೆ ಸಂಪೂರ್ಣವಾಗಿ ಅಧೀನವಾಗಿದ್ದುಕೊಂಡು ದೇಶದಲ್ಲಿರಬಹುದು” ಎಂದು ಹೇಳಿದರು.(ನಾವು ಅಥವಾ ನಮ್ಮ ರಾಷ್ಟ್ರೀಯತೆಯ ವ್ಯಾಖ್ಯಾನ) ಇವರ ಆಲೋಚನೆಯು ನಾಜಿ ಮುಖಂಡ ಹಿಟ್ಲರ್‌ನಿಗೆ ಬಹಳ ಹತ್ತಿರವಾಗಿಯೇ ಇದೆ, ಹಾಗಾಗಿಯೇ “ತನ್ನ ಜನಾಂಗ ಮತ್ತು ತನ್ನ ಸಂಸ್ಕೃತಿಯನ್ನು ಪರಿಶುದ್ಧವಾಗಿರಿಸಿಕೊಳ್ಳಲು ಜರ್ಮನಿಯು ಇಡೀ ದೇಶವನ್ನು ಶುದ್ಧೀಕರಣ ಮಾಡಿ ಪ್ರಪಂಚಕ್ಕೆ ಆಘಾತ ನೀಡಿದೆ... ಜನಾಂಗದ ಗರ್ವ ಉತ್ತುಂಗದಲ್ಲಿದೆ... ಇದರಿಂದ ಹಿಂದೂಸ್ಥಾನವು ಪಾಠ ಕಲಿತು ಲಾಭ ಪಡೆಯಬಹುದು ಎಂದು ಗೋಲ್ವಾಲ್ಕರ್ ಹೇಳಿದ್ದರು.. (ಅದೇ ಪುಸ್ತಕದಿಂದ) ಸಾವರ್ಕರ್‌ರಂತೆ ಹೆಗ್ಡೆವಾರ್ ಕೂಡ ಬ್ರಿಟಿಷರಿಗೆ ವಿಧೇಯರಾಗಿದ್ದು ಹೇಳಿದರು, “ಹಿಂದೂಸ್ಥಾನವು ಹಿಂದುಗಳ ರಾಜ್ಯ. ನಾವು ಹಿಂದೂಗಳ ರಾಜ್ಯವನ್ನು ಸಂಘಟಿಸುತ್ತೇವೆ.” ಇದನ್ನೆಲ್ಲ ನೋಡಿದಾಗ ಬರುವ ಪ್ರಶ್ನೆಯೆಂದರೆ, ಆರ್‌ಎಸ್‌ಎಸ್, ಬಿಜೆಪಿ, ಸಂಘ ಪರಿವಾರಕ್ಕೆ ತಾವು ರಾಷ್ಟ್ರವಾದ ಮತ್ತು ದೇಶಪ್ರೇಮದ ಏಕೈಕ ಉತ್ತರಾಧಿಕಾರಿಗಳು ಎಂದು ಮತ್ತು ದೇಶದ ಸ್ವಾತಂತ್ರ್ಯವನ್ನು ಹೆಮ್ಮೆಯಿಂದ ಆಚರಿಸುತ್ತೇವೆ ಎಂದು ಗರ್ವದಿಂದ ಹೇಳಿಕೊಳ್ಳಲು, ಹಾಗೆಯೇ ಬೇರೆಯವರನ್ನು ದೇಶದ ವಿಭಜನೆಗೆ ಕಾರಣರೆಂದು ಆರೋಪಿಸಲು ಯಾವ ನೈತಿಕ ಹಕ್ಕಿದೆ?

### ಕೊನೆ ಮಾತುಗಳು

ಈ ವಿಷಯಕ್ಕೆ ಸುತ್ತುವರಿದಂತೆ ಕಾಮ್ರೇಡ್ ಶಿವದಾಸ್ ಘೋಷರ ಅದ್ಭುತ ವಿಶ್ಲೇಷಣೆಯನ್ನು ನೆನಪಿಸಿಕೊಳ್ಳುವುದು ಬಹಳ ಸೂಕ್ತ: “...ಬೇರೆಲ್ಲಾ ವಸಾಹತುಗಳ ಬೂರ್ಜ್ವಾಸಿಗಳಿಗೆ ಇದ್ದಂತೆಯೇ ಭಾರತದ ಬೂರ್ಜ್ವಾಸಿಗೂ ಸಾಮ್ರಾಜ್ಯವಾದದ ವಿರುದ್ಧ ಜನ ಹೋರಾಟದ ಬಗ್ಗೆ ಜೀವಭಯವಿತ್ತು. ಏಕೆಂದರೆ ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ಭಾರತೀಯರು ನಡೆಸುತ್ತಿರುವ ಕ್ರಾಂತಿಕಾರಿ ಹೋರಾಟವು ಒಂದು ವೇಳೆ ಯಶಸ್ವಿಯಾದರೆ, ಅದು ನಮ್ಮ ದೇಶದಲ್ಲಿ ಸಾಮ್ರಾಜ್ಯಶಾಹಿ ಆಳ್ವಿಕೆಯನ್ನು ಕೊನೆಗಾಣಿಸುವುದಷ್ಟೇ ಅಲ್ಲದೆ, ರಾಷ್ಟ್ರೀಯ ಬೂರ್ಜ್ವಾಸಿಯನ್ನು ಹೋರಾಟದ ನಾಯಕತ್ವದಿಂದ ತೆಗೆದು ಹಾಕುತ್ತದೆ; ಬಂಡವಾಳಶಾಹಿಯೇತರ ಅಭಿವೃದ್ಧಿಯ ವಿಧಾನದ ಮಾರ್ಗವನ್ನು ತೆರೆಯುತ್ತದೆ ಮತ್ತು ಭಾರತದಲ್ಲಿ ಬಂಡವಾಳಶಾಹಿ ಆಳ್ವಿಕೆಯನ್ನು ಸ್ಥಾಪಿಸುವ ಎಲ್ಲಾ ಸಾಧ್ಯತೆಗಳನ್ನು ನುಚ್ಚು ನೂರಾಗಿಸುತ್ತದೆ ಎಂದವರು ಅರ್ಥ ಮಾಡಿಕೊಂಡಿದ್ದರು. ಒಂದು ಕಡೆ ಸಾಮ್ರಾಜ್ಯವಾದದ ಜೊತೆ ವಿರೋಧ, ಇನ್ನೊಂದು ಕಡೆ, ಜನರ ಕ್ರಾಂತಿಕಾರಿ ಹೋರಾಟದ ಬಗ್ಗೆ ಜೀವಭಯ – ಇದು ಭಾರತೀಯ ಬೂರ್ಜ್ವಾಸಿಯ ರಾಷ್ಟ್ರವಾದಿ ವಿಭಾಗವು ಸಾಮ್ರಾಜ್ಯವಾದದ ವಿರುದ್ಧ ಸುಧಾರಣಾವಾದಿ ವಿರೋಧಾತ್ಮಕ ಪಾತ್ರ ವಹಿಸುವಂತೆ ಮಾಡಿತು. ಅದರ ಜಮೀನ್ದಾರಿ ಪದ್ಧತಿಯ ವಿರುದ್ಧದ ಪಾತ್ರವೂ ಅಷ್ಟೇ ರಾಜಿಪರವಾಗಿತ್ತು. ...ಸಾಮ್ರಾಜ್ಯವಾದದ ವಿರುದ್ಧ ರಾಜಕೀಯ ಚಳುವಳಿಯ ಪ್ರಕ್ರಿಯೆಯಲ್ಲಿ ವಿಭಿನ್ನ ಭಾಷೆಗಳಲ್ಲಿ ಮಾತನಾಡುವ ಮತ್ತು ವಿಭಿನ್ನ ಧರ್ಮಗಳನ್ನು ಪಾಲಿಸುವ ಭಾರತೀಯರು ರಾಜಕೀಯವಾಗಿ ಒಂದು ದೇಶವಾದರು; ಆದರೆ ಸಮಾಜದ ಪ್ರಜಾತಾಂತ್ರಿಕರಣಕ್ಕಾಗಿ ಜಮೀನ್ದಾರಿ ಪದ್ಧತಿ, ಜಮೀನ್ದಾರಿ ಅನೈಕ್ಯತೆ ಮತ್ತು ಧಾರ್ಮಿಕ ಬಂಧನಗಳ ವಿರುದ್ಧ ನಡೆಸಬೇಕಿದ್ದ ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ರಾಂತಿಗಳ ಕಾರ್ಯವನ್ನು ಪ್ರಧಾನವಾಗಿ ಪೂರ್ಣಗೊಳಿಸುವುದರಲ್ಲಿ ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿಯ ನಾಯಕತ್ವದ ವೈಫಲ್ಯತೆಯಿಂದಾಗಿ, ಭಾರತೀಯರು ಧರ್ಮ, ಜಾತಿ, ಭಾಷೆ, ಜನಾಂಗ ಇತ್ಯಾದಿಗಳಿಂದ ಅನೈಕ್ಯಗೊಂಡು ಸಾಮಾಜಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ವಿಭಿನ್ನ ಕೋಮುಗಳಾಗಿ ಒಡೆದು ಹೋದರು.” (ಕೋಮು ಸಮಸ್ಯೆಯ ಕುರಿತು)

ಹಾಗಾಗಿ ಸ್ವಾತಂತ್ರ್ಯ ಸಂಗ್ರಾಮದ ನ್ಯೂನತೆಯ ಅನುಕೂಲವನ್ನು ಪಡೆದುಕೊಂಡು, ದಮನಿತ ಜನರು ಅನೈಕ್ಯರಾಗಿ, ವಾಸ್ತವ ಸತ್ಯಗಳನ್ನು ಅರಿಯದವರಾಗಿ, ಧರ್ಮಾಂಧತೆ, ಅಂಧಾಭಿಮಾನ, ನಿಗೂಢವಾದ, ಮೂಢನಂಬಿಕೆಗಳ ಬಲೆಯಲ್ಲಿ ಸಿಲುಕಿರುವಂತೆ ಮಾಡುವ ಬಂಡವಾಳಶಾಹಿ ವರ್ಗದ ಯೋಜನೆಯನ್ನು ವಾಸ್ತವಕ್ಕಿಳಿಸಲು ಮತ್ತು ಅಧಿಕಾರಕ್ಕಾಗಿ ಆರ್‌ಎಸ್‌ಎಸ್–ಬಿಜೆಪಿ–ಸಂಘ ಪರಿವಾರಗಳು ಹಿಂದುತ್ವದ, ಹಿಂದೂರಾಷ್ಟ್ರದ ಚಾಂಪಿಯನ್‌ಗಳಾಗಿವೆ ಮತ್ತು ಮುಸ್ಲಿಮರ, ಹಾಗೆಯೇ ಕ್ರಿಶ್ಚಿಯನ್ನರ ವಿರುದ್ಧ ವಿಷ ಕಾರುತ್ತಿವೆ. ಆದ್ದರಿಂದ ಪ್ರಧಾನ ಮಂತ್ರಿ ಮೋದಿ ಅವರ ಮಾತುಗಳು, ಶಾಮ್ ಪ್ರಸಾದ್ ಮುಖರ್ಜಿ ಅವರನ್ನು ಹಾಡಿ ಹೊಗಳಿರುವುದು, ಸ್ವಾತಂತ್ರ್ಯ ದಿನಾಚರಣೆಯ ವೈಭವಯುತ ಆಚರಣೆ, ಎನ್‌ಸಿಇಆರ್‌ಟಿಯಿಂದ ಇತಿಹಾಸದ ತಿರುಚುವಿಕೆ ಮತ್ತು ನಮ್ಮ ದೇಶದ ಸ್ವಾತಂತ್ರ್ಯ ಸಂಗ್ರಾಮದ ಮೇರು ವ್ಯಕ್ತಿತ್ವಗಳೊಂದಿಗೆ ಸಾವರ್ಕರ್‌ನನ್ನು ಸಮೀಕರಿಸಿರುವುದು, ಇದೆಲ್ಲವೂ ತಮ್ಮ ನಿಜವಾದ ಉದ್ದೇಶವನ್ನು, ಅಂದರೆ ಅಸತ್ಯ, ದ್ವೇಷ, ಧಾರ್ಮಿಕ ವ್ಯಾಖ್ಯಾನಗಳಿಂದಲೇ ಬೆಳೆದು ಬಂದ ಮತ್ತು ದೇಶದ ಹಿತಾಸಕ್ತಿಗಳಿಗೆ ದ್ರೋಹವೆಸಗಿದ ಸಂಘಟನೆಗಳ ಇತಿಹಾಸದ ಮುಂದುವರಿಕೆಯಾಗಿರುವುದನ್ನು ಮರೆಮಾಚಿ ಜನರನ್ನು ತಪ್ಪುದಾರಿಗೆಳೆಯುವ ತಂತ್ರಗಳಷ್ಟೇ. ಆದರೆ ಕೆಲವು ಜನರು ಕೆಲವು ಕಾಲ ಕಟ್ಟುಕತೆಗಳನ್ನು ನಂಬಬಹುದು, ಆದರೆ ತಿಳುವಳಿಕೆಯುಳ್ಳ ಮನಸ್ಸುಗಳು ಅಂತಹ ಕಸವನ್ನು ಕಸದ ಬುಟ್ಟಿಗೆ ಹಾಕುತ್ತವೆ ಎನ್ನುವುದು ನಮಗೆ ಇತಿಹಾಸ ಕಲಿಸಿರುವ ಪಾಠ.

# ಇಂದಿನ ವೃತ್ತಿ ಶಿಕ್ಷಣವು ಅಗ್ಗದ ಕಾರ್ಮಿಕರನ್ನು ಸೃಷ್ಟಿಸುತ್ತಿದೆ ಅಷ್ಟೇ!

ಕರ್ನಾಟಕದಲ್ಲಿ ತೆರೆಯಲಾಗುತ್ತಿರುವ ಕೆಪಿಎಸ್ ಮ್ಯಾಗ್ನೆಟ್ ಶಾಲೆಗಳಲ್ಲಿ 6ನೇ ತರಗತಿಯಿಂದಲೇ ವೃತ್ತಿಶಿಕ್ಷಣವನ್ನು (Vocational Education) ಪರಿಚಯಿಸುತ್ತಿರುವುದು ಅತ್ಯಂತ ಅಪಾಯಕಾರಿ ಸಂಗತಿಯಾಗಿದೆ. ಶಿಕ್ಷಣದ ಖಾಸಗೀಕರಣ, ವ್ಯಾಪಾರೀಕರಣ ಹಾಗೂ ಕಾರ್ಪೊರೇಟೀಕರಣದ ನೀಲಿನಕ್ಷೆಯಾಗಿರುವ ರಾಷ್ಟ್ರೀಯ ಶಿಕ್ಷಣ ನೀತಿ(ಎನ್‌ಇಪಿ) – 2020ನ್ನು ರಾಜ್ಯ ಸರ್ಕಾರವು ಹಿಂಪಡೆದಿದ್ದರೂ, ಅದರ ಶಿಫಾರಸ್ಸಿನಂತೆಯೇ ಈ ಬೆಳವಣಿಗೆಯಾಗಿದೆ.

### ಅಸಲಿಗೆ ವೃತ್ತಿಶಿಕ್ಷಣದ ವ್ಯಾಖ್ಯಾನ ಏನು?

'ಬುನಾದಿ ಹಂತದ ರಾಷ್ಟ್ರೀಯ ಪಠ್ಯಕ್ರಮ'ದ ಚೌಕಟ್ಟಿನ(NCFFS) ಪ್ರಕಾರ: "ಬುನಾದಿ ಮತ್ತು ಪೂರ್ವಸಿದ್ಧತಾ ಹಂತಗಳಲ್ಲಿ, ಆಟ ಮತ್ತು ಇತರ ಚಟುವಟಿಕೆಗಳ ಮೂಲಕ ವಿವಿಧ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸಲಾಗುತ್ತದೆ. ಇವು ಮುಂದೆ ಉದ್ಯೋಗಗಳಲ್ಲಿ ಉಪಯುಕ್ತವಾಗುತ್ತವೆ. ಇವು 'ಪೂರ್ವ-ವೃತ್ತಿಪರ ಸಾಮರ್ಥ್ಯಗಳು'. ಮಧ್ಯಮ ಹಂತದಲ್ಲಿ (Middle Stage), ವಿದ್ಯಾರ್ಥಿಗಳಿಗೆ ವ್ಯಾಪಕ ಶ್ರೇಣಿಯ ಕೆಲಸಗಳ ಬಗ್ಗೆ ಪರಿಚಯ ಮಾಡಿಕೊಡಲಾಗುತ್ತದೆ. ಆಗ ಅವರು ಮಾಧ್ಯಮಿಕ ಹಂತದಲ್ಲಿ ತಮ್ಮ ಆಯ್ಕೆಯ ವೃತ್ತಿಯಲ್ಲಿ ಕೌಶಲ್ಯಗಳನ್ನು ಪಡೆಯಲು ಮತ್ತು ಲಾಭದಾಯಕ ಉದ್ಯೋಗದತ್ತ ಸಾಗಲು ಸಹಾಯವಾಗುತ್ತದೆ." [ಪುಟ 425]. ಅಲ್ಲದೆ, "ವಿದ್ಯಾರ್ಥಿಗಳು ಕೋಳಿ ಸಾಕಣೆ, ಡೈರಿ ಫಾರಂ, ಕೀಟ ನಿಯಂತ್ರಣ, ನರ್ಸರಿ, ಮೆಕ್ಯಾನಿಕ್ ವರ್ಕ್‌ಶಾಪ್‌ಗಳು, ಮರಗೆಲಸ, ಹೊಲಿಗೆ ಘಟಕಗಳು, ಹೋಟೆಲ್ ಮತ್ತು ರೆಸ್ಟೋರೆಂಟ್, ಆಸ್ಪತ್ರೆ, ಜಿಮ್, ವೃದ್ಧಾಶ್ರಮ, ಬ್ಯೂಟಿ ಸಲೂನ್ ಮುಂತಾದೆಡೆಗಳಲ್ಲಿ 'ತತ್ಸಂಬಂಧಿತ ಇಂಟರ್ನ್‌ಶಿಪ್'ಗಳನ್ನು ಕೈಗೊಳ್ಳಬೇಕಾಗುತ್ತದೆ." [ಪುಟ 432].

ಅಂದರೆ, ವಿವಿಧ ವಿಷಯಗಳ ಕುರಿತ ಜ್ಞಾನಭಂಡಾರಕ್ಕೆ ವಿದ್ಯಾರ್ಥಿಗಳ ಮನಸ್ಸನ್ನು ತೆರೆಯುವ ಬದಲು, ಅವರನ್ನು 'ದುಡಿಮೆಗೆ ಸಿದ್ಧಪಡಿಸುವ' (fit for job) ಕಡೆಗೆ ಒತ್ತು ನೀಡಲಾಗುತ್ತದೆ. ಆದರೆ, ಈ 'ಉದ್ಯೋಗ ಆಧಾರಿತ ಶಿಕ್ಷಣ'ವು ಇಷ್ಟು ಆರಂಭಿಕ ಹಂತದಲ್ಲೇ ಏಕೆ? ಇಲ್ಲಿಯವರೆಗೆ, ವಿದ್ಯಾರ್ಥಿಗಳು ಕೇವಲ ಪದವಿಗಳನ್ನು ಪಡೆಯುತ್ತಿದ್ದರು, ಆದರೆ ಉದ್ಯೋಗಕ್ಕೆ ಬೇಕಾದ ಕೌಶಲ್ಯಗಳನ್ನು ಪಡೆಯುತ್ತಿರಲಿಲ್ಲ, ಆದ್ದರಿಂದಲೇ ಅವರು ನಿರುದ್ಯೋಗಿಗಳಾಗಿ ಉಳಿದಿದ್ದಾರೆ ಎಂಬುದು ಸರ್ಕಾರದ ಅಂಬೋಣ. ಆದರೆ, ಸತ್ಯ ಬೇರೆಯೇ ಇದೆ.

### ಉದ್ಯೋಗದ ಮಾರುಕಟ್ಟೆಯ ಭೀಕರ ವಾಸ್ತವ

ಯುವಜನರು ನಿರುದ್ಯೋಗಿಗಳಾಗಿ ಉಳಿಯಲು ಕೇವಲ ಉದ್ಯೋಗ ಆಧಾರಿತ ಕೌಶಲ್ಯಗಳ ಕೊರತೆಯೇ ಕಾರಣವಾಗಿದ್ದಲ್ಲಿ, ITI, CTI, ಡಿಗ್ರಿ ಮತ್ತು ಡಿಪ್ಲೊಮಾ ಎಂಜಿನಿಯರಿಂಗ್ ಕಾಲೇಜುಗಳು ಹಾಗೂ ಇತರ ವೃತ್ತಿಪರ ಕೋರ್ಸ್‌ಗಳಿಂದ ಉತ್ತೀರ್ಣರಾದ ಕೋಟ್ಯಾಂತರ ಮಂದಿ ಏಕೆ ನಿರುದ್ಯೋಗಿಗಳಾಗಿ ಉಳಿಯುತ್ತಿದ್ದಾರೆ? ತಮ್ಮ ಸಾಂಪ್ರದಾಯಿಕ ಪದವಿಗಳ ಜೊತೆಜೊತೆಯಲ್ಲೇ ಹತ್ತು ಹಲವು ರೀತಿಯ ಕೋರ್ಸ್‌ಗಳನ್ನು ಮಾಡಿ ಸರ್ಟಿಫಿಕೇಟ್‌ಗಳನ್ನು ಪಡೆಯುವ ಯುವಜನರೂ ಸಹ ಭಾರತದಲ್ಲಿ ಉದ್ಯೋಗಗಳಿಗೆ ಪರದಾಡುತ್ತಿದ್ದಾರೆ ಏಕೆ? ಹುದ್ದೆಗಳಿಗಿಂತ ಹತ್ತಾರು, ಕೆಲವು ಬಾರಿ ನೂರಾರು ಪಟ್ಟು ಹೆಚ್ಚಿನ ಅರ್ಜಿದಾರರು ಇರಲು ಕಾರಣವೇನು? ಅವರೆಲ್ಲಾ ಉದ್ಯಮಶೀಲತೆ, ಕಸಬುದಾರಿಕೆ – ಕೌಶಲ್ಯ, ದುಡಿಮೆಗಾರಿಕೆಯ ಕೊರತೆಗಳೇ ಕಾರಣವೇ? ಅಥವಾ ಇವು ನೆಪಗಳೇ? ಎಂಜಿನಿಯರಿಂಗ್ ಪದವೀಧರರಲ್ಲಿ ನಿರುದ್ಯೋಗ ದರವು ಶೇ. 48 ರಿಂದ ಶೇ. 83ಕ್ಕೆ ಏರಿದೆ. 'ಅನ್‌ಸ್ಟಾಪ್' (Unstop – ಒಂದು ಪ್ರಸಿದ್ಧ ಸಂಸ್ಥೆ) ನಡೆಸಿದ ಸಮೀಕ್ಷೆಯ ಪ್ರಕಾರ, ಶೇ. 50 ರಷ್ಟು MBA ಪದವೀಧರರು ಸಹ ನಿರುದ್ಯೋಗಿಗಳಾಗಿದ್ದಾರೆ. ಇಂತಹ ಉದಾಹರಣೆಗಳು ಸಾಕಷ್ಟಿವೆ. ವಿಚಿತ್ರವೆಂದರೆ, ಹಲವಾರು ದಶಕಗಳ ಹಿಂದಿನಿಂದ ಇದೇ ವ್ಯವಸ್ಥೆಯಿಂದ ಹಿಂದಿನ (ಕೆಲವು ಬಾರಿ ಹಳೆಯದು ಎನ್ನಲಾದ?) ಪಠ್ಯಕ್ರಮಗಳನ್ನು ಅಭ್ಯಸಿಸಿಕೊಂಡು ಬಂದಿದ್ದ ಕೋಟ್ಯಾಂತರ ಮಂದಿ ದೇಶದಲ್ಲೇ ಆಗಲಿ ಅಥವಾ ವಿದೇಶಗಳಲ್ಲೇ ಆಗಲಿ ಉತ್ತಮ ಸ್ಥಾನಗಳನ್ನು ಅಲಂಕರಿಸಿಲ್ಲವೇ, ದೇಶದ ಆರ್ಥಿಕತೆಯನ್ನು ಬೆಳೆಸಲಿಲ್ಲವೇ? ವಿಚಿತ್ರ ವಾದ ಸರಣಿ!

ಈ ರೀತಿಯಲ್ಲಿ 'ವೃತ್ತಿಪರ ಶಿಕ್ಷಣ' ಪಡೆದ ಮಕ್ಕಳು 'ಸ್ವಾವಲಂಬಿ'ಗಳಾಗುತ್ತಾರಂತೆ ಮತ್ತು ಉದ್ಯೋಗ ಲಭಿಸದಿದ್ದರೆ ಅವರು 'ಸ್ವಯಂ ಉದ್ಯೋಗ'ದ ಮೂಲಕ ಬದುಕನ್ನು ರೂಪಿಸಿಕೊಳ್ಳುತ್ತಾರಂತೆ. ಅಂದರೆ, ಆಗ ಸರ್ಕಾರವು ಉದ್ಯೋಗ ಒದಗಿಸುವ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಸುಲಭವಾಗುತ್ತದೆ. ಭಾರತದಲ್ಲಿ ಉದ್ಯೋಗದ ಸನ್ನಿವೇಶವು ತೀವ್ರ ಬಿಕ್ಕಟ್ಟಿನಲ್ಲಿದೆ, ನಿಜ. ಅದು ಕೇವಲ ಕೌಶಲ್ಯಗಳ ಕೊರತೆಯಿಂದಲ್ಲ. ಅಸ್ತಿತ್ವದಲ್ಲಿರುವ ಬಂಡವಾಳಶಾಹಿ ವ್ಯವಸ್ಥೆಯ ತೀವ್ರ ಶೋಷಣೆಯಿಂದಾಗಿ, ಜನಸಾಮಾನ್ಯರ ಖರೀದಿಸುವ ಶಕ್ತಿಯು ಕುಸಿಯುತ್ತಿದೆ, ಇದರಿಂದಾಗಿ ಸರಕುಗಳ ಬೇಡಿಕೆ ಕುಸಿದಿದೆ ಮತ್ತು ಮಾರುಕಟ್ಟೆ ಸಂಕುಚಿತಗೊಂಡಿದೆ. ತತ್ಪರಿಣಾಮವಾಗಿ ಉತ್ಪಾದನೆ ಕಡಿಮೆಯಾಗುತ್ತಿದೆ, ಕೈಗಾರಿಕೆಗಳು ಒಂದರ ನಂತರ ಒಂದರಂತೆ ಮುಚ್ಚುತ್ತಿವೆ, ಕೋಟ್ಯಾಂತರ ಜನರು ಉದ್ಯೋಗ ಕಳೆದುಕೊಳ್ಳುತ್ತಿದ್ದಾರೆ. ಜೊತೆಯಲ್ಲಿ, ಉತ್ಪಾದನಾ ವೆಚ್ಚವನ್ನು ಇನ್ನಷ್ಟು ಕುಗ್ಗಿಸಲು, ಶ್ರಮಶಕ್ತಿಯನ್ನು ಕಡಿಮೆ ಬಳಸುವ ಆಧುನಿಕ ತಾಂತ್ರಿಕತೆಯ ಬಳಕೆಯ ಮೂಲಕ ಬಂಡವಾಳ-ಪ್ರಧಾನ ಕೈಗಾರಿಕೆಗಳು ಮಾತ್ರ ಹೆಚ್ಚುಹೆಚ್ಚಾಗಿ ಇಂದು ಕಾರ್ಯನಿರ್ವಹಿಸುತ್ತಿವೆ. ಹಾಗಾಗಿಯೇ, ಯಾಂತ್ರೀಕರಣ (Automation) ಮತ್ತು ಕೃತಕ ಬುದ್ಧಿಮತ್ತೆಯ (AI) ಪ್ರಭಾವದಿಂದಾಗಿ ನಿರುದ್ಯೋಗದ ಸಮಸ್ಯೆ ಮತ್ತಷ್ಟು ಉಲ್ಬಣಗೊಂಡಿದೆ. ಇದರ ಜೊತೆಯಲ್ಲಿಯೇ, ಕೇಂದ್ರದಿಂದ ರಾಜ್ಯದವರೆಗೆ ಪ್ರತಿಯೊಂದು ಸರ್ಕಾರವೂ ನೇಮಕಾತಿಯ ಮೇಲೆ ಅಘೋಷಿತ ನಿಷೇಧ ಹೇರಿದೆ ಮತ್ತು ಕಾರ್ಮಿಕರನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳುವ ಪದ್ಧತಿ ಇದೆ. ಇನ್ನು ಸರ್ಕಾರಿ ವಲಯಗಳಲ್ಲಿ ಲಕ್ಷಾಂತರ ಹುದ್ದೆಗಳು ಖಾಲಿ ಇರುವುದು ಕೌಶಲ್ಯವಿರದವರ ಕಾರಣಕ್ಕಾಗಿಯೇ?

ಹಿಂದೊಮ್ಮೆ ಅಮೇರಿಕದ ಶೈಕ್ಷಣಿಕ ಪಠ್ಯಕ್ರಮವನ್ನು ಗಮನಿಸಿ, ಪ್ರಖ್ಯಾತ ವಿಜ್ಞಾನಿ ಐನ್‌ಸ್ಟೈನ್, "ಒಬ್ಬ ವ್ಯಕ್ತಿಗೆ ಕೇವಲ ಒಂದು ವಿಶೇಷ ಕೌಶಲ್ಯವನ್ನು (speciality) ಕಲಿಸಿದರೆ ಸಾಲದು. ಅದರ ಮೂಲಕ ಅವನು ಒಂದು ರೀತಿಯ ಉಪಯುಕ್ತ ಯಂತ್ರವಾಗಬಹುದೇ ಹೊರತು, ಸಮತೋಲಿತ ವ್ಯಕ್ತಿತ್ವದ ಮನುಷ್ಯನಾಗಲಾರ. ವಿದ್ಯಾರ್ಥಿಯು ಮೌಲ್ಯಗಳ ಬಗ್ಗೆ ತಿಳುವಳಿಕೆ ಮತ್ತು ಸಜೀವ ಭಾವನೆಯನ್ನು ಪಡೆದುಕೊಳ್ಳುವುದು ಅತ್ಯಗತ್ಯ. ಅವನು ಸೌಂದರ್ಯ ಮತ್ತು ಒಳ್ಳೆಯ ಮೌಲ್ಯಗಳ ಕುರಿತು ಪ್ರಜ್ಞೆಯನ್ನು ಹೊಂದಿರಬೇಕು. ಇಲ್ಲದಿದ್ದರೆ, ಅವನು ತನ್ನ ವಿಶಿಷ್ಟ ಜ್ಞಾನದೊಂದಿಗೆ ಒಬ್ಬ ಸಮತೋಲಿತ ವ್ಯಕ್ತಿಗಿಂತ ಹೆಚ್ಚಾಗಿ ತರಬೇತಿ ಪಡೆದ ನಾಯಿಯಂತೆ ಆಗುತ್ತಾನೆ." (Ideas and Opinions 1954). ರವೀಂದ್ರನಾಥ ಟ್ಯಾಗೋರ್ ಅವರು ಶಿಕ್ಷಣದ ಉದ್ದೇಶವು 'ಪರಿಪೂರ್ಣ ಮಾನವ'ನನ್ನು (whole man) ಸೃಷ್ಟಿಸುವುದಾಗಿದೆ ಎಂದು ನಂಬಿದ್ದರು.

ವೃತ್ತಿಶಿಕ್ಷಣವು ಕೆಲಸದ ತಾಂತ್ರಿಕ ಅಂಶಗಳನ್ನು ಮಾತ್ರ ಕಲಿಸುತ್ತದೆ. ಅದರಿಂದ, ವಿದ್ಯಾರ್ಥಿಯು ತಾರ್ಕಿಕ ಚಿಂತನಾ ಶಕ್ತಿಯನ್ನು ಗಳಿಸುವ ಬದಲು, ವೈಜ್ಞಾನಿಕ ಮನೋಭಾವವಿರದ ಕೇವಲ ಯಾಂತ್ರಿಕ ಮನಸ್ಥಿತಿಯನ್ನು ಗಳಿಸಲು ಸಾಧ್ಯ. ಶಾಲಾ ಬದುಕಿನ ಆರಂಭದಿಂದಲೇ ವಿದ್ಯಾರ್ಥಿಗಳು ಜೀವನ ಮತ್ತು ಪ್ರಕೃತಿಯ ಪ್ರತಿಯೊಂದು ಆಯಾಮವನ್ನು ಒಳಗೊಂಡ ಸಮಗ್ರ ಮೂಲಭೂತ ಶಿಕ್ಷಣದಿಂದ ದೂರವಾಗುವುದರಿಂದ, ಒಬ್ಬ ವ್ಯಕ್ತಿಯು ನಿರ್ದಿಷ್ಟ ಕೆಲಸಕ್ಕೆ ಸೀಮಿತವಾದ ಪರಿಣತಿ ಪಡೆದ ರೋಬೋಟ್ ಆಗುತ್ತಾನೆ. ಇಂತಹ ರೋಬೋಟ್‌ನಂತಹ ಮನಸ್ಥಿತಿಯು ಯಾವುದೇ ಅನ್ಯಾಯ ಅಥವಾ ಅಸತ್ಯದ ವಿರುದ್ಧ ಎಂದಿಗೂ ದನಿ ಎತ್ತುವುದಿಲ್ಲ, ಬದಲಾಗಿ ಕೇವಲ ಜೀವನೋಪಾಯಕ್ಕಾಗಿ ಮೇಲಿನವರ ಆದೇಶಗಳನ್ನು ಕುರುಡಾಗಿ ಪಾಲಿಸುವ ಗುಲಾಮಿ ಮನಸ್ಥಿತಿಯನ್ನು ಹೊಂದುತ್ತದೆ.

### ಶಿಕ್ಷಣದ ವೃತ್ತಿಪರೀಕರಣವನ್ನು ವಿರೋಧಿಸಬೇಕು

ಕಾರ್ಪೊರೇಟ್ ಏಕಸ್ವಾಮ್ಯ ಉದ್ಯಮಗಳ ಒತ್ತಡದಿಂದಾಗಿ ಗುಡಿ ಕೈಗಾರಿಕೆ, ಅತಿಸಣ್ಣ ಮತ್ತು ಸಣ್ಣ ಕೈಗಾರಿಕೆಗಳು ಇಂದು ಸಾಲುಸಾಲಾಗಿ ಮುಚ್ಚುತ್ತಿವೆ. ಇಂತಹ ಪರಿಸ್ಥಿತಿಯಲ್ಲಿ ವೃತ್ತಿಶಿಕ್ಷಣ ಪಡೆದು ಹೊರಬರುವ ಬಡಗಿಗಳು, ಎಲೆಕ್ಟ್ರೀಷಿಯನ್‌ಗಳು, ಲೋಹದ ಕೆಲಸಗಾರರು ಮುಂತಾದವರ ಭವಿಷ್ಯವೇನು? ಈ 'ವೃತ್ತಿಪರ ಶಿಕ್ಷಣ' ಪಡೆದವರು ಅಂತಿಮವಾಗಿ ತಾವು ಪಡೆದ ಕೌಶಲ್ಯವನ್ನು ಅಗ್ಗದ ದರಕ್ಕೆ ಮಾರಿ ಕಡಿಮೆ ಕೂಲಿಗೆ ಕಾರ್ಮಿಕರಾಗಿ ತಮ್ಮನ್ನೇ ಮಾರಾಟ ಮಾಡಿಕೊಳ್ಳಬೇಕಾಗುತ್ತದೆ.

ವೃತ್ತಿಶಿಕ್ಷಣದ ಅಗತ್ಯವನ್ನು ಸಂಪೂರ್ಣವಾಗಿ ತಿರಸ್ಕರಿಸಲಾಗುವುದಿಲ್ಲ. ಸ್ವಾತಂತ್ರ್ಯಾನಂತರ ದೇಶದಲ್ಲಿ ನಡೆದ ಕೈಗಾರಿಕೀಕರಣಕ್ಕೆ ಪೂರಕವಾಗಿ ಪಾಲಿಟೆಕ್ನಿಕ್ ಡಿಪ್ಲೊಮಾ ಕೋರ್ಸ್‌ಗಳು, ITI, CTI ಮತ್ತು ಇತರ ವೃತ್ತಿಪರ ಕೋರ್ಸ್‌ಗಳನ್ನು ಒಂದು ನಿರ್ದಿಷ್ಟ ಮಟ್ಟದ ಶಾಲಾ ಶಿಕ್ಷಣದ ನಂತರ (ಉದಾಹರಣೆಗೆ ಪ್ರೌಢಶಾಲೆಯ ನಂತರ) ಪಡೆಯಲು ಅವಕಾಶವಿತ್ತು. ಆದರೆ, ಇಂದು ಕೈಗಾರಿಕಾ ಸನ್ನಿವೇಶವು ಅತ್ಯಂತ ಕಠಿಣವಾಗಿದೆ. ಈ ಸಮಯದಲ್ಲಿ ವೃತ್ತಿಶಿಕ್ಷಣದ ಮೇಲೆ ಅತಿಯಾದ ಒತ್ತು ನೀಡುತ್ತಿರುವುದೇಕೆಂದರೆ, ವೃತ್ತಿಶಿಕ್ಷಣವು ತನ್ನಿಂದ ತಾನೇ ಉದ್ಯೋಗವನ್ನು ಸೃಷ್ಟಿಸುವುದಿಲ್ಲ ಎಂಬ ಕಟುಸತ್ಯವನ್ನು ಮರೆಮಾಚುವುದಕ್ಕಾಗಿದೆ. ವೃತ್ತಿಶಿಕ್ಷಣವು ಶಾಲಾ ಶಿಕ್ಷಣದ ನಂತರ, ನುರಿತ ಕೆಲಸಗಾರರನ್ನು ಕೆಲಸಕ್ಕೆ ನಿಯೋಜಿಸಲು ಸೂಕ್ತ ಅವಕಾಶಗಳು ಇರುವಂತೆ ಬೆಳೆಯಬೇಕು. ಇಲ್ಲದಿದ್ದರೆ, ಅದು ವೃತ್ತಿಶಿಕ್ಷಣದ ಹೆಸರಿನಲ್ಲಿ ಸಮುದಾಯದ ವಂಚನೆಯಾಗುತ್ತದೆ. ಶಾಲಾ ಶಿಕ್ಷಣವನ್ನು ನಾಶಪಡಿಸುವ ಈ ಕರಾಳ ವೃತ್ತಿಶಿಕ್ಷಣ ಯೋಜನೆಯನ್ನು ಪ್ರತಿಯೊಬ್ಬ ಪ್ರಜ್ಞಾವಂತ ವ್ಯಕ್ತಿಯೂ ವಿರೋಧಿಸಬೇಕು ಮತ್ತು ಇದರ ವಿರುದ್ಧ ಧ್ವನಿ ಎತ್ತಬೇಕು.

---

### ಎಐಡಿಎಸ್‌ಓ ಸಂಘಟಿತ ಜಿಲ್ಲಾ ಅಧ್ಯಯನ ಶಿಬಿರಗಳು

## ಸಂಘಟನೆ-ವೈಚಾರಿಕತೆ ಗಟ್ಟಿಗೊಳಿಸುವ ನಿಟ್ಟಿನಲ್ಲಿ.....




'ಶಿಕ್ಷಣ-ಸಂಸ್ಕೃತಿ-ಮಾನವತೆ' ಉಳಿಸಿ ಘೋಷವಾಕ್ಯದೊಂದಿಗೆ ಸಂಘಟನಾಕಾರರನ್ನು ವೈಚಾರಿಕವಾಗಿ ಮತ್ತು ಸಂಘಟನಾತ್ಮಕವಾಗಿ ಸಜ್ಜುಗೊಳಿಸಲು ರಾಜ್ಯದ ಹಲವು ಜಿಲ್ಲೆಗಳಲ್ಲಿ ಎಐಡಿಎಸ್‌ಓ, ತನ್ನ ಕಾರ್ಯಕರ್ತರಿಗಾಗಿ ಜಿಲ್ಲಾ ಮಟ್ಟದ ಅಧ್ಯಯನ ಶಿಬಿರಗಳನ್ನು ಸಂಘಟಿಸಿತ್ತು. ಬೆಂಗಳೂರಿನಲ್ಲಿ ಮುಖ್ಯ ಭಾಷಣಕಾರರಾಗಿ ಎಐಡಿಎಸ್‌ಓ ರಾಜ್ಯ ಕಾರ್ಯದರ್ಶಿ ಕಾ. ಅಜಯ್ ಕಾಮತ್, ಮೈಸೂರಿನಲ್ಲಿ ರಾಜ್ಯ ಖಜಾಂಚಿಗಳಾದ ಕಾ. ಸುಭಾಷ್, ಬಳ್ಳಾರಿಯಲ್ಲಿ ರಾಜ್ಯ ಕಚೇರಿ ಕಾರ್ಯದರ್ಶಿಗಳಾದ ಕಾ. ಮಹಾಂತೇಶ್ ಬಿಳೂರ್ ಹಾಗೂ ತುಮಕೂರಿನಲ್ಲಿ ರಾಜ್ಯ ಉಪಾಧ್ಯಕ್ಷರಲ್ಲೊಬ್ಬರಾದ ಕಾ. ಅಪೂರ್ವ ಸಿ. ಎಂ. ಮಾತನಾಡಿದರು.






# ಪಶ್ಚಿಮ ಬಂಗಾಳ : ಮಹಿಳೆಯ ಘನತೆ ಮತ್ತು ಗೌರವದ ರಕ್ಷಣೆಗಾಗಿ 'ಪ್ರತಿಜ್ಞಾ ರ್‍ಯಾಲಿ'

## ಮಹಿಳಾ ಸಮುದಾಯದ ಹಲವು ಗಣ್ಯರಿಂದ ಮನವಿ

*[ಡಿಸೆಂಬರ್ 9 (ರೋಕಿಯಾ ಸಖಾವತ್ ಹೊಸೇನ್‌ರ ಜನನ ಮತ್ತು ಮರಣ ವಾರ್ಷಿಕೋತ್ಸವ) ರಿಂದ ಡಿಸೆಂಬರ್ 16 ('ನಿರ್ಭಯ' ದಿನ) ರವರೆಗೆ ಪ್ರತಿಜ್ಞಾ ಸಪ್ತಾಹ]*

ಪಶ್ಚಿಮ ಬಂಗಾಳದ 12 ಗಣ್ಯ ಮಹಿಳೆಯರು ರಾಜ್ಯದ ಜನತೆಗೆ ಭಾವನಾತ್ಮಕ ಮನವಿಯನ್ನು ನೀಡಿದ್ದರು. ಅವರು ಮೈತ್ರೇಯೀ ಬರ್ದಾನ್ ರಾಯ್ (ಪ್ರಾಂಶುಪಾಲರು), ಶತರೂಪ ಸನ್ಯಾಲ್(ಸಿನಿಮಾ ತಯಾರಕರು), ಪ್ರೊ. ಡಾ:ನೂಪುರ್ ಬ್ಯಾನರ್ಜಿ, ಪ್ರೊ. ಸೀಮಾ ಚಕ್ರವರ್ತಿ(ಪ್ರಾಂಶುಪಾಲರು), ಪ್ರೊ. ಶಾಶ್ವತಿ ಘೋಷ್, ಅನಿತಾ ರಾಯ್(ಕ್ರೀಡಾಪಟು), ಕುಂತಲ ಘೋಷ್ ದಸ್ತಿದಾರ್(ಕ್ರೀಡಾಪಟು), ಕಲ್ಪನಾ ದತ್ತಾ(ಸಾಮಾಜಿಕ ಕಾರ್ಯಕರ್ತೆ), ದೇವಯಾನಿ ಸೇನ್‌ಗುಪ್ತ (ವಕೀಲರು), ಪ್ರೊ. ಶಾನ್‌ವಾಜ್ ನಬಿ, ಸಿಸ್ಟರ್ ಭಾರತಿ ಮುಖರ್ಜಿ, ಡಾ: ನಸರೀನ್ ಅಲಿ. ಅವರು ನೀಡಿದ ಕರೆಯ ಪೂರ್ಣ ಪಾಠ ಇಲ್ಲಿದೆ :

**ಆತ್ಮೀಯರೇ,**

ಎಲ್ಲೆಡೆ ವ್ಯಾಪಿಸಿರುವ ಕತ್ತಲೆ ನಮ್ಮನ್ನೂ ಆವರಿಸಿದೆ. ಮಾನವೀಯತೆ ಗಂಭೀರ ಅಪಾಯದಲ್ಲಿದೆ. ಮಹಿಳೆಯರ ವಿರುದ್ಧ ಹೆಚ್ಚುತ್ತಿರುವ ದೌರ್ಜನ್ಯಗಳು ಮತ್ತು ಮಾನವೀಯತೆಯ ಮೇಲಿನ ಅಗೌರವಗಳು ಸಾಮಾಜಿಕ ಜೀವನದ ಸಂರಚನೆಯನ್ನೇ ಕಿತ್ತು ಹಾಕುತ್ತಿವೆ.

ಸಾವಿರಾರು ವರ್ಷಗಳ ಶ್ರಮದಾಯಕ ಹೋರಾಟದ ಗತಿಯಲ್ಲಿ ಧಾರ್ಮಿಕ ಅಂಧಶ್ರದ್ಧೆ, ಮೂಢನಂಬಿಕೆ, ಧರ್ಮಾಂಧತೆ, ಅನ್ಯಾಯ ಮತ್ತು ದಬ್ಬಾಳಿಕೆಗಳ ವಿರುದ್ಧ ನವೋದಯವು ಜೀವನದ ಹೊಸ ಚಿಂತನೆಯನ್ನು ಜಾಗೃತಗೊಳಿಸಿತು, ಹೊಸ ಯುಗದ ಉದಯವನ್ನು ಘೋಷಿಸಿತು. ಸಮಾನತೆ–ಸೋದರತೆ–ಸ್ವಾತಂತ್ರ್ಯದ ಘೋಷಣೆಯು ಊಳಿಗಮಾನ್ಯ ಸಂಪ್ರದಾಯದ ಹಿಡಿತದಿಂದ ಮಹಿಳೆಯರ ವಿಮೋಚನೆಗೆ ದಾರಿದೀಪವಾಯಿತು. ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ, ಪ್ರಗತಿಯತ್ತ ಪ್ರತಿ ಹೆಜ್ಜೆಯಲ್ಲೂ, ಮಹಿಳೆಯರ ಪಾತ್ರವು ಹೆಚ್ಚು ಹೆಚ್ಚು ಜನಜನಿತವಾಯಿತು ಮತ್ತು ಮೆಚ್ಚುಗೆ ಪಡೆಯಿತು.

**ಕ್ರಾಂತಿಕಾರಿ ಕವಿ ನಜ್ರುಲ್ ಇಸ್ಲಾಂ ಅವರ ಪದ್ಯವನ್ನು ಸ್ಮರಿಸುವುದಾದರೆ–**

**"ಜಗತ್ತಿನಲ್ಲಿ ಶ್ರೇಷ್ಠವಾದ ಎಲ್ಲದರ,
ಉಪಯುಕ್ತ ಮತ್ತು ಒಳ್ಳೆಯದು, ಎಲ್ಲಾ ಸೃಷ್ಟಿಗಳ,
ಅರ್ಧದಷ್ಟು ಮಹತ್ವವನ್ನು ಮಹಿಳೆಗೆ ಸಲ್ಲಿಸಬೇಕು,
ಪುರುಷನಿಗೆ ಅರ್ಧವನ್ನು ಮಾತ್ರ ಸಲ್ಲಿಕೆ ಮಾಡಬೇಕು."**

ಆದರೆ ಅಂತಹ ರಾಜಿರಹಿತವಾದ ಮಾನವತಾವಾದಿ ಚಿಂತನೆಗಳ ಆಳವಾದ ಕೃಷಿಯನ್ನು ನಮ್ಮ ದೇಶದಲ್ಲಿ ಮನ:ಪೂರ್ವಕವಾಗಿ ಮಾಡಲಾಗಿಲ್ಲ. ಮತ್ತು ಆ ಕಾಲದ ಅಗತ್ಯಕ್ಕೆ ಅನುಗುಣವಾಗಿರುವ ಉನ್ನತ ಸಿದ್ಧಾಂತವೂ ಜನರನ್ನು ಎಚ್ಚರಗೊಳಿಸಲಿಲ್ಲ ಸಹ. ಒಟ್ಟಾರೆಯಾಗಿ ಒಮ್ಮೆ ಜನರಲ್ಲಿ ಹೊಸ ಭರವಸೆಯ ಕಿರಣ ಬೆಳಗಿದ ಆಕಾಶವು ಈಗ ಬಿಕ್ಕಟ್ಟಿನ ಮೋಡಗಳಿಂದ ಮಬ್ಬಾಗಿದೆ. ಇಂದು ಪರಿಸ್ಥಿತಿ ಭಯಾನಕವಾಗಿದೆ. ಪುಟ್ಟ ಹೆಣ್ಣು ಮಗುವಿನಿಂದ ಹಿಡಿದು ವಯಸ್ಸಾದ ಮಹಿಳೆಯವರೆಗೆ ಅತ್ಯಾಚಾರಕ್ಕೊಳಗಾದ ಮಹಿಳೆಯರ ಆಕ್ರಂದನದಿಂದ ಆಕಾಶವು ಬೊಬ್ಬಿಡುತ್ತಿದೆ. ದೆಹಲಿ, ಹತ್ರಾಸ್, ಉನ್ನಾವೋ, ಬಂಟಲಾ, ಧಂತಲಾ, ಕಾಮ್ದುನಿ, ಕಥುವಾ, ಖಾಂಡ್ವಾ, ಬೆಂಗಳೂರು, ಪಾರ್ಕ್ ರಸ್ತೆ, ಆರ್ ಜಿ ಕರ್ ಆಸ್ಪತ್ರೆ, ಕಸ್ಬಾ ಕಾನೂನು ಕಾಲೇಜು – ಪಟ್ಟಿಗೆ ಅಂತ್ಯವಿಲ್ಲ, ಹೀಗೆ ಪ್ರತಿದಿನ, ಮಹಿಳೆಯರ ಮೇಲಿನ ಹಲವಾರು ಅಪರಾಧದ ಘಟನೆಗಳು ಇಡೀ ಸಮಾಜವನ್ನು ಕಲಕುತ್ತಿವೆ. ಮನೆ, ಶೈಕ್ಷಣಿಕ ಸಂಸ್ಥೆ, ಆಸ್ಪತ್ರೆ, ಕೆಲಸದ ಸ್ಥಳ, ಹೊಲ, ಮತ್ತು ರಸ್ತೆಗಳಲ್ಲಿ ಯಾವುದೇ ಸಮಯ–ಸ್ಥಳವನ್ನು ಲೆಕ್ಕಿಸದೆ ಅವ್ಯಾಹತವಾಗಿ ನಡೆಯುತ್ತಿರುವ ದೌರ್ಜನ್ಯಗಳು ಮಹಿಳೆಯರಲ್ಲಿ ಭಯದ ಮನೋಸ್ಥಿತಿ ಉಂಟುಮಾಡುತ್ತಿವೆ.

ಸುಚಿಂತಕರು ನ್ಯಾಯಕ್ಕಾಗಿ ತಮ್ಮ ಪ್ರತಿಭಟನೆಯ ಧ್ವನಿಯನ್ನು ಎತ್ತುತ್ತಿರುವಾಗ, ಸರ್ಕಾರದ ಪ್ರತಿಕ್ರಿಯೆಯು ಸಂಪೂರ್ಣವಾಗಿ ತಿರಸ್ಕಾರದಿಂದ ಕೂಡಿದೆ. ಆಡಳಿತ ವ್ಯವಸ್ಥೆಯು ಅಪರಾಧಿಗಳನ್ನು ರಕ್ಷಿಸಲು ಮಾತ್ರ ಕಾರ್ಯನಿರತವಾಗಿದೆ. ವಾಸ್ತವದಲ್ಲಿ, ಇಂತಹ ವಿಕೃತ ಪ್ರವೃತ್ತಿಗಳು ಸಮಾಜವನ್ನು, ವಿಶೇಷವಾಗಿ ಯುವಕರನ್ನು ಆವರಿಸಬೇಕೆಂದು ಆಳ್ವಿಕರು ಬಯಸುತ್ತಾರೆ. ಏಕೆಂದರೆ ಯುವಕರಲ್ಲಿ ಮಾನವೀಯತೆಯನ್ನು ಕಸಿದುಕೊಂಡು, ಅವರನ್ನು ಮೂಕರನ್ನಾಗಿ ಮಾಡಲು ಮತ್ತು ತಮ್ಮ ಆಜ್ಞೆಗಳಿಗೆ ಅಧೀನಗೊಳಿಸಲು ಹಾಗೂ ಸಮಾಜವನ್ನು ಮರಗಟ್ಟಿಸಲು ಅವರು ಬಯಸುತ್ತಾರೆ. ಆದರೆ ಅವರ ಎಲ್ಲಾ ಪ್ರಯತ್ನಗಳ ಹೊರತಾಗಿಯೂ ಸಹ, ಪ್ರತಿಭಟನೆ ಕಡಿಮೆಯಾಗುವುದಿಲ್ಲ, ಅದರ ಪ್ರಭಾವ ಸ್ವಲ್ಪ ಕಾಲದವರೆಗಾದರೂ ಇದ್ದೇ ಇರುತ್ತದೆ.




ಡಿ.16 ರಂದು ಕೊಲ್ಕತ್ತಾದಲ್ಲಿ ನಡೆದ ಬೃಹತ್ ಮೆರವಣಿಗೆಯಲ್ಲಿ ಹೆಜ್ಜೆ ಹಾಕಿದ ಗಣ್ಯರು ಹಾಗೂ ಜನಸ್ತೋಮ

**ಆದ್ದರಿಂದ ಕವಿಯೊಬ್ಬರು ಬರೆಯುತ್ತಾರೆ –**

**"ಕಾಣೆಯಾದ ಹುಡುಗಿಯೊಬ್ಬಳು ಕಾಡಿನಲ್ಲಿ ಪತ್ತೆಯಾಗಿದ್ದಾಳೆ,
ಸಂಪೂರ್ಣವಾಗಿ ಛಿದ್ರಗೊಂಡು ಜಜ್ಜಿಹೋಗಿದ್ದಾಳೆ,
ನಾನು ನ್ಯಾಯವನ್ನು ಅರಸುತ್ತಾ ಸ್ವರ್ಗದ ಬಾಗಿಲನ್ನು ದಿಟ್ಟಿಸಲೇ?
ಇಲ್ಲ, ನನಗೆ ಸಾಧ್ಯವಿಲ್ಲ."**

ದೆಹಲಿಯ ಪ್ಯಾರಾಮೆಡಿಕಲ್ ವಿದ್ಯಾರ್ಥಿನಿ 'ನಿರ್ಭಯಾ' ಮೇಲಿನ ಅತ್ಯಾಚಾರ ಪ್ರಕರಣದಿಂದ ಹಿಡಿದು ಆರ್‌ಜಿ ಕರ್ ಕಾಲೇಜಿನ ಯುವ ವೈದ್ಯೆ 'ಅಭಯಾ' ದವರೆಗೆ, ದಶಕಗಳಿಂದ ಇಡೀ ದೇಶವು ಆಕ್ರೋಶದಿಂದ ಕುದಿಯುತ್ತಿದೆ. ಅದೀಗ ಭುಗಿಲೆದ್ದಿದೆ.

ಇಂತಹ ಮೃಗೀಯತೆಯ ವಿರುದ್ಧದ ಹೋರಾಟ, ಅದರಲ್ಲೂ ವಿಶೇಷವಾಗಿ ಮಹಿಳೆಯರ ಪ್ರತಿಭಟನೆ ಭುಗಿಲೆದ್ದಿದೆ. ಈ ಚಳುವಳಿಯು ಮಾನವೀಯತೆಯನ್ನು ರಕ್ಷಿಸುವ ಹೋರಾಟವಾಗಿದೆ – ಲಿಂಗಭೇದವನ್ನು ಲೆಕ್ಕಿಸದೆ ನಾವೆಲ್ಲರೂ ಈ ಹೋರಾಟದಲ್ಲಿ ಒಗ್ಗೂಡಿ ಬಲವಾಗಿ ನಿಲ್ಲುವ ಸಮಯ ಇದು. ಪ್ರತಿರೋಧದ ಜ್ವಾಲೆಯು ನಮ್ಮ ಸಮಾಜದ ಉದ್ದಗಲಕ್ಕೂ ಹರಡಬೇಕು. ಈ ಉದ್ದೇಶಕ್ಕಾಗಿ, 'ಪ್ರತಿಜ್ಞಾ ರ್‍ಯಾಲಿ'ಯು ಡಿಸೆಂಬರ್ 9 ರಿಂದ ಡಿಸೆಂಬರ್ 16 ರವರೆಗೆ, ಪಶ್ಚಿಮ ಬಂಗಾಳ ರಾಜ್ಯದ ಎಲ್ಲಾ ಜಿಲ್ಲೆ, ಹಳ್ಳಿಗಳು, ಪಟ್ಟಣಗಳು, ನಗರಗಳು, ಬಂದರುಗಳು ಮತ್ತು ಹೆದ್ದಾರಿಗಳಲ್ಲಿ ಸಂಚರಿಸುತ್ತದೆ. ಈ ರ್‍ಯಾಲಿಯು ಕೊಲ್ಕತ್ತಾದ ಐತಿಹಾಸಿಕ ಕಾಲೇಜು ಚೌಕದಲ್ಲಿರುವ ಭಾರತೀಯ ನವೋದಯದ ನೇತಾರ ಮತ್ತು ಮಹಿಳಾ ಹೋರಾಟಗಾರರಾದ ಈಶ್ವರಚಂದ್ರ ವಿದ್ಯಾಸಾಗರ್ ಅವರ ಪ್ರತಿಮೆಯ ಬಳಿ ಕೊನೆಗೊಳ್ಳುತ್ತದೆ. ಈ ಸಪ್ತಾಹದ 'ಪ್ರತಿಜ್ಞಾ ರ್‍ಯಾಲಿ'ಯು ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯ ಮತ್ತು ದಬ್ಬಾಳಿಕೆಯ ವಿರುದ್ಧ ಹೋರಾಡಲು ದೃಢಸಂಕಲ್ಪ ಮಾಡಲಿದೆ. ಬೆಟ್ಟಗಳಿಂದ ಕರಾವಳಿಯವರೆಗೆ, ಸುಂದರ್‌ಬನ್ ಕಾಂಡ್ಲಾವನಗಳಿಂದ ಇತರೇ ಕಾಡಿನವರೆಗೆ, ರಾಜ್ಯದ ಲಕ್ಷಾಂತರ ಮಹಿಳೆಯರ ಸಾಮೂಹಿಕ ಭಾಗವಹಿಸುವಿಕೆಯೊಂದಿಗೆ, ಈ ಮೆರವಣಿಗೆಯು ಮಹಿಳೆಯರ ಮೇಲಿನ ಅಪರಾಧದ ವಿರುದ್ಧ ಪ್ರತಿರೋಧದ ಹೊಸ ಅಲೆಯನ್ನು ಸೃಷ್ಟಿಸುತ್ತದೆ. ಈ 'ಪ್ರತಿಜ್ಞಾ ರ್‍ಯಾಲಿ'ಯಲ್ಲಿ ಭಾಗವಹಿಸಲು ಮತ್ತು ಎಲ್ಲಾ ರೀತಿಯ ನೆರವು ಮತ್ತು ಬೆಂಬಲವನ್ನು ನೀಡಲು ನಾವು ನಿಮ್ಮನ್ನು ಕೋರುತ್ತೇವೆ.

---

## "ರೈಲು ಪ್ರಯಾಣ ದರವನ್ನು ಇಳಿಸಿ" - ಎಸ್‌ಯುಸಿಐ(ಸಿ) ಆಗ್ರಹ

**ಎಸ್‌ಯುಸಿಐ(ಸಿ) ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಕಾಮ್ರೇಡ್ ಪ್ರವಾಷ್ ಘೋಷ್‌ರವರು ಡಿ.22ರಂದು ಈ ಕೆಳಗಿನ ಹೇಳಿಕೆಯನ್ನು ಬಿಡುಗಡೆ ಮಾಡಿದರು:**

"ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು 2025ರಲ್ಲಿ ಎರಡನೇ ಬಾರಿಗೆ, ಸಿಬ್ಬಂದಿ ವೆಚ್ಚದ ಆರ್ಥಿಕ ಹೊರೆಯನ್ನು ಪೂರೈಸುವ ಕುಂಟು ನೆಪವೊಡ್ಡಿ, ಡಿಸೆಂಬರ್ 26ರಿಂದ ಜಾರಿಗೆ ಬರುವಂತೆ ಸಾಮಾನ್ಯ ವರ್ಗದಿಂದ ಎಸಿ ವರ್ಗದವರೆಗೆ ಎಲ್ಲಾ ಶ್ರೇಣಿಗಳ ರೈಲು ಪ್ರಯಾಣ ದರವನ್ನು ಏಕಪಕ್ಷೀಯವಾಗಿ ಮತ್ತು ಅನಿಯಂತ್ರಿತವಾಗಿ ಹೆಚ್ಚಿಸಿದೆ. ಒಂದೆಡೆ ಕಾಲಕಾಲಕ್ಕೆ ಇಂತಹ ದರ ಏರಿಕೆಯು ಒಂದು ಸಂಪ್ರದಾಯವಾಗಿದೆಯಾದರೆ, ಇನ್ನೊಂದೆಡೆ ರೈಲು ಪ್ರಯಾಣವು ಪ್ರಯಾಣಿಕರಿಗೆ ಇಂದಿಗೂ ಒಂದು ದುಸ್ವಪ್ನವಾಗಿಯೇ ಮುಂದುವರೆದಿದೆ.

ರೈಲು ಅಪಘಾತಗಳು ಹೆಚ್ಚುತ್ತಿವೆ, ಸಮಯಪಾಲನೆಯು ಗತಕಾಲದ ನೆನಪಾಗಿದೆ, ರೈಲು ಬೋಗಿಗಳ ನಿರ್ವಹಣೆಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ, ಶೌಚಾಲಯದ ನೈರ್ಮಲ್ಯವು ಹದಗೆಟ್ಟಿದೆ, ಪ್ಲಾಟ್‌ಫಾರ್ಮ್‌ಗಳು ಕೊಳಕಾಗಿವೆ, ಪ್ರಯಾಣಿಕರ ವಿಶ್ರಾಂತಿ ಕೊಠಡಿಗಳು ಶಿಥಿಲಾವಸ್ಥೆಯಲ್ಲಿವೆ, ಆಹಾರ ದುಬಾರಿಯಾಗಿದ್ದರೂ ಗುಣಮಟ್ಟವು ಅತ್ಯಂತ ಕಳಪೆಯಾಗಿದೆ, ಭ್ರಷ್ಟಾಚಾರವು ತಾಂಡವವಾಡುತ್ತಿದೆ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಪ್ರಯಾಣಿಕರ ಸುರಕ್ಷತೆಯು ಅಪಾಯದಲ್ಲಿದೆ. ಪ್ರಯಾಣಿಕರ ಅಗತ್ಯತೆಗಳ ಈ ಪ್ರಮುಖ ಸಮಸ್ಯೆಗಳನ್ನು ಪರಿಹರಿಸುವ ಬದಲು, ಪದೇ ಪದೇ ದರ ಏರಿಕೆ ಮಾಡುವ ಮೂಲಕ ಪ್ರಯಾಣಿಕರನ್ನು ಹಿಂಡಿ ಹಿಪ್ಪೆ ಮಾಡುವುದು ಮತ್ತು ಆದಾಯವನ್ನು ಹೆಚ್ಚಿಸಿಕೊಳ್ಳುವುದು ಮಾತ್ರ ಸರ್ಕಾರದ ಕಾಳಜಿಯಾಗಿದೆ. ಈ ಪ್ರಸ್ತಾವಿತ ದರ ಏರಿಕೆಯಿಂದ ಸರ್ಕಾರದ ಖಜಾನೆಗೆ ಸುಮಾರು 600 ಕೋಟಿ ರೂಪಾಯಿಗಳು ಹೆಚ್ಚುವರಿಯಾಗಿ ಹರಿದು ಬರಲಿದೆ, ಆದರೆ ಪ್ರಯಾಣಿಕರ ಕಷ್ಟಗಳು ಮಾತ್ರ ಅಬಾಧಿತವಾಗಿ ಮುಂದುವರಿಯಲಿವೆ.

ಪ್ರಯಾಣ ದರದ ಈ ಏರಿಕೆಯನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ. ಈ ದರ ಏರಿಕೆಯನ್ನು ತಡೆಹಿಡಿಯಲು ಮಾತ್ರವಲ್ಲದೆ, ಅಸ್ತಿತ್ವದಲ್ಲಿರುವ ಪ್ರಯಾಣ ವೆಚ್ಚವನ್ನು ಕಡಿಮೆ ಮಾಡಲು ಮತ್ತು ಪ್ರಯಾಣಿಕರ ಸುರಕ್ಷತೆ, ಸಮಯಪಾಲನೆ ಹಾಗೂ ಸೂಕ್ತ ಸೌಲಭ್ಯಗಳನ್ನು ಖಚಿತಪಡಿಸಿಕೊಳ್ಳಲು ಪ್ರಬಲ ಚಳವಳಿಯನ್ನು ರೂಪಿಸಲು ಸಾರ್ವಜನಿಕರು ಹೋರಾಟ ಕಟ್ಟಬೇಕು ಹಾಗೂ ಇದಕ್ಕಾಗಿ ಪ್ರಯಾಣಿಕರ ಸಮಿತಿಗಳನ್ನು ರಚಿಸಬೇಕೆಂದು ನಾವು ಕರೆ ನೀಡುತ್ತೇವೆ."

---

## 'ಚಿತ್ರದುರ್ಗದ ಸಾಂಸ್ಕೃತಿಕ ಜನೋತ್ಸವ'




ಪ್ರೊಗ್ರೆಸಿವ್ ಕಲ್ಚರಲ್ ಅಸೋಸಿಯೇಷನ್ ಆಫ್ ಇಂಡಿಯಾ(ಪಿಸಿಎಐ)ಗೆ ಸಂಯೋಜಿತವಾಗಿರುವ ಆವಿಷ್ಕಾರ ಪ್ರಗತಿಪರ ಸಾಂಸ್ಕೃತಿಕ ವೇದಿಕೆಯು ಮೂರು ದಿನಗಳ ಚಿತ್ರದುರ್ಗ ಜಿಲ್ಲಾ ಸಾಂಸ್ಕೃತಿಕ ಜನೋತ್ಸವವನ್ನು ಹಮ್ಮಿಕೊಂಡಿತ್ತು. ಮಹಾನ್ ಮಾನವತಾವಾದಿ ಸಾಹಿತಿ ಶರತ್‌ಚಂದ್ರ ಚಟರ್ಜಿ ಅವರ 150ನೇ ಜನ್ಮ ವಾರ್ಷಿಕ ಸಂದರ್ಭದಲ್ಲಿ ಈ ಸಾಂಸ್ಕೃತಿಕ ಜನೋತ್ಸವವನ್ನು ಆ ಮಹಾನ್ ಸಾಹಿತಿಗೆ ಸಮರ್ಪಿಸಲಾಗಿತ್ತು. ಹೈಕೋರ್ಟ್‌ನ ನಿವೃತ್ತ ನ್ಯಾಯಾಧೀಶರಾದ ನ್ಯಾಯಮೂರ್ತಿ ಎಚ್. ಬಿಲ್ಲಪ್ಪ ಅವರು ಸಾಂಸ್ಕೃತಿಕ ಉತ್ಸವವನ್ನು ಡಿ.13 ರಂದು ಹೊಸದುರ್ಗದಲ್ಲಿ ಉದ್ಘಾಟಿಸಿದರು. ಪ್ರಗತಿಪರ ಗೀತಗಾಯನ, ನೃತ್ಯ–ಕಾವ್ಯ–ಕುಂಚ, 'ಮರೆಯಲಾಗದ ಮರದವ್ವ' ಕಿರುನಾಟಕ, ರಂಗಗೀತೆಗಳು, ಏಸೂರು ಕೊಟ್ಟರೂ ಈಸೂರು ಬಿಡೆವು ನಾಟಕಗಳನ್ನು ಪ್ರದರ್ಶಿಸಲಾಯಿತು. ದುರ್ಗದ ಜನೋತ್ಸವದ ಅಂಗವಾಗಿ ಡಿ. 14 ಮತ್ತು 15ರಂದು ಚಿತ್ರದುರ್ಗದ ರೋಟರಿ ಬಾಲ ಭವನದಲ್ಲಿ ಚಲನಚಿತ್ರೋತ್ಸವ ನಡೆಯಿತು.

Registered Newspaper
Karmika Drushtikona RNI. KARKAN/45551/88 Reg. No. CPMG/KA/BGW-62/2021-2023. Posted at Bangalore PSO, Mysore Road, Bangalore-26 (20th & 25th of every month)

## ಸಿಪಿಐ ಪಕ್ಷದ ಶತಮಾನೋತ್ಸವದಲ್ಲಿ ಎಸ್‌ಯುಸಿಐ(ಸಿ)

ಡಿ.10ರಂದು ಬೆಂಗಳೂರಿನ ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಸಭಾಂಗಣದಲ್ಲಿ ನಡೆದ ಭಾರತ ಕಮ್ಯುನಿಸ್ಟ್ ಪಕ್ಷ(ಸಿಪಿಐ)ದ ಸ್ಥಾಪನಾ ಶತಮಾನೋತ್ಸವದ ಸಮಾರೋಪ ಸಭೆಯನ್ನು ಉದ್ದೇಶಿಸಿ ಎಸ್‌ಯುಸಿಐ(ಸಿ) ರಾಜ್ಯ ಕಾರ್ಯದರ್ಶಿಗಳಾದ ಕಾಮ್ರೇಡ್ ಕೆ.ಉಮಾ ಮಾತನಾಡಿದರು. ಸಿಪಿಐ, ಸಿಪಿಐ(ಎಂ), ಸಿಪಿಐ(ಎಂಎಲ್), ಫಾರ್ವರ್ಡ್‌ಬ್ಲಾಕ್ ಹಾಗೂ ಇತರ ಪಕ್ಷಗಳ ಮುಖಂಡರು ವೇದಿಕೆಯಲ್ಲಿದ್ದರು.




## 'ವಿಕಸಿತ್ ಭಾರತ್ ಶಿಕ್ಷಾ ಅಧಿಷ್ಠಾನ್ ಮಸೂದೆ, 2025'ಗೆ ಎಸ್‌ಯುಸಿಐ(ಸಿ) ವಿರೋಧ

**ಎಸ್‌ಯುಸಿಐ(ಸಿ) ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಕಾಮ್ರೇಡ್ ಪ್ರವಾಷ್ ಘೋಷ್ ಡಿ.16ರಂದು ಈ ಕೆಳಗಿನ ಹೇಳಿಕೆಯನ್ನು ನೀಡಿದರು:**

"ಉನ್ನತ ಶಿಕ್ಷಣಕ್ಕಾಗಿ ಒಂದೇ ನಿಯಂತ್ರಕ ಸಂಸ್ಥೆಯನ್ನು (single umbrella regulator) ರಚಿಸಲು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಸಂಸತ್ತಿನಲ್ಲಿ ಮಂಡಿಸಿರುವ 'ವಿಕಸಿತ್ ಭಾರತ್ ಶಿಕ್ಷಾ ಅಧಿಷ್ಠಾನ್ ಮಸೂದೆ, 2025'ನ್ನು ನಾವು ತೀವ್ರವಾಗಿ ವಿರೋಧಿಸುತ್ತೇವೆ. ಇದು ಅಸ್ತಿತ್ವದಲ್ಲಿರುವ ಸಂಸ್ಥೆಗಳಾದ ವಿಶ್ವವಿದ್ಯಾಲಯ ಧನಸಹಾಯ ಆಯೋಗ (UGC), ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (AICTE) ಮತ್ತು ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಮಂಡಳಿ (NCTE)ಗಳನ್ನು ವಿಲೀನಗೊಳಿಸಿ, ಅವುಗಳ ಬದಲಿಗೆ ಅಸ್ತಿತ್ವಕ್ಕೆ ಬರಲಿದೆ. ಇದು ದೇಶದಲ್ಲಿ ಇನ್ನೂ ಉಳಿದಿರುವ ಅಲ್ಪಸ್ವಲ್ಪ ಶೈಕ್ಷಣಿಕ ಸ್ವಾಯತ್ತತೆಯನ್ನು ನಿರ್ನಾಮ ಮಾಡುವ ಮತ್ತು ಆ ಮೂಲಕ ಶಿಕ್ಷಣದ ಮೇಲೆ ಸರ್ಕಾರದ ಸಂಪೂರ್ಣ ನಿಯಂತ್ರಣವನ್ನು ಸ್ಥಾಪಿಸುವ ಹೀನ ಸಂಚಾಗಿದೆ. ಈ ಅಪಾಯಕಾರಿ ನಡೆಯ ವಿರುದ್ಧ ಒಗ್ಗಟ್ಟಿನ ಪ್ರತಿಭಟನೆಯ ದನಿಯನ್ನು ಎತ್ತಲು ಮತ್ತು ಸಂಘಟಿತ ಹೋರಾಟದ ಒತ್ತಡದ ಮೂಲಕ ಸರ್ಕಾರವು ಈ ನಿರ್ಧಾರದಿಂದ ಹಿಂದೆ ಸರಿಯುವಂತೆ ಮಾಡಲು, ನಾವು ಎಲ್ಲಾ ಶಿಕ್ಷಕರು, ವಿದ್ಯಾರ್ಥಿಗಳು, ಶಿಕ್ಷಣ ತಜ್ಞರು, ಬುದ್ಧಿಜೀವಿಗಳು ಮತ್ತು ಶಿಕ್ಷಣ ಪ್ರೇಮಿಗಳಿಗೆ ಕರೆ ನೀಡುತ್ತೇವೆ."

## ವಿಜಯಪುರ: ಸರ್ಕಾರಿ ವೈದ್ಯಕೀಯ ಕಾಲೇಜು ಹೋರಾಟಗಾರರ ಬಂಧನ : ಎಸ್‌ಯುಸಿಐ(ಸಿ) ಖಂಡನೆ

"ವಿಜಯಪುರದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜಿಗಾಗಿ ಆಗ್ರಹಿಸಿ ಜಿಲ್ಲಾ ಉಸ್ತುವಾರಿ ಸಚಿವರ ಮನೆ ಮುಂದೆ ಧರಣಿ ನಡೆಸಲು ಮುಂದಾದ ಹೋರಾಟಗಾರರನ್ನು ಬಂಧಿಸಿ, ಸುಳ್ಳು ಮೊಕದ್ದಮೆ ದಾಖಲಿಸಿರುವ ಕ್ರಮವನ್ನು ಎಸ್‌ಯುಸಿಐ(ಸಿ) ಪಕ್ಷದ ಕರ್ನಾಟಕ ರಾಜ್ಯ ಸಮಿತಿಯು ಖಂಡಿಸುತ್ತದೆ. ಹೋರಾಟದ ಮುಂದಿನ ಭಾಗವಾಗಿ ಜಿಲ್ಲಾ ಉಸ್ತುವಾರಿ ಸಚಿವರ ಮನೆ ಮುಂದೆ ಧರಣಿ ನಡೆಸಲು ಪ್ರತಿಭಟನಾಕಾರರು ಮುಂದಾದಾಗ ತಳ್ಳಾಟ ನಡೆದ ಘಟನೆ ವರದಿಯಾಗಿದೆ. ಒಂದು ಜನಪರ ಹೋರಾಟದ ಸಂದರ್ಭದಲ್ಲಿ ನಡೆಯುವ ಯಾವುದೇ ಪ್ರಕರಣವನ್ನು ಮಾತುಕತೆ ಮೂಲಕ ಪರಿಹರಿಸುವ ಬದಲು ಕೊಲೆಯತ್ನ, ಕೊಲೆ ಬೆದರಿಕೆ, ಅಕ್ರಮಕೂಟ ಮುಂತಾದ ಕರಾಳ ಸೆಕ್ಷನ್‌ಗಳ ಅಡಿಯಲ್ಲಿ ಸ್ವಾಮೀಜಿ ಜೊತೆಗೆ, ಹೆಣ್ಣು ಮಕ್ಕಳನ್ನೂ ಸೇರಿಸಿ ಇತರ ಹೋರಾಟಗಾರರ ಮೇಲೂ ಕೇಸು ಹಾಕಿ ಡಿ. 1 ರಂದು ನ್ಯಾಯಾಂಗ ಬಂಧನಕ್ಕೆ ಅವರನ್ನು ಒಪ್ಪಿಸಲಾಗಿದೆ. ಇದು ಈ ಜನಪರ ಹೋರಾಟವನ್ನು ಹತ್ತಿಕ್ಕುವ ಪಿತೂರಿಯಲ್ಲದೆ ಬೇರೇನೂ ಅಲ್ಲ. ಆದ್ದರಿಂದ, ಆ ಕೇಸುಗಳನ್ನು ರದ್ದುಪಡಿಸಿ, ವಿನಾಕಾರಣ ಬಂಧಿತರಾಗಿರುವ ಅನಿಲ್ ಹೊಸಮನಿ, ಭಗವಾನ್ ರೆಡ್ಡಿ ಹಾಗೂ ಎಲ್ಲ 27 ಹೋರಾಟಗಾರರ ಮೇಲಿನ ಸುಳ್ಳು ಮೊಕದ್ದಮೆಗಳನ್ನು ಕೈಬಿಡಬೇಕು ಮತ್ತು ವಿಜಯಪುರದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪಿಸಬೇಕೆಂಬ ನ್ಯಾಯಯುತ ಆಗ್ರಹವನ್ನು ಈಡೇರಿಸಬೇಕೆಂದು ಎಸ್‌ಯುಸಿಐ(ಸಿ) ರಾಜ್ಯ ಸಮಿತಿಯು ಕರ್ನಾಟಕ ರಾಜ್ಯ ಸರ್ಕಾರವನ್ನು ಒತ್ತಾಯಿಸುತ್ತದೆ."

### ಸರ್ಕಾರಿ ಮೆಡಿಕಲ್ ಕಾಲೇಜು ಹೋರಾಟ ಯಶಸ್ವಿ!

**ಎಸ್‌ಯುಸಿಐ(ಸಿ) ಅಭಿನಂದನೆಗಳು**

115 ದಿನಗಳ ಎಡಬಿಡದ ಸರ್ಕಾರಿ ಮೆಡಿಕಲ್ ಕಾಲೇಜು ಸ್ಥಾಪನೆಗಾಗಿನ ಜನ ಹೋರಾಟವು ಯಶ ಕಂಡಿದೆ. ಈ ಹೋರಾಟದ ನೇತೃತ್ವದಲ್ಲಿ ನಮ್ಮ ಪಕ್ಷದ ವಿಜಯಪುರ ಜಿಲ್ಲಾ ಕಾರ್ಯದರ್ಶಿಗಳು ಹಾಗೂ ನಮ್ಮ ಮುಂದಳವಾದ ಎಐಕೆಕೆಎಂಎಸ್ ರಾಜ್ಯ ಕಾರ್ಯದರ್ಶಿಗಳೂ ಆದ ಕಾಮ್ರೇಡ್ ಭಗವಾನ್ ರೆಡ್ಡಿಯವರೂ ಸೇರಿದಂತೆ ಇತರ ಸಂಘಟನೆಗಳ ಹಲವು ಮುಖಂಡರನ್ನು ಬಂಧಿಸಿ ಕಾರಾಗೃಹದಲ್ಲಿ ಇಡಲಾಗಿದೆ. ಕಳೆದ 13 ದಿನಗಳಿಂದ ಜೈಲಿನಲ್ಲಿರುವ ಅವರ ಬಿಡುಗಡೆ ಇನ್ನೂ ಆಗಬೇಕಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಜ.9ರಂದು ವಿಜಯಪುರದಲ್ಲಿ ಸರ್ಕಾರಿ ಕಾಲೇಜನ್ನು ಸ್ಥಾಪಿಸುವ ವಾಗ್ದಾನವನ್ನು ನೀಡುವ ಮೂಲಕ ಜನಹೋರಾಟದ ಫಲವಾಗಿ ಈ ವಿಜಯ ಲಭಿಸಿದೆ. ಈ ಯಶಸ್ಸಿಗೆ ಕಾರಣರಾದವರೆಲ್ಲರಿಗೂ ಎಸ್‌ಯುಸಿಐ(ಸಿ) ರಾಜ್ಯ ಸಮಿತಿಯು ಕ್ರಾಂತಿಕಾರಿ ಅಭಿನಂದನೆಗಳನ್ನು ಸಲ್ಲಿಸುತ್ತದೆ.

## ಕನಿಷ್ಠ ನಾಗರಿಕ ಸೌಲಭ್ಯಗಳಿಗೆ ಒತ್ತಾಯಿಸಿ ಶಹಾಬಾದ್‌ನಲ್ಲಿ ಪ್ರತಿಭಟನೆ

ಶಹಾಬಾದ್‌ನಲ್ಲಿರುವ ಅಲಸ್ಟಮ್ ಕಂಪನಿಯ ಹಿಂದುಗಡೆ ಇರುವ ಆಶ್ರಯ ಕಾಲೋನಿ ರಾಮಗಡ ಪ್ರದೇಶದಲ್ಲಿ ಸ್ಥಳೀಯರು ಎಸ್‌ಯುಸಿಐ(ಸಿ) ಪಕ್ಷದ ಸ್ಥಳೀಯ ಸಮಿತಿಯ ನೇತೃತ್ವದಲ್ಲಿ ಡಿ.22ರಂದು ಪ್ರತಿಭಟನೆ ನಡೆಸಿದರು. ಪಕ್ಷದ ರಾಜ್ಯ ಸಮಿತಿ ಸದಸ್ಯರಾದ ಕಾಮ್ರೇಡ್ ವಿ.ಎನ್. ರಾಜಶೇಖರ್ ಪ್ರತಿಭಟನಾ ಸಭೆಯಲ್ಲಿ ಭಾಗವಹಿಸಿದ್ದರು.




## ಅಂತರರಾಷ್ಟ್ರೀಯ ಮಾನವ ಹಕ್ಕುಗಳ ದಿನವನ್ನು ಆಚರಿಸಿದ ಸಿಪಿಡಿಆರ್‌ಎಸ್

ಸೆಂಟರ್ ಫಾರ್ ಪ್ರೊಟೆಕ್ಷನ್ ಆಫ್ ಡೆಮಾಕ್ರಟಿಕ್ ರೈಟ್ಸ್ ಅಂಡ್ ಸೆಕ್ಯುಲರಿಸಂ(ಸಿಪಿಡಿಆರ್‌ಎಸ್) ಕರ್ನಾಟಕ ಘಟಕವು ಅಂತರರಾಷ್ಟ್ರೀಯ ಮಾನವ ಹಕ್ಕುಗಳ ದಿನವಾದ ಡಿ.10ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಸಭೆಯೊಂದನ್ನು ಆಯೋಜಿಸಿತ್ತು. ನಗರದ ಹಲವು ಕಾನೂನು ಕಾಲೇಜುಗಳಿಂದ ನೂರಾರು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸಭೆಯಲ್ಲಿ ಭಾಗವಹಿಸಿದ್ದವರು ಮಾನವ ಹಕ್ಕುಗಳನ್ನು ಎತ್ತಿಹಿಡಿಯುವುದಾಗಿ ಪ್ರತಿಜ್ಞೆ ಮಾಡಿದರು.

ಈ ಸಂದರ್ಭದಲ್ಲಿ ಸಿಪಿಡಿಆರ್‌ಎಸ್ ರಾಜ್ಯ ಸಂಚಾಲಕರಾದ ಕಾಮ್ರೇಡ್ ಎಂ.ಎನ್.ಶ್ರೀರಾಮ್, ಅಂತರರಾಷ್ಟ್ರೀಯ ಮಾನವ ಹಕ್ಕುಗಳ ದಿನದ ಐತಿಹಾಸಿಕ ಮಹತ್ವದ ಕುರಿತು ಮಾತನಾಡಿದರು. ವಿಶ್ವ ಆರ್ಥಿಕತೆಯ ಬಿಕ್ಕಟ್ಟಿನಿಂದಾಗಿ, ಪ್ರಪಂಚದಾದ್ಯಂತ ಮಾನವ ಹಕ್ಕುಗಳನ್ನು ಯಾವುದೇ ತಡೆ ಇಲ್ಲದೆ ಉಲ್ಲಂಘನೆ ಮಾಡಲಾಗುತ್ತಿದೆ ಎಂದು ಅವರು ಹೇಳಿದರು. ಗಾಜಾ ಮೇಲಿನ ಯುದ್ಧವು ಮಾನವ ಹಕ್ಕುಗಳನ್ನು ದಮನಿಸುತ್ತಾ ಸಾಮ್ರಾಜ್ಯಶಾಹಿ ಪ್ರಪಂಚದ ಆಷಾಢಭೂತಿತನವನ್ನು ಬಹಿರಂಗಪಡಿಸಿದೆ ಎಂದು ಅವರು ಹೇಳಿದರು.

ಸಿಪಿಡಿಆರ್‌ಎಸ್‌ನಿಂದ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಜ್ಞಾ ವಿಧಿ



Published by: K.Uma on behalf of SOCIALIST UNITY CENTRE OF INDIA (COMMUNIST), Karnataka State Committee, No.31, 3rd Cross, Malleswaram, Bangalore-03 Ph: 080-23561443. E-mail: karmikadrushtikona@gmail.com and Printed at : MNS Printers Private Limited, 345/4, Bhattarahalli, Old Madras Road, Bengaluru, Karnataka - 560 049. Website: www.sucic.org & www.sucic-karnataka.org EDITOR: K.Uma